27TH YEAR OF PUBLICATION. PHONE 728 ಬೆಲೆ: ಎರಡಾಣೆ.

ಪ್ರಭಾತ

ಸಂಪುಟ: ೨೭. ಸಂಚಿಕೆ: ೪೨. 26—11—1961 Vol. XXVII. No. 42.

PRABHAT ✻ KANNADA WEEKLY ✻ MANGALORE

ಅಭಿಷೇಚನೀಯ ಕರ್ಮಾಂಗದಿನ ಮಹರ್ಷಿಗಳು, ಬ್ರಾಹ್ಮಣರು, ರಾಜರು ಸಹಿತ ಎಲ್ಲರೂ ಯಜ್ಞಭವನವನ್ನು ಪ್ರವೇಶಿಸಿದರು. ಯಜ್ಞಕಾರ್ಯಗಳು ಹೀಗೆ ಆಗಬೇಕು ಎಂಬ "ಹಾಗಾಗ ಬಾರದು" ಎಂಬ ವಿತಂಡವಾದಿಗಳ ವಿವಾದಗಳು ವೇದಿಕೆಯಲ್ಲಿ ನಡೆಯುತ್ತಿದ್ದವು. ನಕ್ಷತ್ರಮಾಲೆಗಳಿಂದ ಮಂಡಿತವಾದ ವಿಶಾಲ ಗಗನಮಂಡಲವು ಶೋಭಿಸುವಂತೆ, ದೇವರ್ಷಿಗಳು, ಬ್ರಹ್ಮರ್ಷಿಗಳು ಮತ್ತು ವೇದವೇದಾಂಗ ಪಾರಂಗತರಾದ ವಿಪ್ರವರ್ಯರಿಂದ ಆ ವೇದಿಕೆಯು ಸುಶೋಭಿಸುತ್ತಿತು.

ನ ತಸ್ಯಾಂ ಸಂನಿಧೌ ಶೂದ್ರಃ
ಕಶ್ಚಿದಾಸೀನ್ನ ಚಾವ್ರತೀ ।
ಅಂತರ್ವೇದ್ಯಾಂ ತದಾ ರಾಜನ್
ಯುಧಿಷ್ಠಿರನಿವೇಶನೇ ॥ ೩೫-೯.

ಜನಮೇಜಯ ರಾಜನೆ! ಕೇಳು, ಎಂದು ವೈಶಂಪಾಯನು ಮಹಾಭಾರತ ಕಥೆಯನ್ನು ಹೇಳುತ್ತಾ ಹೀಗೆಂದನು: ಯುಧಿಷ್ಠಿರನ ಈ ಯಜ್ಞಶಾಲೆಯಲ್ಲಿ, ಈ ಅಂತವೇದಿಕೆಯ ಸಮೀಪದಲ್ಲಾಗಲಿ, ಶೂದ್ರನಾಗಲಿ, ವ್ರತಹೀನ ದ್ವಿಜನಾಗಲಿ ಇರಲಿಲ್ಲ. ನೆರೆದ ವಿಪ್ರರಾಜಸ್ತೋಮದ ಮುಂದೆ ಅಂಜಲಿಬದ್ಧನಾಗಿ ಧರ್ಮರಾಯನು ಈ ಪ್ರಕಾರ ನಿವೇದಿಸಿದನು: "ಕುರುನಂದನ ಪಿತಾಮಹ! ಇಲ್ಲಿ ವಿರಾಜಿಸುತ್ತಿರುವ ನರೇಶರಲ್ಲಿ ಯಾರಿಗೆ ಅಗ್ರಸ್ಥಾನದಲ್ಲಿ ಅರ್ಘ್ಯವನ್ನು ನಾನು ಅರ್ಪಿಸಬೇಕೆಂದು ತಾವು ಆಜ್ಞಾಪಿಸಬೇಕು."

ಆ ಮಾತಿಗೆ ಭೀಷ್ಮಪಿತಾಮಹನು ಸಿಂಹ ಗರ್ಜನೆಯಂತೆ ಆ ಸಭಾಮಧ್ಯ ಹೀಗೆಂದನು:

"ಕುಂತೀನಂದನ! ಗ್ರಹನಕ್ಷತ್ರರಾಶಿಯಲ್ಲಿ ಭಗವಾನ್ ಸೂರ್ಯನು ಪ್ರಜ್ವಲಿಸುವಂತೆ, ಈ ಸಮಗ್ರ ರಾಜಶ್ರೇಷ್ಠರಲ್ಲಿ ಪ್ರಕಾಶಿಸುತ್ತಿರುವ ಭಗವಾನ್ ಶ್ರೀಕೃಷ್ಣನೇ ಅಗ್ರಪೂಜೆಗೆ ಅರ್ಹನಾಗಿರುವನು"

ಲೇಖಾಂಕ ೩೨.

ಮಹಾಭಾರತ ಕಥಾಮೃತ

(ಲೇಖಕ: ಶ್ರೀ ಕೊ. ಶ. ಕಾರಂತ, ಬಿ.ಎ., ಬಿ.ಎಲ್., ಎಡ್ವೊಕೇಟ್, ಮಂಗಳೂರು.)

ಭಗವಾನ್ ಶ್ರೀ ಕೃಷ್ಣನಿಗೆ ಅಗ್ರಪೂಜೆ

ಈ ಪ್ರಕಾರ ಭೀಷ್ಮನು ಆಜ್ಞಾಪಿಸಲಾಗಿ, ವೃಷ್ಣೀಕುಲಭೂಷಣ ಪ್ರತಾಪಿ ಭಗವಾನ್ ಶ್ರೀಕೃಷ್ಣನಿಗೆ ವಿಧಿಪೂರ್ವಕ ಉತ್ತಮ ಅರ್ಘ್ಯವನ್ನು ಯುಧಿಷ್ಠಿರನು ಸಮರ್ಪಿಸಿದನು. ಭಗವಂತನು ಈ ಪೂಜೆಯನ್ನು ಸ್ವೀಕರಿಸಿದನು. ಆದರೆ, ಚೇದಿರಾಜ ಶಿಶುಪಾಲನು ಇದನ್ನು ಸಹಿಸದೆ ಸಭಾಮಧ್ಯ ಈ ಪ್ರಕಾರ ಆಕ್ಷೇಪಿಸಿದನು.

"ಕೌರವ! ಈ ಸಭೆಯಲ್ಲಿ ಉತ್ತಮ ಮುಕುಟಧಾರಿಗಳಾದ ನೃಪೋತ್ತಮರಿರುವಾಗ ಕೃಷ್ಣನು ರಾಜೋಚಿತ ಅಗ್ರಪೂಜೆಗೆ ಎಂದೂ ಅರ್ಹನಾಗನು. ಭೀಷ್ಮ! ನೀವು ವೃದ್ಧಾಪ್ಯದ ದೆಸೆಯಿಂದ ಈ ಪ್ರಕಾರ ನುಡಿದಿರಿ. ಯದುವಂಶದಲ್ಲಿ ಕೃಷ್ಣನು ರಾಜನಾಗಿರುವುದಿಲ್ಲ ಎಂಬುದಾಗಿ ಎಲ್ಲರಿಗೂ ತಿಳಿದ ವಿಚಾರವು. ಅಂದಮೇಲೆ ಅವನೆಂತು ಅಗ್ರಪೂಜೆಗೆ ಅರ್ಹನಾಗಿರುವನು? ಪಿತನಾದ ವೃದ್ಧ ವಸುದೇವನಿರುವಾಗ ಪುತ್ರನೆಂತು ಪೂಜೆಗೆ ಪಾತ್ರನಾಗುವನು? ಕೃಷ್ಣನು ನಿಮಗೆ ಹಿತಬಯಸುವನೆಂದು ಹೇಳಿರುವೆಯಾದರೆ ನಿಜಕ್ಕೂ ಅತ್ಯಂತ [illegible]ಂತಕ ರಾಜದ್ರುಪದಗೆ ಆ ಗೌರವ [illegible]ಲ್ಲತಕ್ಕದ್ದಾಗಿದೆ. ರಾಜನಲ್ಲದ ಕೃಷ್ಣನಿಗೆಂತು ಪೂಜಾಧಿಕಾರ? ಆಚಾರ್ಯರಲ್ಲಿ ಶ್ರೇಷ್ಠರಾದ ದ್ರೋಣಾಚಾರ್ಯರಿರುವಾಗ ಯದುಕುಲಕ್ಕೆ ಹೇಗೆ ಸೂಚಿಸಿದಿರಿ? ಕೃಷ್ಣನು ಋತ್ವಿಜನೆಂದು ಭಾವಿಸಿದಿರಾ? ಹಾಗಾದರೆ ಈ ವೇದಿಕೆಯಲ್ಲಿ ರಾರಾಜಿಸುವ ವೇದವ್ಯಾಸರಿಗೆ ಆ ಸನ್ಮಾನವು ದೊರೆಯಬೇಕಲ್ಲದೆ ಕೃಷ್ಣನಿಗಲ್ಲ. ನೀವು ಸರ್ವಶಾಸ್ತ್ರಗಳಲ್ಲಿ ನಿಪುಣ ವಿದ್ವಾಂಸರಂತೆ! ಅಶ್ವತ್ಥಾಮ ಇಲ್ಲವೆ, ಪುರುಷಪ್ರವರ ರಾಜಾಧಿರಾಜ ದುರ್ಯೋಧನ, ಮಹಾತ್ಮಾ ಕೃಪಾಚಾರ್ಯ, ಭೀಷ್ಮಕ, ರುಕ್ಮೀ, ಧನುರ್ಧರ, ಏಕಲವ್ಯ, ಮದ್ರರಾಜ ಇವರಲ್ಲಿ ಯಾರನ್ನಾದರೂ ಹೇಳದೆ ಕೃಷ್ಣನಲ್ಲಿ ಏನು ಔಚಿತ್ಯವಿದೆ? ಪರಶುರಾಮನ ಪ್ರಿಯ ಶಿಷ್ಯ, ಪೃಥ್ವಿರಾಜರಲ್ಲಿ ಸರ್ವಶ್ರೇಷ್ಠ ಮಹಾರಥಿ ಕರ್ಣನನ್ನು ಬಿಟ್ಟು ಕೃಷ್ಣನನ್ನು ಹೇಗೆ ಸೂಚಿಸಿದಿರಿ?"

ನೈವರ್ತ್ವಿಗ ನೈವ ಚಾಚಾರ್ಯೋ
ನ ರಾಜಾ ಮಧುಸೂದನಃ ।
ಅರ್ಚಿತಶ್ಚ ಕುರುಶ್ರೇಷ್ಠ
ಕಿಮನ್ಯತ್ಪ್ರಿಯ ಕಾಮ್ಯಯಾ ॥ ೩೬-೯೭

ಕುರುಶ್ರೇಷ್ಠ! ಕೃಷ್ಣನು ಋತ್ವಿಜನು ಅಲ್ಲ, ಆಚಾರ್ಯನು ಅಲ್ಲ, ರಾಜನಂತೂ ಅಲ್ಲ. ಕೃಷ್ಣನಲ್ಲಿ ಯಾವ ಶ್ರೇಷ್ಠತೆಯನ್ನು ನೋಡಿ ಅಗ್ರಪೂಜೆಗೆ ಹೇಳಿಬಿಟ್ಟಿರಿ?

ಯುಧಿಷ್ಠಿರ! ಇದಕ್ಕಿಂತ ದೊಡ್ಡ [illegible]ಮಾನವನ್ನು ನೀನು ಮಾಡಬೇಕಾಗಿಲ್ಲ. ಧರ್ಮಪ್ರವೃತ್ತ ಕ್ಷತ್ರಿಯನಾದ ನೀನು ಸಮ್ರಾಟ್ ಪದವಿಯನ್ನು ಅಪೇಕ್ಷಿಸುವಿಯೆಂದು ನಾವು ಕರವನ್ನು ಅರ್ಪಿಸಿದೆವು. ರಾಜೋಚಿತ ಯಾವ ಚಿಹ್ನೆಗಳಿಲ್ಲದ ಕೃಷ್ಣನಿಗೆ ಅರ್ಘ್ಯವನ್ನಿತ್ತು ನಮ್ಮೆಲ್ಲರನ್ನೂ ಅವಮಾನಿಸಿದಿ. ಇದಕ್ಕಾಗಿ ನಮ್ಮೆಲ್ಲರನ್ನು ಆಮಂತ್ರಿಸಿರುವುದೇ? ವೃಷ್ಣಿಕುಲದಲ್ಲಿ ಜನಿಸಿದ ಈ ದುರಾತ್ಮನು ಕೆಲವು ದಿನಗಳ ಹಿಂದೆ ರಾಜ ಜರಾಸಂಧನನ್ನು ಮೋಸದಿಂದ ಸಂಹರಿಸಿರುವನು. ಇಂದು ನಿನ್ನ ಧರ್ಮಾತ್ಮತೆಯು ವಿನಾಶಗೊಂಡಿತು. ಇಂದು ಆ ಕೃಷ್ಣನಿಗೆ ಅರ್ಘ್ಯವನ್ನಿತು ನಿನ್ನ ಕೃಪಣತ್ವವನ್ನು ಚೆನ್ನಾಗಿ ಪ್ರದರ್ಶಿಸಿರುವೆ.

ಕೃಷ್ಣ, ನೀನು ಮಾಧವನಂತೆ! ಕುಂತೀನಂದನ ಯುಧಿಷ್ಠಿರನು ಭಯಭೀತ ಮತ್ತು ಕೃಪಣ ತಪಸ್ವಿಯು. ನಿನ್ನನ್ನು ಚೆನ್ನಾಗಿ ತಿಳಿಯದೆ ಪೂಜೆಗೈದನು. ಆದರೆ, ನೀನು ಅಗ್ರಪೂಜೆಗೆ ಎಂತಹ ಅಧಿಕಾರಿಯೆಂದು ಯೋಚಿಸಬೇಡವೆ? ನೀನಂತೂ ಯಾವ ಸೌಭಾಗ್ಯದವನೆಂದು ಸ್ವೀಕರಿಸಿದಿ?

ಅಯುಕ್ತಾಮಾತ್ಮನಃ ಪೂಜಾಂ
ತ್ವಂ ಪುನರ್ಬಹುಮನ್ಯಸೇ
ಹವಿಷಃ ಪ್ರಾಪ್ಯ ನಿಷ್ಯಂದಂ
ಪ್ರಾಶಿತಾ ಶ್ವೇವ ನಿರ್ಜನೇ ॥ ೩೭-೨೭

ಕಳ್ಳತನದಿಂದ ಯಜ್ಞವೇದಿಕೆಯನ್ನು ಪ್ರವೇಶಿಸಿ, ಹವಿಸ್ಸು ಪಾತ್ರೆಯನ್ನು ಕಚ್ಚಿಕೊಂಡು ಓಡಿಹೋಗಿ ನಾಯಿಯು ತಾನು ಧನ್ಯಧನ್ಯನೆಂದು ಆ ಪಾತ್ರೆಯನ್ನು ನೆಕ್ಕುವಂತೆ ಅಯೋಗ್ಯ ಅಪಾತ್ರನಾದ ನೀನು ಅಗ್ರಪೂಜೆಯನ್ನು ಸ್ವೀಕರಿಸಿ ಬಹಳ ಭಾಗ್ಯಶಾಲಿ ಎಂದು ತಿಳಿದಿರುವಂತೆ ಭಾಸವಾಗುತ್ತಿದೆ. ಅಂಧನು ಸೃಷ್ಟಿಸೌಂದರ್ಯವನ್ನು ನೋಡಬೇಕೆಂದು ಹಂಬಲಿಸುವಂತೆ, ನೀನು ರಾಜ್ಯಹೀನನಾಗಿ ರಾಜನಂತೆ ನಟಿಸಿ ಈ ಅಗ್ರಪೂಜೆ ಪಡೆದ ವಿಡಂಬನವನ್ನು ಪ್ರದರ್ಶಿಸಿ ಸಂತೃಪ್ತನಾಗಿಬಿಟ್ಟೆಯಾ?"

ಈ ಪ್ರಕಾರ ಭಗವಂತನನ್ನು ನಿಂದಿಸಿ ಶಿಶುಪಾಲನು ಕೆಲವು ರಾಜರೊಡನೆ ಸಭಾತ್ಯಾಗಮಾಡಬೇಕೆಂದು ಉದ್ಯತನಾದನು.

ನಿರ್ಯಯೌ ಸದಸಸ್ತಸ್ಮಾತ್
ಸಹಿತೋ ರಾಜಭಿಸ್ತದಾ ॥ ೩೭-೩೧.

ಶಾಸನಸಭೆಯಲ್ಲಿ ಸದಸ್ಯರ ಸಭಾತ್ಯಾಗ ಮಾಡುವ (Walk out) ಆಧುನಿಕ ಚಮತ್ಕೃತಿಯಲ್ಲ. ಶಿಶುಪಾಲನು ಇಂತಹವರಿಗೆ ಅಗ್ರೇಸರನಾಗಿರುವನು.

—o—

ನಮ್ಮ ಜಿಲ್ಲೆ

ಭೂಗತ ಚರಂಡಿ ಯೋಜನೆ: ಮಂಗಳೂರು ಮುನ್ಸಿಪಾಲಿಟಿಯೊಳಗೆ ಭೂಗತ ಚರಂಡಿ ಯೋಜನೆಯ ಕೆಲಸವು ಈಗಾಗಲೇ ಆರಂಭವಾಗಿ, ಕೆಲವು ರಸ್ತೆಗಳಲ್ಲಿ ಮೋರಿಗಳನ್ನು ಇರಿಸುವ ಕಾರ್ಯಕ್ರಮ ನಡೆಯುತ್ತಿದೆ. ಭವಂತಿ ರಸ್ತೆ ಜಂಕ್ಷನಿನಿಂದ ಕರಂಗಲ್ಪಾಡಿ ವರೆಗೆ ಮೋರಿಗಳನ್ನು ಇರಿಸುವ ಕಾರ್ಯ ಈಗ ಆರಂಭವಾಗಿದ್ದು, ಈ ಮಠಾರದಲ್ಲಿ ಬರುವ ಗಾಂಧಿಮಠ ರಸ್ತೆ, ಮುಖ್ಯಪ್ರಾಣ ರಸ್ತೆ, ರಾಮಾಂಜನೇಯ ಗಾರ್ಡನ್ಸ್, ಅಜಿಜುದ್ದೀನ್ ರೋಡ್ ಮೊದಲಾದ ಅತ್ಯಂತ ಅಗಲಕಿರಿದಾದ ರಸ್ತೆಗಳಲ್ಲಿ ವಾಹನ ಸಂಚಾರ ಅಸಾಧ್ಯವಾಗಿ ಪರಿಣಮಿಸಬಹುದಾಗಿದೆ. ಈ ಕಾರ್ಯಕ್ರಮದಲ್ಲಿ ಸಾರ್ವಜನಿಕರ ಸಹಕಾರ ನಿರೀಕ್ಷಿಸಲಾಗಿದೆ.

ಫುಟ್‌ಬೊಲ್: ಮಂಗಳೂರಿನ ನಿವೃತ್ತ ಫುಟ್‌ಬೊಲ್ ಕ್ರೀಡಾಪಟು ಶ್ರೀ ಬಿ. ಸದಾನಂದರಾಯರು ಕೆನರಾ ಫುಟ್‌ಬೊಲ್ ಎಸೋಸಿಯೇಶನಿನ ರೆಫರೀಸ್ ಕಮಿಟಿಯ ಕಾರ್ಯದರ್ಶಿಗಳಾಗಿ ಆಯ್ಕೆ ಹೊಂದಿರುವರು.

In the Court of the Principal Subordinate Judge of S. K.

R. I. A No. 1027/61 in O.S. 99/57

Between:

P. Janardhan Bhandary —Petitioner

and

M. Surendra Rao —Respondent

To

Respondent M. Surendra Rao, Prop. Modern Hindu Hotel, Chickmagalur.

Please take notice that the above final decree application has been posted to 27—11—61 at 11 A. M. for your appearance. In case you fail to appear on that day either in person or through pleader, the application will be heard and decided in your absence.

(By order of Court)

M. Venkatraya Kamath,
Advocate for Petitioner.

Mangalore, 20—11—61.

ಪ್ರಭಾತ

ಸಂಪುಟ: ೨೭. ಸಂಚಿಕೆ: ೪೨. 26—11—1961 Vol. XXVII. No. 42.

ಮತ್ತೆ ಎರಡು ಸಾವಿರ ಮೈಲುಗಳು

ಚೀನೀಯ ಸೈನಿಕರು ಲಡಖಿನಲ್ಲಿ ಮತ್ತೆರಡು ಸಾವಿರ ಚದರ ಮೈಲುಗಳಷ್ಟು ಪ್ರದೇಶವನ್ನಾಕ್ರಮಿಸಿರುವರೆಂದು ವರದಿಯಾಗಿದೆ. ಈ ವಿಷಯವಾಗಿ ಲೋಕಸಭೆಯಲ್ಲಿ ಪ್ರಶ್ನೋತ್ತರಗಳಾದಾಗ, ಪ್ರಧಾನ ಸಚಿವರು ಇದನ್ನು "ಅಯೋಗ್ಯ ನಡತೆ"ಯೆಂದರು; ಚೀನಕ್ಕೆ ನಿಷೇಧ ತಿಳಿಸಲಾಗಿದೆಯೆಂದರು; ಸಾಧ್ಯವಾದುದನ್ನು ಮಾಡಲಾಗುತ್ತಿದೆಯೆಂದರು; ಮತ್ತು ಇದಕ್ಕೂ ಹೆಚ್ಚಿನದನ್ನು ಹೇಳುವದು—ಪ್ರಕೃತ ಪರಿಸ್ಥಿತಿಯಲ್ಲಿ ಅನುಚಿತವೆಂದರು.

ಚೀನವು ಈ ಮೊದಲೇ ಆಕ್ರಮಿಸಿದ್ದ ಭಾರತದ ಪ್ರದೇಶವು ಹನ್ನೆರಡು ಸಾವಿರ ಚದರ ಮೈಲು. ಈ ವಿಷಯವನ್ನು ಭಾರತ ಸರಕಾರವು ಕೆಲಕಾಲ ಬಯಲು ಪಡಿಸದೆ, ಮತ್ತೆ ಒಪ್ಪಿತು; 'ಇದು ನ್ಯಾಯವಲ್ಲ'ವೆಂದಿತು; ಯುದ್ಧವು ಅಚಿಂತ್ಯವೆನ್ನಲಾಯಿತು. ಪಂಚಶೀಲ ತತ್ತ್ವವನ್ನೊಪ್ಪಿದ್ದ ಚೀನೀ ಭಾಯಿಗಳು ಅದನ್ನು ಕಸದಕುಪ್ಪೆಗೆ ಬಿಸುಡಿ, ಅಲಕ್ಷ್ಯದಿಂದ ಕುಳಿತರು. ಭಾರತ ಸರಕಾರವು ವಿವೇಕದಿಂದ ವಿವೇಚಿಸಿ, ಸ್ನೇಹಪರ ಮಾತುಕತೆಗಳಿಂದಲೇ ಇದನ್ನು ತೀರ್ಮಾನಮಾಡಬೇಕೆಂದಿತು. ಈ ಬಗ್ಗೆ ಯತ್ನಗಳೂ ಧಾರಾಳ ನಡೆದುವು. ಆದರೆ, ಚೀನದ ಕಮ್ಯೂನಿಸ್ಟ್ ಒಡೆಯರು ಅಹಂಕಾರವನ್ನೆ ತೋರುತ್ತ, ಎಲ್ಲವನ್ನೂ ತಿರಸ್ಕರಿಸಿದುದು ಸುಸ್ಪಷ್ಟವಿದೆ. ಭಾರತ-ಚೀನಾ ಪ್ರತಿನಿಧಿಗಳು ಒಟ್ಟಿಗೆ ಸೇರಿ ಚರ್ಚಿಸಿದುದೂ ನಿಷ್ಪ್ರಯೋಜಕವಾಗಿದೆ. ಆ ಮೇಲೆಯೂ ಚೀನವು ಆಗಾಗ್ಗೆ ಭಾರತವನ್ನು ದೂಷಿಸುವ ಕಾರ್ಯವನ್ನೆ ಏರ್ಪಡಿಸಿಕೊಂಡಿದೆ.

ಚೀನದ ಅವಜ್ಞೆ, ಅಹಂಕಾರ, ನಿಂದೆಯ ನುಡಿಗಳು ಭಾರತೀಯರನ್ನು ಕೆರಳಿಸಿ, ಭಾರತ ಸರಕಾರದ ಮೃದುತ್ವದ ವಿಷಯ ಅನೇಕರಲ್ಲಿ ನಿರಾಶೆ-ಜುಗುಪ್ಸೆಗಳನ್ನೂ ಉಂಟುಮಾಡಿವೆ. ಸರಕಾರದ ರಕ್ಷಣಾಮಂತ್ರಿಗಳೂ ಜನತೆಯ ಕಡು ಟೀಕೆಗೂ ಆಪಾದನೆಗಳಿಗೂ ಗುರಿಯಾಗಿರುವರು. ಪ್ರಧಾನ ಸಚಿವರು ರಕ್ಷಣಾ ಮಂತ್ರಿಗಳ ರಕ್ಷಣೆ ಬಗ್ಗೆ ಆಗಾಗ್ಗೆ ಯತ್ನಿಸಿದ್ದಾರೆ. ಶಾಂತಿಯನ್ನು ಬೋಧಿಸುವ ಭಾರತವು ನೇರಾಗಿ ಸಮರಕ್ಕಿಳಿಯಲಾರದು ಎಂದಿದ್ದಾರೆ. ಚೀನೀಯರು ಆಕ್ರಮಿಸಿದ ಪರ್ವತಪ್ರದೇಶವು ಭಾರತದ ಸೈನಿಕರಿಗೆ ಅಲ್ಪಕಾಲದೊಳಗೆ ದಂಡಯಾತ್ರೆ ಕೈಕೊಳ್ಳುವಷ್ಟು ಸುಲಭವಾಗಿಲ್ಲ ಎಂಬ ವಿವರಣೆಯೂ ನಮ್ಮ ಮುಂದಿದೆ. ಉತ್ತರ ಗಡಿಗಳಲ್ಲಿ ರಸ್ತೆಗಳ ರಚನೆಗೆ ಕೋಟ್ಯಂತರ ರೂಪಾಯಿ ವ್ಯಯಿಸುವ ಅಧ್ಯಾಯವು ಮತ್ತೆ ಆರಂಭವಾಯಿತು. ಈ ಅಧ್ಯಾಯವು ಇನ್ನೂ ಮುಂದರಿದೇ ಇದೆ. ಜನತೆಯ ಲಕ್ಷ್ಯವು ಮೆಲ್ಲನೆ ಇತರ ಉದ್ರೇಕಗಳ ಕಡೆಗೆ ಹರಿಯಿತು. ತಿರಿಗಿ ಗೋವೆ ಮತ್ತು ಪೋರ್ಚುಗೀಸರ ಅಂಗೋಲಾ ಅತ್ಯಾಚಾರಗಳ ವಿಷಯವು ಮೇಲೆದ್ದಿತು. ಪ್ರಧಾನ ಸಚಿವರು ಈ ಬಾರಿ, ಗೋವಾ ವಿಮೋಚನೆಗೆ ಬಲ ಪ್ರಯೋಗ ಮಾಡುವ ವಿಷಯವನ್ನೂ ಸರಕಾರವು ತಳ್ಳಿಹಾಕಿಲ್ಲವೆಂಬೊಂದು ಮಾತನ್ನು ಹೇಳಿದರು. ಪೋರ್ಚುಗೀಸ್ ಸರಕಾರವು ಆ ಕೂಡಲೇ ಗೋವೆಗೆ ಹೆಚ್ಚು ಸೈನಿಕರನ್ನು ಕಳಿಸುವ ನಿರ್ಧಾರ ಮಾಡಿತು. ಯುಕ್ತರಾಷ್ಟ್ರಸಂಘದಲ್ಲಿ ನಮ್ಮ ರಕ್ಷಣಾ ಮಂತ್ರಿ ಮೆನನರೂ, ಗೋವೆಯ ವಿಮೋಚನೆಗೆ ಬಲಪ್ರಯೋಗ ಮಾಡಬಲ್ಲೆವು ಎಂದು ಗುಡುಗಿಸಿದರು.

—ಎಲ್ಲವೂ, "ನಮ್ಮ ಸಹನೆ ಮೀರಿದರೆ"—"ಈ ಸ್ಥಿತಿಯು ಮುಂದರಿದರೆ" —ಎಂಬ ಶರ್ತದಲ್ಲೆ ಇದೆ.

ಚೀನವು ಇನ್ನು ಭಾರತದ ಒಂದಂಗುಲ ನೆಲವನ್ನೂ ಆಕ್ರಮಿಸದಂತೆ ನೋಡಿಕೊಳ್ಳಲಾಗುವುದೆಂದು ಲೋಕಸಭೆಯಲ್ಲಿ ಭಾರತ ಸರಕಾರವು ಸ್ಪಷ್ಟವಾಗಿ ಹೇಳಿತ್ತು.

ಈಗ, ಚೀನವು ಒಂದಲ್ಲ, ಮಿಲಿಯಗಟ್ಟಲೆ ಇಂಚು ನೆಲವನ್ನು ಪುನಃ ಆಕ್ರಮಿಸಿದೆ. ಚೀನವು, ತನ್ನದಲ್ಲದ ಪ್ರದೇಶದಲ್ಲಿ ಅತಿಕ್ರಮಿಸಿದ ತಪ್ಪು, ನಿಸ್ಸಂದೇಹವಾಗಿದೆ; ಸ್ಪಷ್ಟವಾಗಿ ರುಜುಗೊಂಡಿದೆ. ಇದನ್ನು, ಉದ್ದದ ಪ್ರಕಟಣೆಗಳಿಂದ ನಮ್ಮ ರಕ್ಷಣಾ ಇಲಾಖೆಯು ಜನತೆಯ ಮುಂದಿಡುವ ಆವಶ್ಯಕತೆಗಿಂತ, ತಕ್ಕ ಕ್ರಮ ತೆಗೆದುಕೊಳ್ಳುವುದೇ ಮುಖ್ಯವಾಗಿದೆ. ನಮಗೆ ಚೀನೀಯರ ವಂಚನೆ—ದ್ರೋಹಗಳ ಕತೆಗಳಿಗಿಂತ—ಆಕ್ರಮಿಸಲ್ಪಟ್ಟಿರುವ ನಮ್ಮ ಪ್ರದೇಶವು ವಿಮೋಚನೆಹೊಂದುವುದೇ ಮುಖ್ಯವಾಗಿದೆ. ಇದಕ್ಕೆ "ಶಾಂತಿಪ್ರಿಯತೆ"ಯ ವಾದ ಪುಷ್ಟಿಯ ಆವಶ್ಯಕತೆಯಿಲ್ಲ. "ನಮ್ಮ ಸಹನೆ ಮೀರಿದರೆ" ಎಂಬ ನೆಪವೂ ಬೇಡ. ಸಹನೆ ಎಂದೋ ಮೀರಿಹೋಗಿದೆ. ಶತ್ರುವನ್ನು ನಮ್ಮ ಗಡಿಗಳೊಳಗಿಂದ ಝಾಡಿಸಿ ಹೊರಗೆಸೆವ ವಿಧಾನವಾವುದೆಂಬುದನ್ನು ಶೀಘ್ರವೇ ನಿರ್ಧರಿಸಬೇಕಾಗಿದೆ. ಚೀನೀಯರ ಅಕೃತ್ಯಗಳನ್ನು ವಿವರಿಸಿ, ಮಿಲಿಟರೀ ರಹಸ್ಯದ ಹೆಸರಲ್ಲಿ ಮತ್ತೀ ವಿಷಯವು ತಣ್ಣಗಾದರೆ, ಪುನಃ ಕೆಲವು ಸಾವಿರ ಮೈಲುಗಳನ್ನು ಚೀನೀ ಬೇತಾಳಗಳು ನುಂಗುವುದಕ್ಕೆ ಇನ್ನು ವಿಲಂಬವಿರಲಾರದು. ——

ಜಿಲ್ಲಾ ಪೋಲಿಸ್ ಪಂದ್ಯಾಟಗಳು

ಸಮಾರಂಭದಲ್ಲಿ ಮೈಸೂರು ಮತ್ತು ಮದರಾಸು ಇನ್ಸ್‌ಪೆಕ್ಟರ್ ಜನರಲ್ ಒಫ್ ಪೋಲಿಸರು

ಮದರಾಸಿನ ಸಚಿವರು ಮತ್ತು ಚಲಚ್ಚಿತ್ರ ನಟ ಶ್ರೀ| ಶಿವಾಜಿ ಗಣೇಶನ್ ವಿಶೇಷ ಅತಿಥಿಗಳಾಗಿ.

ದಕ್ಷಿಣ ಕನ್ನಡ ಜಿಲ್ಲಾ ಪೋಲೀಸ್ ಪಂದ್ಯಾಟಗಳು, ಇದೇ ತಾ. 2೨ರಲ್ಲಿ ಪೋಲೀಸ್ ಮೈದಾನಿನಲ್ಲಿ, ಮೈಸೂರು ರಾಜ್ಯದ ಇನ್ಸ್‌ಪೆಕ್ಟರ್ ಜನರಲ್ ಒಫ್ ಪೋಲೀಸ್ ಶ್ರೀ| ಎಸ್. ಎನ್. ಹೊಸಾಳಿಯವರ ಅಧ್ಯಕ್ಷತೆಯಲ್ಲಿ ಜರಗಿದುವು. ಖಾಸಗಿ ಸಂದರ್ಶನಾರ್ಥ ಮಂಗಳೂರಿಗೆ ಬಂದಿದ್ದ ಮದರಾಸಿನ ಗೃಹಮಂತ್ರಿ ಶ್ರೀ| ಎಂ. ಭಕ್ತವತ್ಸಲಂ, ಇನ್ಸ್‌ಪೆಕ್ಟರ್ ಜನರಲ್ ಒಫ್ ಪೋಲೀಸ್ ಶ್ರೀ| ಎಸ್. ಬಾಲಕೃಷ್ಣ ಶೆಟ್ಟಿ, ತಮಿಳು-ಚಿತ್ರ ನಟ ಶಿವಾಜಿ ಗಣೇಶನ್ ಮೊದಲಾದ ಅಥ್ಯರೂ ಈ ಸಮಾರಂಭಕ್ಕೆ ಆಗಮಿಸಿದ್ದರು.

ಶ್ರೀಮತಿ ಹೊಸಾಳಿಯವರು, ಬಹುಮಾನವಿತರಣೆಮಾಡಿದರು.

ಸಮಾರಂಭದ ಆರಂಭದಲ್ಲಿ ಜಿಲ್ಲಾ ಪೋಲೀಸ್ ಅಧಿಕಾರಿ ಶ್ರೀ| ಎ. ಬಿ. ಕೃಷ್ಣಸ್ವಾಮಿಯವರಿಂದ ಸ್ವಾಗತಭಾಷಣ ನಡೆಯಿತು. ಇನ್ಸ್‌ಪೆಕ್ಟರ್ ಜನರಲರು, ಅಧ್ಯಕ್ಷಭಾಷಣ ಮಾಡುತ್ತ, ಪಂದ್ಯಾಟಗಳ ಮಹತ್ವವನ್ನು ವಿಶದೀಕರಿಸಿ, ಬಹುಮಾನಿತರನ್ನು ಅಭಿನಂದಿಸಿದರು.

ಚೆಂಪಿಯನ್‌ಶಿಪ್ ಬಹುಮಾನಗಳನ್ನು ಮಂಗಳೂರು ಆರ್ಮ್ಡ್ ರಿಸರ್ವ್ ಪೋಲೀಸ್ ಎರಡನೇ ಪ್ಲೆಟೂನಿನವರೂ, ತಾಲೂಕು ವಿಭಾಗದಲ್ಲಿ ಪುತ್ತೂರು ತಾಲೂಕಿನವರೂ ಪಡೆದರು.

ದಕ್ಷಿಣ ಕನ್ನಡ ಜಿಲ್ಲೆಗಳ ಪೋಲೀಸ್ ಸ್ಟೇಷನುಗಳಲ್ಲಿ ಉತ್ತಮವೆಂದು ಪರಿಗಣಿಸಲ್ಪಟ್ಟು ಸಲುವ ಬಹುಮಾನವು ಮೂಡಬಿದಿರೆ (ಸಬ್ ಇನ್ಸ್‌ಪೆಕ್ಟರ್—ಶ್ರೀ| ಸಿ. ವಜ್ರದತ್ತ)ಗೆ ದೊರೆಯಿತು.

ಇತ್ತೀಚೆಗೆ ನಡೆದ ಪೋಲೀಸ್ ಶತಮಾನೋತ್ಸವದ ಕಾಲದಲ್ಲಿ ಆಕರ್ಷಕವಾಗಿ ಸ್ಟೇಷನಿಗೆ ವಿದ್ಯುದ್ದೀಪಾಲಂಕಾರ ಮಾಡಿದ ಕದ್ರಿ ಪೋಲೀಸ್ ಸ್ಟೇಷನಿಗೆ ಒಂದು ಬಹುಮಾನ ಕೊಡಲ್ಪಟ್ಟಿತು.

ಮನೆಗೆ ಬೆಂಕಿಹಿಡಿದಾಗ ನಂದಿಸುವ ವಿಧಾನವು ಈ ಸಮಾರಂಭದಲ್ಲಿ ಪ್ರೇಕ್ಷಕರಲ್ಲಿ ವಿಶೇಷ ಪರಿಣಾಮಕಾರಿಯಾಗುವಂತೆ ಪ್ರದರ್ಶಿಸಲ್ಪಟ್ಟಿತು.

ಮೈಸೂರು ಸರಕಾರದ ಬೇಂಡ್ ವಾದ್ಯಗೋಷ್ಠಿಯು ಆಹ್ಲಾದಕರವಾಗಿತ್ತು. ಕದ್ರಿಯ ನೃತ್ಯವಿದ್ಯಾನಿಲಯದ ಶ್ರೀ| ಯು. ಎಸ್. ಕೃಷ್ಣರಾಯರ ಶಿಷ್ಯೆ (ಸಬ್ ಇನ್ಸ್‌ಪೆಕ್ಟರ್ ಶ್ರೀ| ನಾಗರಾಜರವರ ಪುತ್ರಿ ಕುಮಾರಿ ಪ್ರೇಮಾರವರ ಎರಡು ನೃತ್ಯಗಳೂ, ಪೋಲೀಸ್ ವೆಲ್‌ಫೇರ್ ಸೆಂಟರಿನ ಕೆಲವು ಹುಡುಗಿಯರ ವೃಂದನೃತ್ಯವೂ, ಶ್ರೀ| ಯು. ಎಸ್. ಕೃಷ್ಣರಾವ್‌ರವರ ಪುತ್ರ ಕುಮಾರ ಅರುಣನ ಶಿವತಾಂಡವ ನೃತ್ಯವೂ, ಈ ಸಂದರ್ಭದಲ್ಲಿ ಪ್ರದರ್ಶಿಸಲ್ಪಟ್ಟು ಪ್ರೇಕ್ಷಣೀಯವಾಗಿದ್ದುವು. ——

ಮೇಜರ್ ಗಗರಿನ್ ಭಾರತಕ್ಕೆ ಬರುವರು

ವಿಶ್ವಾಕಾಶದಲ್ಲಿ ಪ್ರಥಮ ಬಾರಿ ಹಾರಿದ ರಷ್ಯದ ಮೇಜರ್ ಗಗರಿನ್‌ರವರು, ಇದೇ ತಾ. 29ಕ್ಕೆ ಭಾರತಕ್ಕೆ ಆಗಮಿಸಿ, ಒಂದು ವಾರದ ತನಕ ಸಂಚರಿಸುವರು. ಮುಂಬಯಿ, ಕಲ್ಕತ್ತ, ಲಕ್ನೋ, ಹೈದರಾಬಾದ ಮೊದಲಾದ ನಗರಗಳಲ್ಲಿ ಇವರ ಕಾರ್ಯಕ್ರಮವಿದೆ.

——

ಆರೋಗ್ಯ ಸಚಿವರು ಮಂಗಳೂರಿಗೆ

ಮೈಸೂರಿನ ಆರೋಗ್ಯ ಸಚಿವ ಡಾ| ಕೆ. ಕೆ. ಹೆಗ್ಡೆಯವರು ಇದೇ ತಾ. 27ಕ್ಕೆ ಮಂಗಳೂರಿಗೆ ಆಗಮಿಸಿ, ಫರಂಗಿಪೇಟೆಯಲ್ಲಿ ಕ್ಷಯರೋಗ ಚಿಕಿತ್ಸಾ ಸಂಬಂಧವಾದ ಸಮಾರಂಭದಲ್ಲಿ ಭಾಗವಹಿಸಿ, ಅದೇ ದಿನ ಸಾಯಂಕಾಲ ಮಂಗಳೂರಲ್ಲಿ ಪಾನನಿರೋಧ ಸಪ್ತಾಹದ ಉದ್ಘಾಟನೆ ನಡೆಸಿ, ಮರುದಿನ ಸಾಯಂಕಾಲ ಮಂಗಳೂರು ಸರಕಾರೀ ಆಸ್ಪತ್ರೆಯಲ್ಲಿ ಸ್ಟೀಮ್ ಲೋಂಡ್ರಿ (ವಸ್ತ್ರಗಳನ್ನು ಮಡಿ ಮಾಡುವ ಯಂತ್ರ) ಉದ್ಘಾಟನೆಗೈದು, ತಾ. 29ರಲ್ಲಿ ಕಾರ್ಕಳಕ್ಕೆ ತೆರಳುವರು; ಅಲ್ಲಿಂದ ಉಡುಪಿಗೆ ಹೋಗಿ, 30ಕ್ಕೆ ಮಂಗಳೂರಿಗೆ ಹಿಂದಿರುಗಿ, ತಾರೀಕು 2—12—61ಕ್ಕೆ ಬೆಳ್ತಂಗಡಿಗೆ ಹಿಂದಿರುಗುವರು.

——

ಶಿವಾಜಿ ಗಣೇಶನ್ ರಾಮಕಾಂತಿ ಟೊಕಿಸಿನಲ್ಲಿ

ಮಂಗಳೂರಲ್ಲಿ ತಾ. 24—11—61 ರಲ್ಲಿ ನಡೆವ ಕುಮಾರಿ ಬೀನಾ ಶೆಟ್ಟಿಯವರ ವಿವಾಹ ಸಮಾರಂಭಕ್ಕೆ ಅತಿಥಿಯಾಗಿ ಮಂಗಳೂರಿಗೆ ಆಗಮಿಸಿದ್ದ ಮದರಾಸಿನ ಸುಪ್ರಸಿದ್ಧ ಚಲಚ್ಚಿತ್ರ ನಟ ಶ್ರೀ| ಶಿವಾಜಿ ಗಣೇಶನ್‌ರವರು, ತಾ. 23ರಂದು ಸಾಯಂಕಾಲ, ಸ್ಥಳೀಯ ರಾಮಕಾಂತಿ ಟೊಕಿಸಿಗೆ ಬಂದು, ಅಲ್ಲಿ ಪ್ರದರ್ಶಿಸಲ್ಪಡುತ್ತಿರುವ "ಕಪ್ಪಲೋಟಿಯ ತಮಿಳನ್" ಚಿತ್ರವನ್ನು ಕೆಲ ಹೊತ್ತು ನೋಡಿ, ಪ್ರೇಕ್ಷಕರಿಗೆ ದರ್ಶನವಿತ್ತರು. ಈ ಚಿತ್ರದಲ್ಲಿ ಶಿವಾಜಿ ಗಣೇಶನ್‌ರವರೇ ಪ್ರಧಾನ ಭೂಮಿಕೆ ವಹಿಸಿದ್ದಾರೆ.

—೦—

ಕೊಲೆ: ನಂದಿಗೂರು ಎಂಬಲ್ಲಿ ಕಳೆದ ತಾ. 17ರಂದು ಸಂಜೆ ಸುಮಾರು 7-30ರ ಹೊತ್ತಿಗೆ ಫಲಿಮಾರಿನ ಪಟೇಲರಾದ ಶ್ರೀ| ರುಕ್ಮ ಶೆಟ್ಟಿಯವರನ್ನು ದೊಣ್ಣೆಯಿಂದ ಹೊಡೆದು ಕೊಲೆಗೈದ ಘಟನೆಯೊಂದು ವರದಿಯಾಗಿದೆ. ಶಿರ್ವ ಪೋಲೀಸರು ಈ ಸಂಬಂಧದಲ್ಲಿ ತನಿಖೆ ನಡೆಸುತ್ತಿರುವರು. ——

ಮೈಸೂರು ರಾಜ್ಯದಲ್ಲಿ ಮೂವತ್ತು ಲಕ್ಷ ರೂ. ವೆಚ್ಚ

12 ಮಿಲಿಯ ಮತದಾರರು; 12,750 ಮತಗಟ್ಟೆಗಳು.

ಫೆಬ್ರವರಿ ಅಂತ್ಯದೊಳಗೆ ಫಲಿತಾಂಶ ಪ್ರಕಟಣೆ

ಮುಂಬರುವ ವಿಧಾನಸಭಾ ಹಾಗೂ ಲೋಕಸಭಾ ಚುನಾವಣೆಗಳಿಗೆ ಮೈಸೂರು ರಾಜ್ಯದಲ್ಲಿ ಸುಮಾರು 30 ಲಕ್ಷ ರೂಪಾಯಿ ವ್ಯಯವು ಅಂದಾಜಾಗಿದೆ. ರಾಜ್ಯದಲ್ಲಿನ ಮತದಾರರ ಸಂಖ್ಯೆ ಹನ್ನೆರಡು ಮಿಲಿಯ. 12,750 ಮತಗಟ್ಟೆಗಳಿರುವುವು. ಪ್ರತೀ ಮತದಾರನು, ಮತದಾನಮಾಡಲು ಮೂರು ಮೈಲುಗಳಿಗಿಂತ ಹೆಚ್ಚು ನಡೆದುಹೋಗಲಾರದಂತೆ ಮತಗಟ್ಟೆಗಳ ವ್ಯವಸ್ಥೆಯಾಗುವುದು.

ಚುನಾವಣಾಸಂಬಂಧವಾದ ನಾಮಪತ್ರಗಳ ಕುರಿತು ಪ್ರಕಟಣೆಯು ಜನವರಿ ತಾ. 13ರಲ್ಲಿ ಹೊರಡುವುದು; ಜನವರಿ ತಾ. 20ರ ವರೆಗೆ ನಾಮಪತ್ರಗಳನ್ನು ಸಲ್ಲಿಸಬಹುದು; ಜನವರಿ ತಾ. 22ರಲ್ಲಿ ನಾಮಪತ್ರಗಳ ಪರಿಶೀಲನೆ ನಡೆವುದು. ನಾಮಪತ್ರಗಳನ್ನು ಹಿಂದೆಗೆವ ಕೊನೆಯ ತಾರೀಕು ಜನವರಿ 25.

ಚುನಾವಣೆಗಳು ಫೆಬ್ರವರಿ 19, 22 ಮತ್ತು 25ರಲ್ಲಿ ನಡೆವುವು; ಮೂರು ದಿನಗಳೊಳಗೆ(ಫೆಬ್ರವರಿ ಕೊನೆಯೊಳಗೆ) ಎಲ್ಲ ಫಲಿತಾಂಶಗಳು ಪ್ರಕಟವಾಗುವುವು.

ಶ್ರೀ! ಆರ್. ಸಂಪತ್‌ಕುಮಾರರು ಮೈಸೂರು ರಾಜ್ಯದ ಚುನಾವಣಾಧಿಕಾರಿಯಾಗಿರುತ್ತಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಅಭ್ಯರ್ಥಿಗಳು

ದಕ್ಷಿಣ ಕನ್ನಡ ಜಿಲ್ಲೆಯ ಕೊಂಗ್ರೆಸ್ ಅಭ್ಯರ್ಥಿಗಳ ಹೆಸರುಗಳನ್ನು ಪ್ರದೇಶ ಸಮಿತಿಯು ಪರಿಶೀಲಿಸಿ, 3-4 ಹೆಸರುಗಳ ಹೊರತು ಮಿಕ್ಕವುಗಳಲ್ಲಿ ಸರ್ವಾನುಮತಿ ಸೂಚಿಸಿದೆಯೆನ್ನಲಾಗಿದೆ. ಲೋಕಸಭೆಯ ಎರಡು ಸ್ಥಾನಗಳಲ್ಲಿ ಉತ್ತರಕ್ಕೆ ಶ್ರೀ! ಯು. ಶ್ರೀನಿವಾಸ ಮಲ್ಯ ಮತ್ತು ದಕ್ಷಿಣಕ್ಕೆ ಶ್ರೀ! ಎ. ಶಂಕರ ಆಳ್ವರವರ ಹೆಸರುಗಳು ಸೂಚಿಸಲ್ಪಟ್ಟವೆ. ಉಪಸ್ಥಿತ ಲೋಕಸಭಾ ಸದಸ್ಯ (ದಕ್ಷಿಣ) ಶ್ರೀ! ಕೆ. ಆರ್. ಆಚಾರ್‌ರವರ ಹೆಸರು ಸೂಚಿಸಲ್ಪಟ್ಟಿಲ್ಲ.

ಮಂಗಳೂರು Iಗೆ ಶ್ರೀ! ಮಣೇಲ ಶ್ರೀನಿವಾಸ ನಾಯ್ಕರ ಹೆಸರು ಒಮ್ಮೆ ಪ್ರಕಟವಾಗಿತ್ತಾದರೂ, ಕೊನೆಯ ಪಟ್ಟಿಯಲ್ಲಿ ಅವರ ಹೆಸರು ಮಂಗಳೂರು IIರಲ್ಲಿ ಶಿಫಾರಸುಮಾಡಲ್ಪಟ್ಟಿದೆಯೆಂದೂ, ಮಂಗಳೂರು Iಕ್ಕೆ ಶ್ರೀ! ಕೆ. ಸೂರ್ಯನಾರಾಯಣ ಅಡಿಗರ ಹೆಸರು ಸೂಚಿತವಾಗಿದೆಯೆಂದೂ ತಿಳಿಯಲಾಗಿದೆ. ಉಡುಪಿಯಲ್ಲಿ ಶ್ರೀ! ಟಿ. ಎ. ಪೈಗಳವರ ಬದಲಿಗೆ ಅವರ ಪತ್ನಿ ಶ್ರೀಮತಿ ಪ್ರೇಮಾ ಎ. ಪೈಯವರ ಮತ್ತು ಬ್ರಹ್ಮಾವರಕ್ಕೆ ಶ್ರೀ! ಎಸ್. ಧರ್ಮಸಾಮ್ರಾಜ್ಯಯ್ಯನವರ ಹೆಸರುಗಳು ಶಿಫಾರಸುಮಾಡಲ್ಪಟ್ಟವೆ.

ಪುನರ್ಪರಿಶೀಲನೆಯು ದಿಲ್ಲಿಯಲ್ಲಿ ನಡೆದು, ತಾ. 5—12—61ರಲ್ಲಿ ಕೊನೆಯ ಪಟ್ಟಿ ಪ್ರಕಟವಾಗುವುದು.

——

ವಾರದ ವಾರ್ತೆ

'ಮಹಾರಾಷ್ಟ್ರ' ರಚನೆಗಾಗಿ ಹೋರಾಡಿದ್ದ ಹುತಾತ್ಮರಿಗಾಗಿ ಒಂದು ಸ್ಮಾರಕವು, ಮುಂಬಯಿ ನಗರದ ಫ್ಲೋರಾ ಫೌಂಟನ್‌ದಲ್ಲಿ ರಚಿಸಲ್ಪಡುವುದು. ಮಹಾರಾಷ್ಟ್ರದ ಮುಖ್ಯಮಂತ್ರಿ ಶ್ರೀ! ಚವನರು ತಾ. 21ರಲ್ಲಿ ಈ ಸ್ಮಾರಕದ ಶಂಕುಸ್ಥಾಪನೆ ಮಾಡಿದರು.

ಮಹಾಚುನಾವಣಾ ಕಾಲದಲ್ಲಿ, ಹುರಿಯಾಳುಗಳಿಗೆ, ಸಾಮಗ್ರಿಗಳು ದೊರೆವ ಸಾಧ್ಯತೆಗೊಳಪಟ್ಟು, ಟೆಲಿಫೋನ್ ಸೌಕರ್ಯ ಕೊಡಿಸಲಾಗುವುದೆಂದು, ಲೋಕಸಭೆಯಲ್ಲಿ, ಪ್ರಶ್ನೋತ್ತರಗಳಾದಾಗ, ಪ್ರಕಟವಾಗಿದೆ.

ಬರ್ಮಾ ಮತ್ತು ಭಾರತ ಸರಕಾರಗಳೊಳಗಾದ ಒಂದು ಕರಾರಿನಂತೆ, ಬರ್ಮಾವು ಭಾರತದಿಂದ 104 ಮಂದಿ ಡಾಕ್ಟರುಗಳನ್ನು ನೇಮಿಸಿಕೊಳ್ಳುವುದು.

ಈ ವರ್ಷ, ಇದೇ ನವಂಬರ ತಿಂಗಳವರೆಗೆ, ಭಾರತವು, ವಿದೇಶಗಳಿಗೆ 2·38 ಲಕ್ಷ ಮೆಟ್ರಿಕ್ ಟನ್ ಸಕ್ಕರೆ ರಫ್ತುಮಾಡಿ, 11·6 ಕೋಟಿ ರೂಪಾಯಿಗಳಷ್ಟು ವಿದೇಶ ವಿನಿಮಯಗಳಿಸಿದೆ.

ಭಾರತ-ಭೂತಾನಗಳನ್ನು ಜೋಡಿಸುವ ಇಪ್ಪತ್ತೈದು ಮೈಲುಗಳ ಹೆದ್ದಾರಿಯಲ್ಲಿ, ಇಷ್ಟರೊಳಗೇ ಇಪ್ಪತ್ತಮೂರು ಮೈಲುಗಳಷ್ಟು ರಸ್ತೆ ರಚಿಸಲ್ಪಟ್ಟಿದೆ.

ಸಾರ್ವಜನಿಕ ಸಭೆಗಳಲ್ಲಿ ಗೊಂದಲಗಳನ್ನೆಬ್ಬಿಸದಂತೆ ತಡೆವ ಶಾಸನವೊಂದನ್ನು ಕೇರಳ ರಾಜ್ಯಸರಕಾರವು ಜ್ಯಾರಿಗೆ ತಂದಿದೆ. ಗಲಭೆಯುಂಟುಮಾಡುವ ತಪ್ಪಿತಸ್ಥರಿಗೆ ಒಂದು ತಿಂಗಳ ಸದಾ ಸಜೆ ಮತ್ತು ನೂರು ರೂಪಾಯಿ ದಂಡವಿಧಿಸಲಾಗುವುದು.

ಭಾರತಕ್ಕೆ ಬಂದಿರುವ ಜಪಾನಿನ ಪ್ರಧಾನಸಚಿವ ಹಯಾತೊ ಇಕೆಡಾರವರು ಭಾರತ ಪ್ರಧಾನಸಚಿವರೊಡನೆ ಮಾತುಕತೆನಡೆಸಿದರು. ಭಾರತ-ಜಪಾನ್ ಬಾಂಧವ್ಯದ ಸ್ಥಿರೀಕರಣದ ನುಡಿಗಳನ್ನಾಡಿದರು. ಬೃಹತ್ ಉದ್ಯಮಗಳಲ್ಲಿ ಭಾರತಕ್ಕೆ ಜಪಾನಿನ ನೆರವು ನೀಡುವ ಸಂತೋಷವನ್ನು ಪ್ರಕಟಿಸಿದರು. ಇಬ್ಬರು ಪ್ರಧಾನಸಚಿವರೂ, ಅಣುಶಕ್ತಿ ಪ್ರಯೋಗದಿಂದ ಜಗತ್ತಿನ ವಿನಾಶವನ್ನು ಯಾರೂ ಸಾಧಿಸಬಾರದೆಂದೂ,—ಅಣುಬೋಂಬ್‌ಗಳ ಪ್ರಯೋಗವು ಬಲಾಢ್ಯ ರಾಷ್ಟ್ರಗಳಿಂದ ನಿಲ್ಲಿಸಲ್ಪಟ್ಟು, ಶಾಂತಿಪಾಲಿಸಲ್ಪಡಲೆಂದೂ ಜಂಟಿ ಪ್ರಕಟಣೆ ಕೊಟ್ಟಿರುವರು.

ಚೀನೀಯರು, ಇತ್ತೀಚೆಗೆ ಲಡಖಿನಲ್ಲಿ ಎರಡು ಸಾವಿರ ಚದರ ಮೈಲುಗಳಷ್ಟು ಪ್ರದೇಶವನ್ನಾಕ್ರಮಿಸಿದುದನ್ನು ಭಾರತದ ಕಮ್ಯೂನಿಸ್ಟ್ ಪಕ್ಷವು ನಿಷೇಧಿಸಿದೆ. ಆದರೆ, ಆಕ್ರಮಿಸಿದ ಸ್ಥಳವನ್ನು ತೊರೆದು ಹೊರನಡೆಯಬೇಕೆಂದು ಹೇಳಿಲ್ಲ.

—೦—

ನಮ್ಮ ಜಿಲ್ಲೆ

ಕ್ರಿಕೆಟ್: ಪೆಂಟ್ಲೆಂಡ್‌ಪೇಟಾ ಕ್ರೀಡಾಂಗಣದಲ್ಲಿ ತಾ. 19ರಂದು ನಡೆದ ಆಲ್ಬ್ಯುಕರ್ಕ್ ಲೀಗ್ ಕ್ರಿಕೆಟ್ ಪಂದ್ಯದ ಆಟದಲ್ಲಿ ಎಂ.ಎಸ್.ಸಿ.ಯವರು ಕರ್ನಾಟಕ ಪೊಲಿಟೆಕ್ನಿಕ್‌ದವರನ್ನು 7 ವಿಕೆಟುಗಳಿಂದ ಸೋಲಿಸಿದರು.

ಕಳವು: ಉಡುಪಿ ಶ್ರೀಕೃಷ್ಣ ದೇವಸ್ಥಾನದಲ್ಲಿ ಕಳೆದ ತಾ. 19ರಂದು ಸಂಜೆ ಉತ್ಸವ ಸಮಯದಲ್ಲಿ ಉತ್ಸವಕ್ಕೆ ನೆರೆದಿದ್ದವರೊಬ್ಬರ ಕಿಸೆಯಿಂದ ರೂ. 5618 ಕಳವಾಗಿದೆಯೆಂದು ವರದಿಯಾಗಿದೆ.

ಫಲಪುಷ್ಪ ಪ್ರದರ್ಶನದಲ್ಲಿ ಬಹುಮಾನಗಳು: ಮಂಗಳೂರು ಹೊರ್ಟಿಕಲ್ಚರಲ್ ಸೊಸೈಟಿಯ ಆಶ್ರಯದಲ್ಲಿ ಸರಕಾರಿ ತರಬೇತಿ ಕೊಲೆಜಿನ ಆವರಣದಲ್ಲಿ ಏರ್ಪಟ್ಟ ಫಲಪುಷ್ಪೋದ್ಯಾನ ಪ್ರದರ್ಶನದಲ್ಲಿ ಈ ಕೆಳಗಿನವರು ಮುಖ್ಯ ಬಹುಮಾನಗಳನ್ನು ಪಡೆದಿರುವರು.

ತೋಟಗಾರಿಕೆ: ಖಾಸಗಿ ವ್ಯಕ್ತಿಗಳ ಬಗ್ಗೆ-1) ವಸಂತಕುಮಾರ್, 2) ಎಲ್. ಸಿಕೇರಾ, ಕೆ. ಕೃಷ್ಣಯ್ಯ ಹೆಗ್ಗಡೆ.

ಸಂಘ ಸಂಸ್ಥೆಗಳ ಬಗ್ಗೆ-1) ಸರಕಾರೀ ತರಬೇತಿ ಕೊಲೇಜ್, 2) ಸರಕಾರೀ ಕಲಾ ಕೊಲೇಜ್, ಇನ್‌ಸ್ಟಿಟ್ಯೂಟ್ ಆಫ್ ಸೋಶಲ್ ವರ್ಕ್ಸ್.

ಸ್ಥಳೀಯ ಸಂಸ್ಥೆಗಳ ಬಗ್ಗೆ 1) ಬಾವಟಿಗುಡ್ಡೆ ಮುನ್ಸಿಪಲ್ ಟಾಗೋರ್ ವೃಂದಾವನ, 2) ಜಿಲ್ಲಾ ಬೋರ್ಡು ಆಫೀಸು ವೃಂದಾವನ.

ತರಕಾರೀ ತೋಟ: 1) ಬಿಜೈಸಬ್ ಜೈಲ್. ಬಾಲಕಿಯರಿಗೆ ಹೂ ಮುಡಿಯುವ ಶೃಂಗಾರದಲ್ಲಿ—ಹಿರಿಯರ ವಿಭಾಗ: 1) ಲಲಿತ, 2) ಡಿ. ಪುಷ್ಪ, 3)ಗೀತಾ. ಕಿರಿಯರ ವಿಭಾಗ: 1) ಮಂಜುಳಾ, 2) ದುಲಾರಿ, 3) ಶಾಂತಿ, 4) ಚಂದ್ರಿಕಾ (ವಿಶೇಷ ಬಹುಮಾನ).

ಅಂತರ್ ಕೊಲೇಜ್ ಕ್ರೀಡೋತ್ಸವ: ಮಂಗಳೂರು ಕೇಂದ್ರ ಮೈದಾನಿನಲ್ಲಿ ಇತ್ತೀಚೆಗೆ ಜರಗಿದ ಪ್ರೊ| ಎಂ. ಜೆ. ಎಸ್. ಸ್ಮಾರಕ ಅಂತರ್ ಕೊಲೇಜ್ ಕ್ರೀಡೋತ್ಸವದಲ್ಲಿ, ದಕ್ಷಿಣ ಕನ್ನಡ ಜಿಲ್ಲೆ ಮತ್ತು ಕೊಡಗಿನ 9 ಕೊಲೇಜುಗಳ 150 ಕ್ರೀಡಾಪಟುಗಳು ಭಾಗವಹಿಸಿದ್ದು ಮುಖ್ಯ ಬಹುಮಾನಗಳನ್ನು ಹೊಂದಿದವರ ವಿವರ ಈ ಕೆಳಗಿನಂತಿದೆ:

ವೈಯಕ್ತಿಕ ಮತ್ತು ಪೆಂಟ್‌ಲಿಯಾನ್ ಚ್ಯಾಂಪಿಯನ್‌ಶಿಪ್-ಪುತ್ತೂರು ಸೈಂಟ್ ಫಿಲೋಮಿನಾ ಕೊಲೇಜಿನ ಶ್ರೀ| ಎಂ. ಎಂ. ಗಣಪತಿ—ಕೊಲೇಜ್ ಚೆಂಪಿಯನ್‌ಶಿಪ್-ಮಂಗಳೂರು ಸೈಂಟ್ ಎಲೋಸಿಯಸ್ ಕೊಲೇಜ್. ಹುಡುಗಿಯರ ವಿಭಾಗದ ವೈಯಕ್ತಿಕ ಚ್ಯಾಂಪಿಯನ್‌ಶಿಪ್-ಮಡಿಕೇರಿ ಗವರ್ನಮೆಂಟ್ ಕೊಲೆಜಿನ ಎ. ವಿ. ಪೊನ್ನಮ್ಮ. ಕೊಲೇಜ್ ಚೆಂಪಿಯನ್‌ಶಿಪ್—ಮಂಗಳೂರು ಸೈಂಟ್ ಎಗ್ನೆಸ್ ಕೊಲೇಜ್. ಬಹುಮಾನ ವಿತರಣೆಯು ತಾ. 19ರಂದು ಸರಕಾರೀ ತರಬೇತಿ ಕೊಲೆಜಿನ ಪ್ರಿನ್ಸಿಪಾಲ್ ಶ್ರೀ| ಎಸ್. ಆರ್. ರೊಹಿಡೇಕರರಿಂದ ನಡೆಯಿತು.

ಚಿಕ್ಕಕಲಸಗಾರರ ಸಹಕಾರ ಗುಡಿ ಕೈಗಾರಿಕಾ ಸಂಘ: ಬೈಂದೂರು ಸಮಾಜಾಭಿವೃದ್ಧಿ ಯೋಜನೆಯ ಆಶ್ರಯದಲ್ಲಿ ಶಂಕರನಾರಾಯಣ(ಸಿದ್ದಾಪುರ)ದ ಆಸುಪಾಸಿನ ಹಂಜನರ ಮತ್ತು ಗಿರಿಜನರ ಸಹಾಯಾರ್ಥ ರಿಜಿಸ್ಟರ್ ಮಾಡಿಸಲ್ಪಟ್ಟ ಚಿತ್ರ ಕೆಲಸಗಾರರ ಸಹಕಾರ ಸಂಘದ ಉದ್ಘಾಟನೆಯು ಇತ್ತೀಚೆಗೆ ಶ್ರೀ| ಮಂಜುನಾಥ ಶ್ಯಾನುಭಾಗರ ಅಧ್ಯಕ್ಷತೆಯಲ್ಲಿ ಕುಂದಾಪುರ ಕೈಗಾರಿಕಾ ವಿಸ್ತರಣಾಧಿಕಾರಿ ಶ್ರೀ| ಶ್ಯಾಮ ಹೆಗ್ಡೆಯವರಿಂದ ನಡೆಯಿತು.

ಮುಸ್ಲಿಮರ ಸಾರ್ವಜನಿಕ ಸಭೆ: ಮಂಗಳೂರು ಮುಸ್ಲಿಂ ವೆಲ್‌ಫೇರ್ ಕಮಿಟಿಯ ಆಶ್ರಯದಲ್ಲಿ ಮುಸ್ಲೀಮರ ಸಾರ್ವಜನಿಕ ಸಭೆಯೊಂದು ಕಳೆದ ತಾ. 19ರಂದು ಸಂಜೆ ಕೇಂದ್ರ ಜುಮ್ಮಾ ಮಸೀದಿಯ ಜಮಾತ್‌ಖಾನ್ ಹೊಲಿನಲ್ಲಿ ಕತೀಬ್ ಜನಾಬ್ ಹಾಜಿ ಸಿ. ಶೇಖ್‌ಅಹ್ಮದ್ ಮೌಲ್ವಿಯವರ ಅಧ್ಯಕ್ಷತೆಯಲ್ಲಿ ಸೇರಿದಾಗ, ಬಾವಟಿಗುಡ್ಡೆ ಈದ್ಗಾ ಪ್ರಾರ್ಥನಾ ಮಂದಿರದ ಮೂಡು ದಿಕ್ಕಿಗಿರುವ 48 ಸೆಂಟ್ಸ್ ಸ್ಥಳವು ಮುಸ್ಲೀಮರ ಸಾರ್ವಜನಿಕ ಸಭೆ ಮತ್ತು ಈದ್ ಸಮಾರಂಭಗಳಲ್ಲಿ ಉಪಯೋಗಕ್ಕೆ ಬೇಕಾದುದರಿಂದ ಅದನ್ನ ಖಾಲಿಯೇ ಇಡತಕ್ಕದ್ದೆಂಬ ಮುಸ್ಲೀಮ್ ಸಮುದಾಯದ ಕೇಳಿಕೆಗೆ ಮಾನ್ಯತೆ ಕೊಡದೆ ಕಾರ್ನಾಡ್ ಸದಾಶಿವರಾವ್ ಸ್ಮಾರಕ ಗ್ರಂಥಾಲಯ ಸಂಸ್ಥೆಗೆ ಕೊಟ್ಟ ಸರಕಾರದ ಧೋರಣೆಯನ್ನು ಖಂಡಿಸಿ, ಈ ಪ್ರಶ್ನೆಯನ್ನು ಪುನರಾಲೋಚಿಸಿ ಮುಸ್ಲೀಮ್ ಜನತೆಯ ಕೇಳಿಕೆಯನ್ನು ಮಾನ್ಯಮಾಡಬೇಕೆಂದು ರಾಜ್ಯ ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವನ್ನು ಸರ್ವಾನುಮತದಿಂದ ಮಂಜೂರುಮಾಡಲಾಯಿತು. ——

'ಚಂದನ್' ಸ್ಟೀಲ್‌ಫರ್ನಿಚರ್ ಸಂಸ್ಥೆಯ ಉದ್ಘಾಟನೆ

ಬಡೋದೆಯ "ಚಂದನ್" ಸ್ಟೀಲ್ ಫರ್ನಿಚರ್ ಸಂಸ್ಥೆಯ ಶೋ ರೂಮ್, ಮಂಗಳೂರಿನ ಮೆ| ಭಿಕ್ಕ್ಯಾಭಾಯಿ ಪ್ರಭುದಾಸ ಪರೇಖ್ ಎಂಡ್ ಕಂಪೆನಿಯವರು ಸ್ಥಳೀಯ ವಿತರಣಾಧಿಕಾರಿಗಳಾಗಿ, ತಾ. 22ನೇ ಬುಧವಾರ, ಕಾರ್ನಾಡ್ ಸದಾಶಿವರಾವ್ ರಸ್ತೆಯಲ್ಲಿರುವ 'ವುಡ್ ಸಾಯ್ಡ್' ಕಟ್ಟಡದಲ್ಲಿ, ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕೊಲೇಜಿನ ಪ್ರಿನ್ಸಿಪಾಲರಾಗಿರುವ ಡಾ| ಎ. ಎಸ್. ಅಡ್ಕೆಯವರಿಂದ ಉದ್ಘಾಟಿಸಲ್ಪಟ್ಟಿತು. ನಗರ ಸಭಾಧಿಪತಿ ಶ್ರೀ| ಮಣೇಲ ಶ್ರೀನಿವಾಸ ನಾಯ್ಕರು ಈ ಸಮಾರಂಭದ ಅಧ್ಯಕ್ಷತೆ ವಹಿಸಿ, ಸಂಸ್ಥೆಗೆ ಅಭಿವೃದ್ಧಿಯನ್ನು ಕೋರಿದರು. ಆರಂಭದಲ್ಲಿ ಉಪಾಹಾರ ವಾದನಂತರ, ಶ್ರೀ| ಪ್ರತಾಪರಾವ್ ಬಿ. ಪರೇಖ್‌ರವರು ಅತಿಥಿಗಳಿಗೆ ಸ್ವಾಗತ ಕೋರಿದರು; ಶ್ರೀ| ಬಿ. ಆರ್. ಕಾಮತ್‌ರವರು 'ಚಂದನ್' ಉದ್ಯಮದ ಮತ್ತು ಸ್ಥಳೀಯ ಮಾರಾಟಗಾರರಾದ ಮೆ| ಬಿ. ಪಿ. ಪರೇಖ್ ಎಂಡ್ ಕಂಪೆನಿಯವರ ಕುರಿತು ಪರಿಚಯಾತ್ಮಕ ಭಾಷಣ ಮಾಡಿದರು. ಸಮಾರಂಭಾಂತ್ಯದಲ್ಲಿ ಶ್ರೀ| ಫಜಲ್ ಆಲಿಯವರು ಧನ್ಯವಾದಗಳನ್ನಿತ್ತರು. —೦—

ಆಧುನಿಕ ರಸವಿದ್ಯೆ

ಉಪ್ಪು ನೀರಿನ ಪರಿವರ್ತನೆಯ ಕಥೆ

- ಉಪ್ಪು ನೀರನ್ನು ಶುದ್ಧಪಡಿಸುವ ಯಂತ್ರ ರಚಿಸಿಕೊಟ್ಟವರಿಗೆ 950,000 ರೂಪಾಯಿ ಕೊಡುವುದಾಗಿ ಇಂಗ್ಲೆಂಡಿನ ರಾಣಿ ಒಂದನೇ ಎಲಿಝಬೆತಳು ಪ್ರಕಟಣೆ ಹೊರಡಿಸಿದ್ದರು.
- ಎರಡು ಸಾವಿರ ವರ್ಷಗಳಿಂದಲೂ ಮನುಷ್ಯನು ಸಮುದ್ರದಿಂದ ಶುದ್ಧ ನೀರನ್ನು ಪಡೆಯಲು ಯತ್ನ ನಡೆಸಿದ್ದಾನೆ.
- ಅಮೆರಿಕದಲ್ಲೀಗ ಈ ಬಗ್ಗೆ ಶೋಧನೆಗಳಾಗುತ್ತಿವೆ; ಈ ಯತ್ನಗಳು ಯಶಸ್ವಿಯಾದರೆ, ಪ್ರಪಂಚದ ಮರುಭೂಮಿಗಳಲ್ಲಿ ವಾಸಿಸುತ್ತಿರುವವರಿಗೆ ಅಥವಾ ಸಮುದ್ರ ತೀರದಲ್ಲಿರುವವರಿಗೆ ಮಹತ್ತರ ಭಗವತ್‌ಕೃಪೆ ಲಭಿಸಿದಂತಾಗುವುದು.

ಸಮುದ್ರದ ನೀರಿನಿಂದ ಶುದ್ಧ ನೀರನ್ನು ಸಿದ್ಧಪಡಿಸುವ ಟೆಕ್ಸಾಸ್ ಸಂಸ್ಥಾನದ ಫ್ರೀ ಪೋರ್ಟಿನಲ್ಲಿಯ ಪ್ರಾಯೋಗಿಕ ಸ್ಥಾವರವು ಕೈಗಾರಿಕೆ ಹಾಗೂ ವಿಜ್ಞಾನಗಳ ಮಿಲನಕ್ಕೆ ಇತ್ತೀಚಿನ ವಿಸ್ಮಯಕಾರಕ ಉದಾಹರಣೆ.

ಮಾನವನು ನಾಗರಿಕನಾದ ವೇಳೆ ಸಮುದ್ರ ಅವನಿಗೆ ಆಹಾರದ ಒಂದು ಮೂಲವಾಗಿದೆ; ವ್ಯಾಪಾರ ಪ್ರವಾಸಗಳ ಛಾಟಾ ಮಾರ್ಗವಾಗಿದೆ. ಆದರೆ ಬಹುಮಟ್ಟಿಗೆ ಸಮುದ್ರದ ನೀರನ್ನು ಮಾತ್ರ ಉಪಯೋಗಕ್ಕೆ ತಂದುಕೊಳ್ಳಲಾಗಲಿಲ್ಲ. ಸಮುದ್ರದ ನೀರು ಉಪ್ಪು, ಕುಡಿಯಲು ಬರುವಂತಹುದಲ್ಲ; ವ್ಯವಸಾಯಕ್ಕೂ ಕೈಗಾರಿಕೆಗೂ ಒಗ್ಗುವಂಥದಲ್ಲ.

ಸಮುದ್ರದಿಂದ ಶುದ್ಧ ನೀರನ್ನು ಪಡೆಯಲು ಮಾನವ ಸುಮಾರು 2000 ವರ್ಷಗಳಿಂದಲೂ ಪ್ರಯತ್ನಿಸುತಿದ್ದಾನೆ. ಕ್ರಿ.ಪೂ. 42ರಲ್ಲಿ ಜ್ಯೂಲಿಯಸ್ ಸೀಸರನ ರೋಮನ್ ಪಡೆಯವರು ಸೌರಭಟ್ಟಿಗಳನ್ನು ಬಳಸಿ ಸಮುದ್ರದ ನೀರಿನಿಂದ ಕುಡಿಯುವ ನೀರನ್ನು ಪಡೆದರೆಂದು ಇತಿಹಾಸದ ದಾಖಲೆಗಳು ತಿಳಿಸುತ್ತವೆ. ಬ್ರಿಟನ್ನಿನ ನೌಕೆಗಳು ಹೆಚ್ಚು ಕಾಲ ಸಮುದ್ರದಲ್ಲಿರಲು ಸಹಾಯಕವಾಗಿ ಉಪ್ಪು ನೀರನ್ನು ಶುದ್ಧಪಡಿಸುವ ಯಂತ್ರವನ್ನು ರಚಿಸಿಕೊಟ್ಟವರಿಗೆ 950,000 ರೂ.ಗಳನ್ನು ಕೊಡುವುದಾಗಿ ಇಂಗ್ಲೆಂಡಿನ ರಾಣಿ ಒಂದನೆ ಎಲಿಜಬೆತ್ ಅವರು ಪ್ರಕಟಣೆ ಹೊರಡಿಸಿದ್ದರು.

22 ಪಿಂಟ್ ಸಮುದ್ರದ ನೀರನ್ನು ಅಷ್ಟೇ ಶುದ್ಧ ನೀರನ್ನಾಗಿ ಪರಿವರ್ತಿಸಿದ ಪ್ರಯೋಗವೊಂದನ್ನು ತಾನು ನೋಡಿದುದಾಗಿ ಅಮೆರಿಕದ ಅಧ್ಯಕ್ಷರಾಗುವುದಕ್ಕೆ ಮುನ್ನ ಥಾಮಸ್ ಜೆಫರ್‌ಸನ್ ವರದಿ ಮಾಡಿದರು. ಆ ಪ್ರಯೋಗದಲ್ಲಿ ಬಳಸಲಾದ ರಹಸ್ಯಮಯ ಸೂತ್ರ ಯಾವುದು ಎಂಬುದರ ಅರಿವು ಅವರಿಗಿರಲಿಲ್ಲ; ಆದರೂ ಸ್ವತಂತ್ರವಾಗಿ ಪ್ರಯೋಗವೊಂದನ್ನು ಕೈಗೊಂಡು 32 ಪಿಂಟ್ ಸಮುದ್ರ ಜಲದಿಂದ 31 ಪಿಂಟ್ ಶುದ್ಧ ನೀರನ್ನು ಪಡೆದರು. ಹೀಗೆ ಸಮುದ್ರದ ನೀರಿನ ಶುದ್ಧೀಕರಣದಲ್ಲಿ ಅಮೆರಿಕದ ಆಸಕ್ತಿ 1791ರಷ್ಟು ಹಿಂದೆಯೇ ಕುದುರಿತ್ತು. ಆದರೆ ಮೊದಲನೆ ಯಶಸ್ವಿ ಪ್ರಯತ್ನವೆಂದರೆ 1961ರಲ್ಲಿ ಕೆಲಸವನ್ನು ಆರಂಭಿಸಿದ ಫ್ರೀಪೋರ್ಟಿನ ಯಂತ್ರಸ್ಥಾವರ. ಉಪ್ಪು ನೀರಿನ ಕಚೇರಿಯವರು ಸ್ಥಾಪಿಸಿದ ಈ ಕಾರ್ಯಾಗಾರ ಕಳೆದ ಜೂನ್ ತಿಂಗಳಲ್ಲಿ ಚಲಿಸತೊಡಗಿತು.

ವೈಜ್ಞಾನಿಕ ಹಾಗೂ ತಾಂತ್ರಿಕ ಸಂಶೋಧನೆಗಳ ಮೂಲಕ ಪ್ರಗತಿಯನ್ನು ಸಾಧಿಸಲು ಫ್ರೀ ಪೋರ್ಟಿನ ಯಂತ್ರಾಲಯ ಒಳ್ಳೇಯ ಮುನ್ಸೂಚನೆಯಾಗಿದೆ. ಚಿತ್ರವಿಚಿತ್ರವಾದ ಆಕಾರದ ಕೊಳವೆಗಳಿಂದ ನಿಬಿಡವಾದ ಯಂತ್ರಸ್ಥಾವರ ಮೆಕ್ಸಿಕೋ ಕೊಲ್ಲಿಯಿಂದ ಉಪ್ಪು ನೀರನ್ನು ಪಡೆದು, ನಗರದ ಜನರಿಗೆ ಶುದ್ಧವಾದ ಸಿಹಿ ನೀರನ್ನು ಒದಗಿಸುತ್ತಿದೆ. 1000 ಗ್ಯಾಲನ್ನುಗಳಿಗೆ ಸುಮಾರು ಒಂದು ಡಾಲರ್ (4 75 ರೂ.) ವೆಚ್ಚದಲ್ಲಿ ಈ ಯಂತ್ರಾಲಯ ದಿನವೊಂದಕ್ಕೆ ಹತ್ತು ಲಕ್ಷಕ್ಕೂ ಹೆಚ್ಚು ಗೆಲನ್ ನೀರನ್ನು ಸಿದ್ಧಪಡಿಸುತ್ತಿದೆ.

ಫ್ರೀ ಪೋರ್ಟಿನ ನೀರಿನ ಪರಿವರ್ತನಾಲಯ ಈಗಾಗಲೇ ಯಶಸ್ವಿಯಾಗಿದೆ ಎಂಬುದನ್ನು ಪಟ್ಟಣದ 14,000 ಮಂದಿಯೂ ಬಲ್ಲರು. ಅವರೆಲ್ಲರೂ ಆ ನೀರನ್ನು ಕುಡಿದಿದ್ದಾರೆ, ಅದರಲ್ಲಿ ಸ್ನಾನ ಮಾಡಿದ್ದಾರೆ, ಬಟ್ಟೆಗಳನ್ನೂ ಒಗೆದಿದ್ದಾರೆ. ನೈಸರ್ಗಿಕ ಸಿಹಿ ನೀರು ಹಾಗೂ ಈ ಪರಿವರ್ತಿತ ಸಿಹಿ ನೀರುಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲ.

ದಕ್ಷಿಣ ಕೆಲಿಫೋರ್ನಿಯದಲ್ಲಿ ಸ್ಥಾಪಿಸಲ್ಪಟ್ಟಿರುವ, ದಿನವೊಂದಕ್ಕೆ ಒಂದು ಲಕ್ಷ ಗ್ಯಾಲನ್ ನೀರನ್ನು ಒದಗಿಸುವ ಸ್ಥಾವರವು, ನೀರಿನ ಶುದ್ಧೀಕರಣದ ವೆಚ್ಚದಲ್ಲಿ ಹೊಸ ಅಗ್ಗದ ಮಟ್ಟವನ್ನು ಸ್ಥಾಪಿಸಲು ಕಾರಣವಾಗಿದೆ. 1959ರ ಡಿಸಂಬರ್‌ನಲ್ಲಿ ಸ್ಥಾಪಿತವಾದ ಈ ಸ್ಥಾವರ ತನ್ನ ಸಾಮರ್ಥ್ಯ ಮೀರಿ ಕೆಲಸಮಾಡುತ್ತಿದೆ. ಕೆಲವೊಮ್ಮೆ 24 ಗಂಟೆಗಳ ಅವಧಿಯಲ್ಲಿ 160,000 ಗ್ಯಾಲನ್‌ಗಳಷ್ಟು ಶುದ್ಧ ನೀರನ್ನು ಉತ್ಪಾದಿಸಿದೆ.

ಈ ಸ್ಥಾವರದ ವೆಚ್ಚದ ಲೆಖ್ಖವನ್ನು ಇಡಲಾಗಿದ್ದು, ಸಾವಿರ ಗ್ಯಾಲನ್ನಿಗೆ ಒಂದು ಡಾಲರಿಗೂ ಕಮ್ಮಿ ವೆಚ್ಚ ಬರುತ್ತದೆಂದು ತಿಳಿದು ಬಂದಿದೆ.

ಸಂಶೋಧನೆ ಹಾಗೂ ಅಭಿವೃದ್ಧಿಯ ದೃಷ್ಟಿಯಿಂದ ಮುಂದಿನ ಆರು ವರ್ಷಗಳ ಅವಧಿಗೆ ಒದಗಿಸಲಾಗಿರುವ 35 ಕೋಟಿ ರೂ.ಗಳನ್ನು ವಿನಿಯೋಗಿಸಿ ಅಮೆರಿಕ ಸರಕಾರ ನಿರ್ಮಿಸಬೇಕೆಂದಿರುವ ಸ್ಥಾವರಗಳಲ್ಲಿ ಫ್ರೀ ಪೋರ್ಟಿನದು ಮೊದಲನೆಯದು ಯಾವ ವಿಧಾನ ಹೆಚ್ಚು ಸಮರ್ಥ, ಯಾವುದು ಹೆಚ್ಚು ಅಗ್ಗ ಎಂಬುದನ್ನು ಕಂಡುಹಿಡಿವ ಸಲುವಾಗಿ ಬೇರೆ ಬೇರೆ ಸ್ಥಾವರಗಳಲ್ಲಿ ಬೇರೆ ಬೇರೆ ವಿಧಾನಗಳನ್ನು ಪರೀಕ್ಷಿಸಲಾಗುವುದು.

ಈ ಮಧ್ಯೇ ಅಮೆರಿಕದ ಕೈಗಾರಿಕೆ ಸಂಸ್ಥೆಗಳೂ ಕೂಡ ಸಮುದ್ರದ ನೀರನ್ನು ಅಗ್ಗವಾಗಿ ಶುದ್ಧ ನೀರನ್ನಾಗಿ ಪರಿವರ್ತಿಸಲು ಬೃಹತ್ ಪ್ರಮಾಣದಲ್ಲಿ ಸಂಶೋಧನೆಗಳನ್ನು ನಡೆಸುತ್ತಿವೆ.

ಜನರಲ್ ಎಲೆಕ್ಟ್ರಿಕ್ ಕಂಪೆನಿಯವರು ಭಟ್ಟಿ ಇಳಿಸುವ "ವೈಪ್ಡ್ ಫಿಲ್ಮ್" ತಂತ್ರವನ್ನು ಅಭಿವೃದ್ಧಿಪಡಿಸಿದ್ದಾರೆ. ಈ ಯಂತ್ರದಲ್ಲಿ ಮುಖ್ಯವಾಗಿ ಎರಡು ಟ್ಯೂಬುಗಳಿವೆ— ಒಂದರೊಳಗೊಂದರಂತೆ. ಮೋಟಾರಿನ ಗಾಳಿ ಮರೆಯ ಗಾಜನ್ನು ಒರೆಸುವ ಪಟ್ಟಿಯಂತಹ ಪಟ್ಟಿಗಳು ಒಳಟ್ಯೂಬಿನ ಉದ್ದದಷ್ಟಿವೆ.

ಮಧ್ಯದ ಟ್ಯೂಬಿನ ಚಿಕ್ಕ ರಂಧ್ರಗಳ ಮೂಲಕ ನೀರನ್ನು ಒಳಕ್ಕೆ ತಳ್ಳಲಾಗುವುದು. ವೈಪರ್ ಬ್ಲೇಡುಗಳು ಆ ನೀರನ್ನು ತೆಳು ಪರದೆಯಂತೆ ಹಚ್ಚುವುವು. ಎರಡು ಟ್ಯೂಬುಗಳ ನಡುವೆ ಹಬೆಯನ್ನು ಹಾಯಿಸುವ ಮೂಲಕ ಸಮುದ್ರದ ನೀರನ್ನು ಕಾಯಿಸಿ ಹಬೆಯ ರೂಪಕ್ಕೆ ತಿರುಗಿಸಲಾಗುವುದು. ಅನಂತರ ಅದನ್ನು ಕೂಲರಿನಲ್ಲಿ ತಣ್ಣಗೆ ಮಾಡಿ ನೀರಾಗಿ ಪರಿವರ್ತಿಸಲಾಗುವುದು.

ಫೇರ್‌ಬ್ಯಾಂಕ್ಸ್ ವಿಟ್ನಿ ಕಾರ್ಪೊರೇಷನ್ ಘನೀಕರಣ ತಂತ್ರವನ್ನು ಬಳಸಿದೆ. ಈ ವಿಧಾನದ ಪ್ರಥಮ ಪ್ರಯತ್ನ ಇಸ್ರೇಲಿನ ನೆಗೆವ್ ಮರುಭೂಮಿಯಲ್ಲಿ ರಚಿತವಾಗಿದೆ. ಸಮುದ್ರದ ನೀರು ಗಡ್ಡೆ ಕಟ್ಟಿದಾಗ ಅದರಲ್ಲಿ ಉಪ್ಪಿನ ಅಂಶ ಇರುವುದಿಲ್ಲ ಎಂಬ ಇಸ್ರೇಲಿ ವಿಜ್ಞಾನಿ ಅಲೆಕ್ಸಾಂಡರ್ ಜಾರ್ಚಿನ್ನರ ಸಿದ್ಧಾಂತದ ಆಧಾರದ ಮೇಲೆ ಈ ಯೋಜನೆ ರೂಪುಗೊಂಡಿದೆ. ಈ ಯಂತ್ರದಲ್ಲಿ ತಣ್ಣಗೆ ಮಾಡಿದ ಸಮುದ್ರದ ನೀರನ್ನು ಗಾಳಿರಹಿತವಾದ ಟ್ಯಾಂಕಿನೊಳಗೆ ಸಿಂಪಡಿಸಲಾಗುವುದು. ಅದರಲ್ಲಿ ಸ್ವಲ್ಪ ಭಾಗ ಹಬೆಯಾಗಿ ಕಂಡೆನ್ಸರೊಳಕ್ಕೆ ಸೆಳೆಯಲ್ಪಟ್ಟು ಶುದ್ಧ ನೀರಾಗುತ್ತದೆ. ಸಿಂಪಡಿಸಲ್ಪಟ್ಟ ನೀರಿನ ಮತ್ತಷ್ಟು ಭಾಗ ಹಬೆಕರಣದ ಫಲವಾಗಿ ಘನೀಕರಿಸಲ್ಪಡುತ್ತದೆ. ಗಾಳಿರಹಿತವಾದ ಟ್ಯಾಂಕಿನ ಕೆಳಭಾಗಕ್ಕೆ ಉದುರುವ ಈ ಗಡ್ಡೆಗಳನ್ನು ಜರಡಿ ಹಿಡಿದು ಪ್ರತ್ಯೇಕಿಸಲಾಗುವುದು. ಈ ಗಡ್ಡೆಗಳು ಕರಗಿ ಶುದ್ಧ ನೀರಾಗುವುವು.

ಸೈರಾಕ್ಯೂಸ್ ವಿಶ್ವವಿದ್ಯಾನಿಲಯವು ರಸಾಯನಿಕ ವಿಧಾನವೊಂದರ ಪ್ರಯೋಗವನ್ನು ಕೈಗೊಂಡಿದೆ. ಸಮುದ್ರ ನೀರಿಗೆ ರಸಾಯನಿಕವೊಂದನ್ನು ಬೆರೆಸಿದಾಗ ಉಪ್ಪನ್ನು ಕೂಡಿಸಿಕೊಳ್ಳದ ಘನವಸ್ತುವೊಂದು ರೂಪುಗೊಳ್ಳುವುದು. ಅನಂತರ ಈ ಘನವಸ್ತುವನ್ನು ಕರಗಿಸಿ ನೀರನ್ನು ಪಡೆಯಲಾಗುವುದು. ಒಂದು ಸಾರೆ ಉಪಯೋಗಿಸಿದ ರಸಾಯನಿಕವನ್ನು ಮತ್ತೆಮತ್ತೆ ಉಪಯೋಗಿಸಲಾಗುವುದು. ಈ ನೀರಿನ ಶುದ್ಧೀಕರಣಕ್ಕೆ ಜೀವಶಾಸ್ತ್ರೀಯ ವಿಧಾನವೊಂದನ್ನೂ ಬಳಸಲಾಗುತ್ತಿದೆ. ಬಹು ಸೂಕ್ಷ್ಮವಾದ ಏಕ ಸೆಲ್ಲಿನ ಆಲ್ಗೆ ಎಂಬ ಮೂಲ ಸಸ್ಯಗಳನ್ನು ಸಮುದ್ರದ ನೀರಿನಲ್ಲಿ ಹಾಕಿದಾಗ ಅವು ಉಪ್ಪನ್ನು ಹೀರಿಕೊಂಡು ನೀರಿನಲ್ಲಿರುವ ಉಪ್ಪಿನ ಪ್ರಮಾಣವನ್ನು ಕಮ್ಮಿ ಮಾಡುತ್ತವೆ. ಕೆಲಿಫೋರ್ನಿಯ ವಿಶ್ವವಿದ್ಯಾನಿಲಯದಲ್ಲಿ ನಡೆಸಲಾಗುತ್ತಿರುವ ಈ ಪ್ರಯೋಗ ಯಶಸ್ವಿಯಾದರೆ, ಬಹು ಉಪಯುಕ್ತವಾದೀತು. ಈ ವಿಷಯದಲ್ಲಿ ಕಾಯಿಸುವ, ಶೈತ್ಯಕರಿಸುವ ಇತ್ಯಾದಿ ಯಾವ ಬಾಹ್ಯ ಸಾಧನವೂ ಅವಶ್ಯವಿಲ್ಲ.

ಪ್ರಕೃತ ಅಮೆರಿಕದಲ್ಲಿ ನಡೆಯುತ್ತಿರುವ ಪ್ರಯೋಗಗಳ ವಿಷಯದಲ್ಲಿ ಪ್ರಪಂಚದ ಎಲ್ಲಾ ಕಡೆಯ ಬಣ ಪ್ರದೇಶಗಳವರು ತೀವ್ರವಾದ ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಇಸ್ರೇಲಿನಂತೆ, ತೈಲಸಮೃದ್ಧವಾದ ಆದರೆ ಜಲ ಅಭಾವದ ಮತ್ತೊಂದು ಮರುಭೂಮಿಯಾದ ಕುವಾಯಿತ್ ಕೂಡ ನೀರಿನ ಶುದ್ಧೀಕರಣದ ಸ್ಥಾವರದ ಸ್ಥಾಪನೆಯ ವಿಷಯದಲ್ಲಿ ಅಮೆರಿಕದ ಸಹಕಾರವನ್ನು ಬಯಸಿದೆ. ಕುಡಿಯುವ ನೀರಿನ ಜೊತೆಗೆ ನೀರಾವರಿಗೂ ಅನುಕೂಲವಾಗುವಂತೆ ಬೃಹತ್ ಪ್ರಮಾಣದ ಶುದ್ಧೀಕರಣದ ಯಂತ್ರ ಸ್ಥಾವರವನ್ನು ಕುವಾಯಿತ್ ಮೆಸಾಚುಸೆಟ್ಸಿನ ಸಂಸ್ಥೆಯೊಂದರಿಂದ ಕೊಂಡಿದೆ. ಉಪ್ಪನ್ನು ಬೇರ್ಪಡಿಸುವ ಸ್ಥಾವರಗಳಲ್ಲಿ ಕುವಾಯಿತ್ತಿನದೇ ಅತ್ಯಂತ ದೊಡ್ಡ ಯಂತ್ರ.

"ಮರುಭೂಮಿಗಳಲ್ಲಿ ಹೂವುಗಳು ಅರಳುವಂತೆ ಮಾಡುವುದೇ" ಈ ಕಾರ್ಯಕ್ರಮದ ಉದ್ದೇಶ ಎಂಬುದಾಗಿ ಅಮೆರಿಕಾಧ್ಯಕ್ಷ ಕೆನೆಡಿ ಅವರು ಫ್ರೀಪೋರ್ಟಿನ ಸ್ಥಾವರದ ಆರಂಭೋತ್ಸವದಲ್ಲಿ ನುಡಿದರು. ಈ ಯೋಜನೆ ಯಶಸ್ವಿಯಾದರೆ ಪ್ರಪಂಚದ ಮರುಭೂಮಿಗಳಲ್ಲಿ ವಾಸಿಸುತ್ತಿರುವವರಿಗೆ ಅಥವಾ ಸಮುದ್ರದ ದಂಡೆಗಳಲ್ಲಿ ಇರುವವರಿಗೆ ಮಹತ್ತರವಾದ ಭಗವತ್ಕೃಪೆ ಲಭಿಸಿದಂತಾಗುವುದು.

———

ಪುರಂದರದಾಸರು ಕಂಡ

ಲೋಕದ ರೀತಿನೀತಿಗಳು

ಡಾ| ವಿ. ಎ. ಶೆಣೈ, ಬಿ.ಎಸ್‌ಸಿ. (ಆನರ್ಸ್), ಬಿ.ಎಸ್‌ಸಿ. (ಟೆಕ್), ಪಿ.ಎಚ್‌ಡಿ. (ಟೆಕ್)

6. ತಾಯಿಗೆ ಅನ್ನವನ್ನು ಹಾಕದೆ, ಸೊಗಸಾದ ಮಾತಿಗೆ ಮರುಳಾಗಿ, ನ್ಯಾಯವನ್ನು ಬಿಟ್ಟು, ಅನ್ಯಾಯವೇ ಗತಿ ಎಂದು ಸಾಧಿಸುವ ಜನರಿಗೇನೆನ್ನಬೇಕು? ಅವರು ಮನೆಯಲ್ಲಿ ಉತ್ತಮಳಾದ ಹೆಂಡತಿಯಿದ್ದರೂ, ಅವಳನ್ನು ಕಡೆಗಣಿಸಿ, ತಮ್ಮ ಗಳಿಕೆಯೆಲ್ಲವನ್ನೂ ಸೂಳೆಯರಿಗೆ ಕೊಟ್ಟು, ಮಿತ್ರರಾದವರೊಡನೆ ಕೂಡಿ, ಕೆಟ್ಟುಹೋಗಿ ಈ ಜಗದಲ್ಲಿ ಉತ್ತಮರೆನಿಸುತ್ತಾರೆ. ಪುರುಷರು ಹೀಗಾದ ಮೇಲೆ ಸ್ತ್ರೀಯರೂ ಸುಮ್ಮನಿರರು. ಅವರು ಗಂಡನನ್ನು ಬಿಟ್ಟು ಪರ ಪುರುಷರೊಡನೆ ಸರಸವಾಡುತ್ತಾರೆ. ಈ ಲೋಕದಲ್ಲಿ ಇಂಥ ನಡತೆಯೇ ಹೆಚ್ಚು. ಹಣವುಳ್ಳ ಹೊಲೆಯರು ಉತ್ತಮರೆಂದು ಬಗೆದು, ಅವರನ್ನು ಹೊಗಳಿ, ಮನೆಗೆ ಕರೆದು, ವಿಶೇಷವಾಗಿ ಉಪಚರಿಸುವರು. ಆದರೆ ಬಡವರನ್ನು ಮಾತ್ರ ಮನೆಗೆ ಕರೆಯುವುದಿಲ್ಲ. ಇಂಥವರ ನಡತೆಯು ಹೇಗಿದ್ದರೂ, ಅದು ನಿಷ್ಪ್ರಯೋಜಕವಾಗುತ್ತದೆ.

7. ಈ ಕಾಲವು ಕಡು ಮೂರ್ಖರಿಗೇ ತಕ್ಕುದಾಗಿದೆ; ಸತ್ಯವಂತರಿಗೆ ಹೇಳಿದುದಲ್ಲ. ಈ ಕಾಲದಲ್ಲಿ ಹರಿಸ್ಮರಣೆಮಾಡುವವರಿಗೆ ದುರ್ಭಿಕ್ಷವೂ ಪರಮ ಪಾಪಿಗಳಿಗೆ ಸುಭಿಕ್ಷವೂ ಪ್ರಾಪ್ತವಾಗುತ್ತವೆ. ಸ್ಥಿರವಾದ ಪತಿವ್ರತೆಯರು ಪರನಿಂದೆಗೂ, ಜಾರೆಯು ಲೋಕದ ಹೊಗಳಿಕೆಗೂ ಪಾತ್ರರಾಗುತ್ತಾರೆ. ಈಗ ಉಪಕಾರ ಮಾಡಿದರೆ ಅಪಕಾರವೇ ಪ್ರತಿಫಲವಾಗಿ ದೊರಕುತ್ತದೆ. ಸಕಲವನ್ನು ತಿಳಿದವನಿಗೆ ದುರ್ಭಿಕ್ಷವು ಕಾದಿರುತ್ತದೆ. ನಿಜವಾಗಿಯೂ ವಿಪರೀತವಾದ ಈ ಕಾಲದಲ್ಲಿ ಗಂಡನನ್ನೂ ಮಕ್ಕಳನ್ನೂ ನಂಬಲಾಗದು. ಒಬ್ಬನು ಧರ್ಮಮಾಡಿದರೆ ಅವನು ನಿರ್ಮೂಲವಾಗುತ್ತಾನೆ. ದುಷ್ಕರ್ಮಿಗಳು ಸುಖದಿಂದ ಕಾಲ ಕಳೆಯುತ್ತಾರೆ. ಈ ಕಾಲದಲ್ಲಿ ಧರ್ಮಕ್ಕೆ ಏಳಿಗೆಯಿಲ್ಲ; ಪಾಪಕರ್ಮಕ್ಕೆ ಮನಸೋಲುತ್ತದೆ. ಜನರನ್ನು ದಂಡಿಸುವವರಿಗೂ, ದ್ರೋಹವನ್ನು ಬಗೆಯುವವರಿಗೂ, ಪುಂಡುಪೋಕರಿಗಳಿಗೂ, ದುಷ್ಟರಿಗೂ, ನಾಚಿಕೆಯಿಲ್ಲದವರಿಗೂ, ಸುಳ್ಳು ಹೇಳುವವರಿಗೂ, ನಿತ್ಯ ಹಾದರಮಾಡುವವರಿಗೂ, ತೊತ್ತು ಕಾಟಕಿಗಳಿಗೂ ಸುಭಿಕ್ಷವೂ; ಹೆತ್ತ ತಾಯಿಗೂ, ಹೆಂಡತಿ ಮಕ್ಕಳಿಗೂ, ಅಲೆಯುವ ದಾಸರಿಗೂ, ಉತ್ತಮರಿಗೂ ದುರ್ಭಿಕ್ಷವೂ ಕಾದಿರುತ್ತವೆ. ಈಗ ಸುಳ್ಳು ಸತ್ಯವಾಗುತ್ತದೆ; ಸುರಸವು ಕಸವಾಗುತ್ತದೆ; ಸೊಸೆಯು ಅತ್ತೆಯನ್ನು ದಂಡಿಸುತ್ತಾಳೆ ಮತ್ತು ದೇವರನ್ನು ಮನಸ್ಸಿನಲ್ಲಿ ಸ್ತುತಿಸುವವರಿಗೆ ಈ ಕಾಲವು ಯೋಗ್ಯವಾದುದಲ್ಲ.

8. ಭಾಗವತರಿಗೆ ವಂದಿಸದೆ ಹೋಗುತ್ತಾರೆ. ಬೆಳಗ್ಗೆ ಎದ್ದು ದೇವರನ್ನು ನೆನೆಯದೆ ಗೊಡ್ಡುಹರಟೆಯಲ್ಲಿ ಕಾಲ ಕಳೆಯುತ್ತಾರೆ. ನಿತ್ಯವೂ ಶ್ರೀ ತುಳಸಿಗೆ ನೀರೆರೆದು ನಿರಂತರವೂ ತುಳಸಿಕಟ್ಟೆಯ ಮಣ್ಣನ್ನು ಹಣೆಗೆ ಹಚ್ಚಿದವನನ್ನು ಮರೆತು, ಪ್ರಾತಃಸ್ನಾನವನ್ನು ಮಾಡದೆ ಮನೆ ಮನೆಗೆ ಹೋಗಿ ಚಾಡಿಮಾತುಗಳನ್ನು ಹೇಳಿ ಉಣ್ಣುವವನನ್ನೂ, ಶ್ರೇಷ್ಠವಾದ ಮಧ್ವಶಾಸ್ತ್ರದಲ್ಲಿ ಮನಸ್ಸನ್ನು ಹರಿಯಗೊಡದೆ ಮತಿಹೀನನಾದವನನ್ನೂ ದೇವರಾದರೂ ಹೇಗೆ ಉದ್ಧಾರ ಮಾಡಿಯಾನು? ಅವರು ಗುರುಹಿರಿಯರ ಸೇವೆಯನ್ನು ಜರೆದು, ನಿರಂತರವೂ ಪರನಿಂದೆಯಲ್ಲಿ ನಿರತರಾಗುತ್ತಾರೆ. ಅವರು ಪರಸ್ತ್ರೀ ಮತ್ತು ಪರಧನ ತಮ್ಮ ಕೈಸೇರಿತೆಂದುಕೊಂಡು ಪರಲೋಕದ ಭಯವನ್ನು ಗಣಿಸದೆ ತಿರುಗುತ್ತಾರೆ ಮತ್ತು ಹೆಂಡತಿ ಮಕ್ಕಳ ಚಿಂತನೆಯಲ್ಲಿದ್ದು ಪರದೈವವನ್ನು ಮರೆಯುತ್ತಾರೆ. ಅವರು ಕೃಪಣತನದಿಂದ ಸರಿಯಾಗಿ ಬಟ್ಟೆಯುಡದೆ, ಬೇಕಷ್ಟು ಉಣ್ಣದೆ, ಹರಿಸೇವೆಯನ್ನು ಮಾಡದೆ, ಸಾಧುಸಜ್ಜನರೊಡನೆ ಕೂಡದೆ, ದಾನಮಾಡದೆ, ಪುಣ್ಯವನ್ನು ಗಳಿಸದೆ, ಕಡು ಮೂರ್ಖರಾಗಿ ವಿಷಯಲೋಲುಪರಾಗಿ, ದೇವರ ಚರಣಕ್ಕೆ ಬಾಗದೆ ಕೊನೆಗೆ ಎದೆಗೆಡುತ್ತಾರೆ.

9. ಈ ಲೋಕದ ದುರ್ಜನರು ಜಾಲಿಯ ಮರದಂತೆ ಇದ್ದಾರೆ. ತುದಿಯಿಂದ ಬುಡದ ವರೆಗೆ ಮುಳ್ಳಿನಿಂದ ಕೂಡಿದ್ದು, ಬಿಸಿಲಲ್ಲಿ ಬಳಲಿ ಬಂದವರಿಗೆ ನೆರಳನ್ನು ಕೊಡದಂಥ; ಹಸಿದು ಬಂದವರಿಗಾಗಿ ಕೊಡಲು ಹಣ್ಣು ಇಲ್ಲದ; ಪರಿಮಳದ ಹೂವನ್ನು ಕೊಡದ; ಕೂಡಲು ಸ್ಥಳವಿಲ್ಲದ; ಹಣ್ಣಿನಲ್ಲಿ ವಿಷದಂತೆ ಕಹಿಯಾದ ರಸವುಳ್ಳ ಜಾಲಿಯ ಮರದಂತೆ ದುರ್ಜನರು ಎಂದಿಗೂ ಪರೋಪಕಾರವನ್ನು ಮಾಡರು. ಇಂಥವರಿಗೆ ಎಷ್ಟು ಹೇಳಿದರೂ ಪ್ರಯೋಜನವಿಲ್ಲ. ಊರ ಹಂದಿಗೆ ಷಡ್ರಸಾನ್ನವನ್ನು ಕೊಟ್ಟರೆ ಅದು ದುರ್ಗಂಧವನ್ನು ಬಿಟ್ಟೀತೇ? ಹಾಗೆಯೇ ಘೋರ ಪಾಪಿಗೆ ತತ್ವಜ್ಞಾನವನ್ನು ಹೇಳಿದರೆ ಅವನು ಕ್ರೂರಕರ್ಮಗಳನ್ನು ಬಿಟ್ಟು ಸುಜನನಾಗಲಾರನು. ಆದರೆ, ಚಮತ್ಕಾರದ ಮಾತುಗಳಿಗೆ ಮಾತ್ರ ಅವರಲ್ಲಿ ಕೊರತೆಯಿಲ್ಲ. ಇವರು ಅನ್ನಕ್ಕಾಗಿ ಬಂದು ಬಿದ್ದಿರುವ ನಾಯಿಗಳಂತೆ. ಲೋಕಕ್ಕೆ ಇಂಥವರ ಅವಶ್ಯಕತೆಯೂ ಇರುತ್ತದೆ!

10. ಪರನಿಂದೆ ಮಾಡುವವರೂ ಬೇಕಯ್ಯ! ಏಕೆಂದರೆ ಆ ನಿಂದಕರು ಊರಕೇರಿಯಲ್ಲಿನ ಹಂದಿಯಂತಿರುತ್ತಾರೆ. ಆಗಾಗ ಮಾಡಿದ ಪಾಪವೆಂಬ ಮಲವನ್ನು ಈ ನಿಂದಕರು ತಿಂದುಹೋಗುತ್ತಾರೆ; ಆದರೆ, ನಮ್ಮನ್ನು ವಂದಿಸಿ, ಸ್ತುತಿಸುವವರಾದರೋ—ನಾವು ಗಳಿಸಿದ ಪುಣ್ಯವನ್ನು ಒಯ್ಯುತ್ತಾರೆ. ಈ ಸೃಷ್ಟಿಯಲ್ಲಿ ದುಷ್ಟಜನರಿದ್ದರೇನೇ ಶಿಷ್ಟಜನರಿಗೆ ಕೀರ್ತಿಯು ಬರುತ್ತದೆ.

11. ಉದಯಕಾಲದಲೆದ್ದು, ಚಳಿಗೆ ನಡುಗುತ್ತ ನದಿಯಲ್ಲಿ ಮಿಂದೆನೆಂದು ಹಿಗ್ಗಿ, ಮದ ಮತ್ಸರ ಕ್ರೋಧಾದಿಗಳನ್ನು ಮನಸ್ಸಿನೊಳಗಿಟ್ಟು, ಬಳಿಯಲ್ಲಿದ್ದವರಿಗೆ ಆಶ್ಚರ್ಯವನ್ನುಂಟುಮಾಡುವುದು ಉದರವೈರಾಗ್ಯವಾಗಿದೆ. ಕಂಚುಗಾರನ ಬಿಡಾರದಂತೆ, ಕಂಚು ಹಿತ್ತಾಳೆಗಳ ಅನೇಕ ಪ್ರತಿಮೆಗಳನ್ನು ಒಟ್ಟು ಸೇರಿಸಿ, ಅವು ಹೊಳೆಯಬೇಕೆಂದು ಅನೇಕ ದೀಪಗಳನ್ನು ಹಚ್ಚಿ ವಂಚನೆಯಿಂದ ಪೂಜೆ ಮಾಡುವುದೂ, ಕೈಯಲ್ಲಿ ಜಪಮಣಿಯನ್ನು ಹಿಡಿದು, ಬಾಯಿಯಲ್ಲಿ ಮಂತ್ರವನ್ನುಚ್ಚರಿಸಿ, ಮುಖದ ಮೇಲೆ ಮುಸುಕನ್ನು ಹಾಕಿ, ಪರಸ್ತ್ರೀಯರ ಗುಣವನ್ನೆ ಮನಸ್ಸಿನಲ್ಲಿ ಸ್ಮರಿಸಿ, ಪರಮ ವೈರಾಗ್ಯಶಾಲಿಯೆನಿಸುವುದೂ, ಠಕ್ಕುತನದಿಂದ ಬಹಳ ಭಕ್ತಿಯನ್ನು ಪ್ರದರ್ಶಿಸಿ, ತನಗೆ ಸಮಾನರು ಯಾರೂ ಇಲ್ಲವೆಂದೆಣಿಸಿ, ಊಟಕ್ಕೆ ಯಾವ ದಾರಿ ಎಂಬುದರ ಕಡೆಗೆ ಲಕ್ಷ್ಯಗೊಡದೆ, ನಾಟಕ ಸ್ತ್ರೀಯಂತೆ ಡಂಭವನ್ನು ತೋರಿಸುವುದೂ, 'ನಾನು' ಎಂಬುದನ್ನು ಬಿಟ್ಟು ಜ್ಞಾನಿಗಳೊಡನೆ ಆಡಿ, ಹರಿಪ್ರೇರಣೆಯಿಂದು ಏನನ್ನಾದರೂ ಧ್ಯಾಪಿಸಿ, ಮೌನದಿಂದ ದೇವರನ್ನು ಕಾಣದೆ ಮಾಡುವ ಎಲ್ಲ ಕಾರ್ಯಗಳೂ ಉದರ ವೈರಾಗ್ಯವೇ ಆಗಿವೆ." —— [ಸಶೇಷ]

ತಾ: 1—10—1961ರಿಂದ ಬದಲಾವಣೆಗೊಂಡ

ರೈಲ್ವೇ ಸಮಯ

ಮಂಗಳೂರಿಂದ ಹೊರಡುವ ಬಂಡಿಗಳು

1 ಮಂಗಳೂರು—ಕಣ್ಣಾನೂರು ಪೆಸೆಂಜರ್—ಬೆಳಗ್ಗೆ 5-20
2 ಮಂಗಳೂರು—ಮದ್ರಾಸ್ ಮೈಲ್ —ಬೆಳಗ್ಗೆ 9-30
3 ಮಂಗಳೂರು—ಕಲ್ಲಿಕೋಟೆ ಪೆಸೆಂಜರ್—ಮಧ್ಯಾಹ್ನ 1-00
4 ಮಂಗಳೂರು—ಕಾಸರಗೋಡು ಪೆಸೆಂಜರ್—ಸಾಯಂ. 5-30
5 ಮಲಬಾರ್ ಎಕ್ಸ್‌ಪ್ರೆಸ್ —ಸಾಯಂ. 6-50

ಮಂಗಳೂರಿಗೆ ತಲಪುವುದು

1 ಕಣ್ಣಾನೂರು—ಮಂಗಳೂರು ಪೆಸೆಂಜರ್—ಬೆಳಗ್ಗೆ 9-20
2 ಮಲಬಾರ್ ಎಕ್ಸ್‌ಪ್ರೆಸ್ —ಬೆಳಗ್ಗೆ 11-50
3 ಮದ್ರಾಸ್—ಮಂಗಳೂರು ಮೈಲ್ ಮಧ್ಯಾಹ್ನ 3-45
4 ಕಲ್ಲಿಕೋಟೆ—ಮಂಗಳೂರು ಪೆಸೆಂಜರ್—ಸಾಯಂ. 5-05
5 ಕೊಚ್ಚಿನ್—ಮಂಗಳೂರು ಪೆಸೆಂಜರ್—ರಾತ್ರಿ 10-25

ದಕ್ಷಿಣ ಕನ್ನಡ ಜಿಲ್ಲೆಯ ಸ್ವತಂತ್ರ ಪಕ್ಷದ ಸ್ಪರ್ಧಿಗಳು

ಸ್ವಾತಂತ್ರ್ಯ ಪಕ್ಷದ ಕೇಂದ್ರ ಸಮಿತಿಯು ಮುಂಬರುವ ಮಹಾಚುನಾವಣೆಗಳಲ್ಲಿ ಸ್ಪರ್ಧಿಸುವರೆ ಈ ಕೆಳಗಿನ ಅಭ್ಯರ್ಥಿಗಳನ್ನೂ ಆಯಾ ಕ್ಷೇತ್ರಗಳಿಗೆ ಆಯ್ಕೆಮಾಡಿ ಈಗಾಗಲೇ ಚುನಾವಣಾ ಕಾರ್ಯಗಳನ್ನು ಆರಂಭಿಸಲು ಅನುಮತಿ ಕೊಡಲಾಗಿದೆ.

1. ದಕ್ಷಿಣ ಕನ್ನಡ ಲೋಕಸಭೆಯ ದಕ್ಷಿಣ ಮತದಾರ ಕ್ಷೇತ್ರ ಶ್ರೀ| ಜೆ. ಎಂ. ಲೋಬೊ ಪ್ರಭು, ಐ. ಸಿ. ಯಸ್., (ನಿವೃತ).

2. ಮೈಸೂರು ವಿಧಾನಸಭೆಯ ಮಂಗಳೂರು Iನೇ ಮತದಾರ ಕ್ಷೇತ್ರಕ್ಕೆ ಮಂಗಳೂರು ಮುನ್ಸಿಪಲ್ ಉಪಾಧ್ಯಕ್ಷೆ ಶ್ರೀಮತಿ ಲೋರಾ ಪಾಯಸ್.

3. ಮಂಗಳೂರು IIನೇ ಮತದಾರ ಕ್ಷೇತ್ರಕ್ಕೆ ಶ್ರೀ| ಎಚ್. ನಾಗಪ್ಪ (ನಿವೃತ್ತ ಜಿಲ್ಲಾ ಸೇಲ್ಸ್ ಟೇಕ್ಸ್ ಆಫೀಸರ್).

4. ಪಾಣೆಮಂಗಳೂರು ಕ್ಷೇತಕ್ಕೆ ಡಾ| ಎಂ. ಸದಾಶಿವ ಹೆಗ್ಡೆ.

5. ಪುತ್ತೂರು ಸಾಮಾನ್ಯ ಮತದಾರ ಕ್ಷೇತ್ರಕ್ಕೆ ಶ್ರೀ| ಕೆ. ಉಗ್ಗಪ್ಪ ಶೆಟ್ಟಿ, ಬಿ. ಎ. ಬಿ. ಎಲ್.

6. ಬೆಳ್ತಂಗಡಿ ಮತದಾರ ಕ್ಷೇತ್ರಕ್ಕೆ ಶ್ರೀ| ಬಿ. ಜಿನರಾಜ ಹೆಗ್ಡೆ, ಬಿ. ಎ., ಬಿ. ಎಲ್.

ಪುತ್ತೂರು ಕಾದಿಟ್ಟಸ್ಥಾನ ಹಾಗೂ ಕೊಡಗಿನ ಎರಡು ಸ್ಥಾನಗಳಿಗೂ ಹುರಿಯಾಳುಗಳನ್ನು ಪ್ರತ್ಯೇಕ ಪ್ರಕಟಿಸಲಾಗುವುದು.

7. ಉತ್ತರ ಲೋಕಸಭಾ ಮತದಾರ ಕ್ಷೇತ್ರಗಳ ಪೈಕಿ ಮೂಡಬಿದಿರೆ ವಿಧಾನ ಸಭಾ ಕಾದಿಟ್ಟ ಮತದಾರ ಕ್ಷೇತ್ರಕ್ಕೆ ಮಂಗಳೂರು ನಗರಸಭಾ ಸದಸ್ಯರಾದ ಶ್ರೀ| ಎಸ್. ಗೋಪಾಲ ಸಾಲೆನ್ನ.

—೦—

ತುಳು ಸಂಧಿಯ ಕತೆ: ೧೩.

ಗಾರುಡಿಗ ಕೃಷ್ಣ

ಬೆಳ್ಳಿದೇವ ಮತ್ತು ಗಾಳಿದೇವ ಇವರ ತಂಗಿ ಗುಂಡದಚ್ಚಿ ಮದುಮಗಳು "ಅನ್ನಂಪ್ರಾಯಿದಿ" (ಅನ್ನಪೂರ್ಣೆ) ಸೀತೆ. ಸೀತೆಯು ಅಣ್ಣನಾದ ಬೆಳ್ಳಿದೇವನ ಅರಮನೆಯಲ್ಲಿದ್ದಳು.

ಸೀತೆಯನ್ನು ವಿವಾಹವಾಗುವುದಕ್ಕೆ ಶ್ರೀ ಕೃಷ್ಣನು ಬಯಸಿದನು. ಅತನು ನೆಂಟಸ್ತಿಕೆಯ ಮಾತುಕತೆಗೆ ನಾಲ್ವರು ಬ್ರಾಹ್ಮಣ ಮಹಾಶಯರನ್ನು ಬೆಳ್ಳಿದೇವನ ಅರಮನೆಗೆ ಕಳುಹಿಸಿಕೊಟ್ಟನು.

ಬಂದುಕೊಂಡಂತಹ ನಾಲ್ವರು ಬ್ರಾಹ್ಮಣರಾದ ನೆಂಟರನ್ನು ಅರಮನೆಯಲ್ಲಿ ಬೆಳ್ಳಿದೇವ ಆದರದಿಂದ ಸ್ವಾಗತಿಸಿದನು. ನೆಂಟರನ್ನು ತೂಗುಯ್ಯಾಲೆಯಲ್ಲಿ ಕೂತುಕೊಳ್ಳಿಸಿ ಅವರಿಗೆ ಕುಡಿಯುವುದಕ್ಕೆ ಸೀಯಾಳ ಕೊಡಿಸಿದನು. ತಾಂಬೂಲ ನೀಡಿದನು. ಆ ಮೇಲೆ ವಿಚಾರಿಸಿದನು:

"ನೀವು ಎಲ್ಲಿಂದ ಬಂದ ನೆಂಟರು? ಯಾವ ಕಾರ್ಯಾರ್ಥವಾಗಿ ಬಂದಿರಿ?"

"ನಾವು ಕೃಷ್ಣಕುಮಾರನ ಕಡೆಯಿಂದ ಬಂದಂತಹ ರಾಯಭಾರಿಗಳು. "ಜೋವೆ ನಾಟಿಕ" (ವಧು ಶೋಧ)ಕ್ಕೆ ಬಂದವರು. ಮಾರುವ ಕೋಣ ಉಂಟೇ, ಕೊಡುವ ಜೀವು ಉಂಟೇ ಎಂತ ವಿಚಾರಿಸಲು ಬಂದಂಥವರು ನಾವು."

"ಮಾರುವ ಕೋಣ ಮಾರಿಹೋಗಿದೆ. ಕೊಡುವ ಹೆಣ್ಣು ಕೊಟ್ಟುಹೋಗಿದೆ."

"ಕೊಟ್ಟುದುದರ ಮಾತು ಬಿಡಿ. ಇದ್ದುದರ ಪ್ರಸ್ತಾಪ ಮಾತಾಡುವಾ."

"ಇದ್ದಿರುವುದು ಸಣ್ಣ ಹುಡುಗಿ. ಅದಕ್ಕೆ ಜಾರಿದ ಸೀರೆಯನ್ನು ಮರಳಿ ಎತ್ತಿ ಉಟ್ಟುಕೊಳ್ಳುವುದಕ್ಕೆ ಗೊತ್ತಿಲ್ಲ. "ನುಗುರಿನ ತರಿ" (ಕೆದರಿದ ತಲೆ)ಯನ್ನು ಪುನಃ ಕಟ್ಟಲಿಕ್ಕೆ ಅರಿಯದು."

"ನಮ್ಮ ಹುಡುಗ ಕೂಡ ಚಿಕ್ಕವನು. ಜಾರಿದ "ಜಟ್ಟಿ" (ಚಲ್ಲಣ)ಯನ್ನು ಮರಳಿ ಮೇಲುಟ್ಟುಕೊಳ್ಳುವುದಕ್ಕೆ ಆಳೊಬ್ಬನು ಬೇಕು."

"ಹೆಣ್ಣು ಯಾರಿಗೆ?"

"ಕೃಷ್ಣಕುಮಾರನಿಗೆ."

ಬೆಳ್ಳಿದೇವ ಕ್ಷಣಹೊತ್ತು ವಿಚಾರಕ್ಕೊಳಗಾದನು. ಬಳಿಕ ಹೀಗೆಂದು ಬ್ರಾಹ್ಮಣರಿಗೆ ಉಸುರಿದನು:

"ಹೀಗಾದಲ್ಲಿ ನನ್ನ ಮಟ್ಟಿಗೆ ಈ ನೆಂಟಸ್ತಿಕೆಯಾದರೆ ಆದೀತೆಂದು ತೋರುತ್ತದೆ. ಆದರೆ, ಮದುವೆಯಾಗಿಕೊಳ್ಳುವಂತಹ ನನ್ನ ತಂಗಿಯಾದ ಸೀತೆಯ ಅಭಿಪ್ರಾಯವನ್ನು ಪ್ರಥಮತಃ ನಾನು ಲಕ್ಷಿಸಬೇಕಾಗಿದೆ. ಅದು ಕಾರಣ ಅವಳೊಡನೆ ವಿಚಾರಿಸಿ ಬರುತ್ತೇನೆ."

ಬೆಳ್ಳಿದೇವ ಅಂತಃಪುರಕ್ಕೆ ಸರಿದು, ಅಲ್ಲಿ ತನ್ನ ತಂಗಿ ಸೀತೆಗೆ ಈ ರೀತಿಯಾಗಿ ಬೆಸಸಿದನು:

"ಸೀತೇ, ಕೃಷ್ಣಕುಮಾರನು ನಿನ್ನನ್ನು ವಿವಾಹವಾಗುವುದಕ್ಕೆ ಇಚ್ಛಿಸಿ, ಸಂಧಾನದ ಮಾತುಕತೆಗೆ ತನ್ನ ರಾಯಭಾರಿಗಳನ್ನು ಕಳುಹಿಸಿದ್ದಾನೆ. ಅವರಿಗೆ ನಾನು ಮಾತು ಕೊಡುವ ಮೊದಲು ನಿನ್ನ ಅಭಿಪ್ರಾಯವನ್ನು ತಿಳಿದುಕೊಳ್ಳುವ ಉದ್ದೇಶದಿಂದ ನಿನ್ನ ಬಳಿಗೆ ಬಂದಿರುತ್ತೇನೆ. ಏನು, ನಿನಗೆ ಕೃಷ್ಣನ ಮೇಲೆ ಖುಷಿ ಇದೆಯೇ? ನಾನು ಮಾತು ಕೊಡಬಹುದೇ?"

ಅಷ್ಟು ಕೇಳಿದ್ದೇ ಸೀತೆ, ಒಡನೇ ಸಟದು ಸಿಡಿಮಿಡಿಯಂತಾದಳು. ಅವಳು ಚಟಪಟನೇ ಕೇಗಾಡಿದಳು:

"ಏನು? ಆ ಕೃಷ್ಣ? ಆ ಕಳ್ಳ ಕೃಷ್ಣ? ದನ ಕಾಯುವ ಆ ಗೋಪಾಲನೊಡನೆ ನನ್ನ ಮದುವೆಯೇ? ಸೆಗಣಿ ಹಕ್ಕಿ ಬೆರಣಿ ಹಚ್ಚುವ ಕೃಷ್ಣ! ಬೆಣ್ಣೆ ಕಳ್ಳ ಕೃಷ್ಣ! ಅಂಗಡಿ ಅಂಗಡಿ ಅಲೆದು ಬಾಳೇ ಅವಲಕ್ಕಿಗಳನ್ನು ಗವಗವ ನುಂಗುವ ತಿಂಡಿ ಬಾಕ! ಸ್ತ್ರೀಯರ ಸೀರೆಗಳನ್ನು ಕದಿಯುವ ತುಡುಗ, ಗೋಪಿಗಳ ನಲ್ಲ! ಪರಸ್ತ್ರೀ ಕಾಮುಕ! ಅಣ್ಣಾ, ಅಂತಹನೊಡನೆ ನನ್ನ ವಿವಾಹವನ್ನು ನೀವು ಮಾಡುವುದಾದರೆ, ಇದೋ!—ನನ್ನನ್ನು ಈಗಲೇ ದೇವೇಂದ್ರನ ಗುಂಡಿಗೆ ದೊಬ್ಬಿ ಗುಂಡಿ ನಿಗಿಚಿಸಿ ಬಿಡಿರಿ. ಅಣ್ಣಾ! ನಾನು ಆ ಖಳನಾಯಕ ದುರುಳ ಕೃಷ್ಣನನ್ನು ಮದುವೆಯಾಗಲಾರೆ! ನಾನು ಭೂಮಿಗೆ ಬಿನ್ನೂರುವುದಿಲ್ಲ, ಆಕಾಶಕ್ಕೆ ಹೊಟ್ಟೆ ತೆರಹುದಿಲ್ಲ. ಗಂಡಸರ ಮುಖವನ್ನು ನೋಡುವುದಿಲ್ಲ. ನನಗೆ ಗಂಡ ಬೇಡ ಅಣ್ಣಾ! ಬಂದವರಿಗೆ ಮಾತು ಕೊಡಬೇಡಿರಿ."

ಅಣ್ಣನಾದ ಬೆಳ್ಳಿದೇವ ತಂಗಿಯ ಕೋಪ ನಿಂದೆ ನಿರಾಕರಣೆಯನ್ನು ಅರಿತವನೇ ಅಂತಃಪುರದಿಂದ ಹೊರಳಿದನು.

ಬಂದುಕೊಂಡಂತಹ ವಧು ಶೋಧಕರಲ್ಲಿ ಒಬ್ಬಾತನು, ಬೆಳ್ಳಿದೇವ ಅಂತಃಪುರಕ್ಕೆ ತೆರಳಿದಾಗ ಅತನ ಹಿಂದೆಯೇ ಅನುಸರಿಸಿ ಹೋಗಿದ್ದನು. ಅತನು ಬಾಗಿಲ ಮರೆಯಲ್ಲಿ ನಿಂತು ಸೀತೆಯು ಕೃಷ್ಣನ ಬಗ್ಗೆ ಆಡಿದ ಅವಾಚ್ಯ ಮಾತುಗಳನ್ನೆಲ್ಲಾ ಆಲೈಸಿದನು. ಬೆಳ್ಳಿದೇವ ಹೊರಳಿಕೊಳ್ಳುವ ಮೊದಲೇ ಆ ಹೊಂಚುಗಾರ ಮತ್ತೆ ಒಂದು ತನ್ನ ಸಂಗಾತಿಕರನ್ನು ಕೂಡಿಕೊಂಡನು.

ಇತ್ತ ಬೆಳ್ಳಿದೇವ ಬಂದು ಬ್ರಾಹ್ಮಣರಾದ ರಾಯಭಾರಿಗಳಿಗೆ ಹೀಗೆಂದು ನಿರಾಕರಣೆಯನ್ನು ಸೂಚಿಸಿದನು:

"ನನ್ನ ತಂಗಿಯು ವಿವಾಹಕ್ಕೆ ಒಡಂಬಡುತ್ತಿಲ್ಲ. ಅವಳು ತಾನು ಭೂಮಿಗೆ ಬಿನ್ನ ಹಾಕುವುದಿಲ್ಲ, ಆಕಾಶಕ್ಕೆ ಹೊಟ್ಟೆ ತೆರಹುದಿಲ್ಲವೆಂದಂದಳು. ಮದುವೆ ಬೇಡ, ಗಂಡನೂ ಬೇಡವೆಂದು ನಿರಾಕರಿಸಿದಳು."

ಬಂದುಕೊಂಡ ನೆಂಟರು, ಬಂದದಾಗೇ ಹಿಂದೆ ಹೋಗು ಸುಬ್ಬರಾಯ—ಅಂದಹಾಗೆ ಖಿನ್ನ ಮನಸ್ಕರಾಗಿ ಕೃಷ್ಣನ ಅರಮನೆಗೆ ಹಿಂತೆರಳಿದರು.

ಮರಳಿದಂತಹ ಬ್ರಾಹ್ಮಣ ಚತುಷ್ಟರನ್ನು ಕೃಷ್ಣ ಕುತೂಹಲಾತುರದಿಂದ ಪ್ರಶ್ನಿಸಿದನು:

"ಗಂಡಾಗಿ ಬಂದಿರಾ? ಹೆಣ್ಣಾಗಿ ಬಂದಿರಾ?"

"ನಮ್ಮ ತಾಯಿ ಹೊಟ್ಟೆಯಲ್ಲಿ ನಾವು ಗಂಡಾಗಿಯೇ ಹುಟ್ಟಿದೆವು. ಆದರೆ, ನಿನ್ನ ನೆಂಟಸ್ತಿಕೆಗೆ ಹೋಗಿ ಹೆಣ್ಣಾಗಿ ಬರುವಂತಹ ದುರ್ಯೋಗ ಪ್ರಾಪ್ತಿಸಿತು."

"ಏನೆಂದರು? ಹೆಣ್ಣು ಕೊಡುವುದಿಲ್ಲವೆಂದರೇ?"

"ಹ್ಞಾ! ಅಹುದು!" ಹೀಗೆಂದು ನುಡಿದು, ಬೆಳ್ಳಿದೇವನಲ್ಲಿಗೆ ಹೋದ ತಮ್ಮ ವಿಫಲ ಸಂಧಾನದ ವರದಿಯನ್ನು ಒಪ್ಪಿಸಿದರು. ಅಲ್ಲದೆ ತಮ್ಮವರಲ್ಲೊಬ್ಬನು ಮರೆಯಾಗಿ ನಿಂತು ಸೀತೆ ಕೃಷ್ಣನ ಕುರಿತಾಡಿದ ಮೂದಲಿಯ ಚುಚ್ಚು ನುಡಿಗಳನ್ನು ಸಹ ಪ್ರತಿವಾರ್ತಿಸಿದರು.

"ಮೂದಲಿಸಿದರೆ ಪರವಾ ಇಲ್ಲ. ನೀವು ಈಗ ನಿಮ್ಮ ನಿಮ್ಮ ನಿವಾಸಕ್ಕೆ ಹೋಗಬಹುದು."

ಹೀಗೆಂದು ಕೃಷ್ಣನು ನುಡಿದು, ಬ್ರಾಹ್ಮಣರನ್ನು ಕಳುಹಿಸಿಕೊಟ್ಟನು. ಬಳಿಕ ಕೃಷ್ಣ ತನ್ನ ನಿಜರೂಪವನ್ನು ತೊರೆದು, ಕಾಡುಕೊರಗನ ವೇಷವನ್ನು ತೊಟ್ಟನು. "ಅಜೆ ಕುರುವೆ" (ಬೀಜ ಬಿತ್ತುವಂತಹ ಕುಕ್ಕೆ) ಮತ್ತು "ನಾರೆ ಕತ್ತಿ" (ಉದ್ದ ಕತ್ತಿ)ಗಳನ್ನು ಹಿಡಿದುಕೊಂಡು ಬೆಳ್ಳಿದೇವನ ಅರಮನೆಗೆ ಸಾಗಿದನು. ಅಲ್ಲಿ ಬೆಳ್ಳಿದೇವನ ಅರಮನೆಯ ಬಾಗಿಲಿನ ಮುಂಭಾಗದಲ್ಲಿ ನಿಂತನು. ಚಾವಡಿಯ ತೂಗುಯ್ಯಾಲೆಯಲ್ಲಿ ಆಸೀನನಾಗಿದ್ದ ಬೆಳ್ಳಿದೇವನನ್ನುದ್ದೇಶಿಸಿ ಕೊರಗ ಹೀಗೆಂದು ವಿಜ್ಞಾಪಿಸಿಕೊಂಡನು:

"ದೆತ್ತೀ (ಸ್ವಾಮಿ)! ಒಳ್ಳೇ ಒಳ್ಳೇ ಕುಕ್ಕೆ, ಬುಟ್ಟಿ, ಹೆಡಗೆ, ತಟ್ಟಿಗಳನ್ನು ಹೆಣೆದುಕೊಡುತ್ತೇನೆ. ಬೀಳಲಿನ ಚಂದ ಚಂದದ ಹೂ ಪಾತ್ರೆ, ಬೆತ್ತದ ಪೀಠ ಮುಂತಾದ ಮನೆಯೊಡವೆಗಳನ್ನು ಸಹ ಹೆಣೆದು ಕೊಡಬಲ್ಲೆ."

ಬೆಳ್ಳಿದೇವ ಇದನ್ನು ಕೇಳಿ, ಒಳಗೆ ಸೀತೆಯ ಬಳಿಗೆ ನಡೆದನು.

"ಸೀತೇ, ಹೊರಗೆ ಕಾಡುಕೊರಗನೊಬ್ಬ ಬಂದಿದ್ದಾನೆ. ಕುಕ್ಕೆ, ಬುಟ್ಟಿ, ಬೀಳಲಿನ ಹೂ ಪಾತ್ರೆಗಳನ್ನು ಮಾಡಿಕೊಡುತ್ತಾನೆಯಂತೆ. ನಮ್ಮ ಮಾಣಿಗಳ ಉಪನಯನವಿದೆ. ಆ ಸಂದರ್ಭದಲ್ಲಿ ನಮಗೆ ಅವು ಅಗತ್ಯ. ಕೊರಗ ಅದನ್ನೆಲ್ಲ ತಯಾರಿ ಕೊಡಲಿ ಅಲ್ಲವೇ?"

"ಅವನು ಅಚ್ಚುಕಟ್ಟಾಗಿ ಮಾಡಿಕೊಟ್ಟರೆ ಆಗಬಹುದು" ಎಂದು ಸೀತೆ ಹೇಳಿದಳು.

ಬೆಳ್ಳಿದೇವ ಕೊರಗನಿಗೆ ಸಮ್ಮತಿಯನ್ನಿತ್ತನು.

"ಕೊರಗಾ, ಹೋಗು. ಕಾಡಿಗೆ ಹೋಗಿ ಒಳ್ಳೇ ಬೀಳಲನ್ನು ಸಂಪಾದಿಸಿಕೊಂಡು ಬಾ. ಮನೆಗೆ ಬೇಕಾದ ಕುಕ್ಕೆ ಬುಟ್ಟಿ ಮುಂತಾದನ್ನೆಲ್ಲ ಮಾಡಿಕೊಡು."

ಅಷ್ಟು ಕೇಳಿ ಕೊರಗ ಹೊರಟನು. ಕಾಯೇರಿ ಕಾಡಿ ಮಲೆಗೆ ಹೋದನು.

ಬೀಳಲುಗಳು ಹೆರಡಿದ್ದ ಒಂದು ದೊಡ್ಡ ಪೊದರಿನೆಡೆಗೆ ಬಂದನು. ಅಲ್ಲಿ ನಾಲ್ಕು ಬೀಳಲುಗಳು ನಾಲ್ಕು ದೇಶಕ್ಕೆ ಹರಡಿಕೊಂಡಿದ್ದುವು. ಅವುಗಳನ್ನು ಎಳೆದು ತುಂಡುಮಾಡಿ ಮೂಟೆ ಕಟ್ಟಿದನು. ಕಟ್ಟಿದ ಮೂಟೆಯನ್ನು ತಲೆಯ ಮೇಲೆ ಏರಿಸಿಕೊಂಡು ನೆಟ್ಟಗೇ ಬೆಳ್ಳಿದೇವನ ಅರಮನೆಗೆ ನಡೆದನು. ಅರಮನೆಯ "ಮುಂದಿಲ್" (ಅಂಗಳ)ದಲ್ಲಿ ನಿಂತು ತಲೆಯ ಹೊರೆಯನ್ನು ನೆಲಕ್ಕೆ ಕೆಡವಿ ಹಾಕಿದನು. ಒಗೆದ ರಭಸಕ್ಕೆ ಕಂಪನವಾಯಿತು. ಅರಮನೆಯೊಳಗಿನ "ಕಂಗನ್‌ದ ಪಲಾಯಿ" (ಬಟ್ಟಲು ತಟ್ಟೆಗಳನ್ನಿಡುವ ಹಲಗೆ) ಕೆಳಗೆ ಬಿದ್ದು ಬಿಟ್ಟಿತು. "ಕಡಂದ ಕಲ್ಲ್" (ಕಡಿಯುವ ಕಲ್ಲು) ತತ್ತರಿಸಿತು. ತೊಟ್ಟಿಲಿನ ಮಗು ಅತ್ತುಕೊಂಡಿತು. "ಕಡೆಂಚಿಲ್‌ದ ಕಂಚಿ" (ಎಳೆ ಕರು) ಅರಚಿತು. ಕೊರಗ ಬಳಲಿ ಬಸವಳಿದು ಬವಳಿ ಬಂದವನಂತೆ ನೆಲದಲ್ಲಿ "ಮಟ್ಟಮರಂಕನೆ" (ಅಂಗಾತ) ಬಿದ್ದುಕೊಂಡನು ಮತ್ತು ಗಟ್ಟಿಯಾಗಿ ಈ ರೀತಿ ಚೀರಿದನು:

"ನನಗೆ ಬಾಯಾರಿಕೆಯಿಂದ ಏನೂ ತೋಚುವುದಿಲ್ಲ. ತುಟಿಗಳು ಬತ್ತಿಹೋಗಿವೆ. ಕಂಠವು ಒಣಗಿ ಹೋಗಿದೆ. ನನಗೆ ಕುಡಿಯುವುದಕ್ಕೆ ಸ್ವಲ್ಪ ಗಂಜಿ ನೀರನ್ನು ಸುರಿಯಿರಿ, ದೆತ್ತಿಯೇ!"

ಕೊರಗನ ಕೂಗಾಟವನ್ನು ಕೇಳಿ ಸೀತೆ, "ಸಗ್ಮಲ್" (ಚಾಕರಿ) ಹೆಣ್ಣುಗಳಿಗೆ ಕೊರಗನಿಗೆ ಗಂಜಿನೀರನ್ನೀಯಲು ಹೇಳಿದಳು.

ಚಾಕರಿಯ ಹೆಣ್ಣುಗಳು ಕಂಚಿಯ ಮರಿಗೆಗೆ ಗಂಜಿ ನೀರನ್ನು ಹೊಯ್ದು, ಅದನ್ನು ಹಿಡಿದುಕೊಂಡು ಹೊರಗೆ ಕೊರಗ ಬಿದ್ದುಕೊಂಡೆಡೆ ಅಂಗಳಕ್ಕೆ ಬಂದರು.

"ಕೊರಗಾ, ಗಂಜಿನೀರು ಸುರಿಯುತ್ತೇವೆ: ನಿನ್ನ "ಕೊಂಬರ್" (ಕಂಗಿನ ಹಾಳೆಯ ಚತುಷ್ಕೋನದ ಮುಟ್ಟಲೆ) ಹಿಡಿಯೋ."

ಹಾಗೆ ಹೆಣ್ಣುಗಳು ನುಡಿದುದನ್ನು ಕೊರಗ ಕೇಳಿದವನೇ ತಲೆ ಎತ್ತಿ ಅವರನ್ನೊಮ್ಮೆ ಕಡೆಗಣ್ಣಿನಿಂದ ಈಕ್ಷಿಸಿದನು.

"ನೀವು ಸುರಿದ ಗಂಜಿನೀರನ್ನು ಕುಡಿಯುವುದಕ್ಕೆ ನಿಮ್ಮ ಗುಲಾಮ ಬಂದಾನು. ನೀವು ಸುರಿದುದನ್ನು ನಾನು ಕುಡಿಯಲಿಕ್ಕಿಲ್ಲ. ನಾನು ಕುಡಿಯುವುದಾದರೆ, ಸೀತೆ ಬಂದು ಕೈಯಾರೆ ನನ್ನ ಕೊಂಬರಿಗೆ ಹೊಯ್ಯಬೇಕು; ನಾನು ಕುಡಿಯಬೇಕು."

ಕೊರಗ ತನ್ನ ಹಟ ಬಿಡಲೊಲ್ಲ. ಅದನ್ನು ನೋಡಿ ಚಾಕರಿಯ ಹೆಣ್ಣುಗಳು ಹಾಗೇ ಹಿಂದೆ ಸರಿದರು.

ಅವರು ಹಿಂದೆ ಸರಿಯುತ್ತಿದ್ದಾಗ ಕೊರಗ, ಎಲ್ಲರಿಗೂ ಕೇಳಿಸುವಂತೆ ಮತ್ತೆ ಈ ರೀತಿ ಜೋರಾಗಿ ಒದರಿದನು:

"ಬೆಳ್ಳಿದೇವರ ಅರಮನೆಯಲ್ಲಿ ಆಸರಿಗೆ ಗಂಜಿನೀರಿಲ್ಲವೆಂದು ನಾನು ನಾಲ್ಕು ಊರಿಗೆ "ದಲದಂಗುರ" (ಢಣಡಂಗುರ) ಸಾರುವೆನು. ನಾನು ನಾಲ್ಕು ಊರು ಅಲೆಯುವವನು."

ಬಿದ್ದುಕೊಂಡಲ್ಲಿಂದ ಹಾಗೆಂದು ಬಿರುಧ್ವನಿಯಿಂದ ಮೇಲಿಂದ ಮೇಲೆ ಒದರಿದನು. ಅತ್ತ ಕೂಗಿ ಹೊಯ್ಕೊಳ್ಳುತ್ತ ಗದ್ದಲಮಾಡಿದನು.

"ತಮ್ಮ ಕೈಯಿಂದ ಗಂಜಿನೀರನ್ನು ಕೊರಗ ತೆಕ್ಕೊಳ್ಳುತ್ತಿರಲಿಲ್ಲ, ಸೀತೆಯೇ ಕೈಯಾರೆ ತನಗೆ ಸುರಿಯಬೇಕೆಂದು ಹಟಹಿಡಿದಿದ್ದಾನೆ, ಆಸರು ಕೊಡದಿದ್ದರೆ ನಾಲ್ಕೂರಿಗೆ ಹೋಗಿ ಡಂಗುರ ಸಾರಿ ಬೆಳ್ಳಿದೇವರನ್ನು ಅಪಮಾನಿಸುವನೆಂದು ಹೆದರಿಸುತ್ತಿದ್ದಾನೆ"— ಹೀಗೆಂಬುದಾಗಿ ಚಾಕರಿಯ ಹೆಣ್ಣುಗಳು ಸೀತೆಗೆ ತಿಳಿಸಿದರು. ಅಷ್ಟರಲ್ಲಿ ಬೆಳ್ಳಿದೇವನಿಗೆ ಕೊರಗನು ಹೊರಗೆ ಮಾಡುತ್ತಿರುವ ಬೊಬ್ಬಾಟ ಕೇಳಿಸಿತು. ಉಪ್ಪರಿಗೆಯಿಂದ ದಡದಡನೇ ಇಳಿದುಬಂದವನೇ ಹೆಣ್ಣುಗಳ ನಡುವೆ ನಿಂತು ವಿಚಾರಿಸಿದನು. ಅವರು ಬೆಳ್ಳಿದೇವನಿಗೆ ಕೊರಗನ ಅದಟುತನವನ್ನು ಉಸುರಿದರು.

"ಈ ಒಬ್ಬ ಶನಿಮಾರಿ ಕೊರಗ ಎಲ್ಲಿಂದ ಬಂದುಕೊಂಡನಪ್ಪಾ!" ಹೀಗೆಂದು ಬೆಳ್ಳಿದೇವ ಗುರುಗುಟ್ಟಿ, ಮುಂದುವರಿದು ಸೀತೆಗೆ ಈ ರೀತಿ ಹೇಳಿದನು:

"ಅವನಿಗೆ ನೀನು ಕೊಂಚ ಗಂಜಿನೀರು ಸುರಿದು ಬಾ, ಮಗಳೇ. ಆತನ ಕೂಗಾಟ ನನ್ನ ಶಾಂತಿಯನ್ನು ಕೆಣಕುತ್ತದೆ, ಸಹನೆಯನ್ನು ಕೆಡಿಸುತ್ತದೆ. ನಾಲ್ಕು ಊರಿಗೆ ಡಂಗುರ ಸಾರಿ ನನ್ನ ಅಪಮಾನವನ್ನು ಮಾಡುತ್ತೇನೆಂದು ಚೀರಿ ಹೇಳುತ್ತಾನೆ. ಹೋಗು ಮಗಳೇ. ಅವನಿಗೆ ಗಂಜಿನೀರನ್ನು ಹೊಯ್ದು ಬಾ."

"ಅಯ್ಯೋ ಅಣ್ಣಾ! ನಾನು ಗಂಡಸರ ಮುಖಾವಲೋಕನವನ್ನು ಮಾಡುವವಳಲ್ಲ. ನಾನು ಹೊಯ್ಯುವುದಾದರೆ ಏಳಂತರದ ಪರದೆ ಕಟ್ಟಬೇಕು."

ಅದಕ್ಕೆ ಬೆಳ್ಳಿದೇವ ಸಮ್ಮತಿಸಿ, ಅಂಗಳದಲ್ಲಿ ಏಳಂತರದ ಪರದೆ ಕಟ್ಟಿಸಿದನು. ಸೀತೆ ಗಂಜಿಯನ್ನು ಗಂಜಿಯ ನೀರನ್ನೇ ಮರಿಗೆಯಲ್ಲಿ ಹಿಡಿದುಕೊಂಡು ಬಂದು ಪರದೆಯ ಹಿಂಬದಿಯಲ್ಲಿ ನಿಂತಳು.

"ಏ ಕೊರಗಾ! ಬಾ, ನಿನ್ನ ಕೊಂಬರ್— ಮುಂದೆ ಹಿಡಿ."

ಕೊರಗನು ಸೀತೆಯ ನುಡಿಯನ್ನು ಕೇಳಿದಾಕ್ಷಣ ಬಿದ್ದುಕೊಂಡಲ್ಲಿಂದ ಸಟಕ್ಕನೇ ಎದ್ದನು. ಮುಂದೆ ಓಡಿ ಪರದೆಯ ಈಚೆ ನೈಯಲ್ಲಿ ನಿಂತು ಎಡದ ಕೈಯಿಂದ ತನ್ನ ಕೊಂಬರನ್ನು ಮುಂದೆ ಚಾಚಿದನು. ಸೀತೆ ಪರದೆಯ ಒಳಗಡೆ ಬಾಗಿ ನಿಂತು ಗಂಜಿಯ ಮರಿಗೆಯನ್ನು ಬೊಗ್ಗಿಸಿದಳು. ಅಷ್ಟರಲ್ಲಿ ಕೊರಗ ಬಲದ ಕೈಯನ್ನು ಪರದೆಯ ಅಡಿಭಾಗಕ್ಕೆ ತುರುಕಿಸಿ ಸೀತೆಯ ಎದೆಯನ್ನು ಬೆರಳಿಂದ ಅವುಕಿದನು.

"ಹಾ ದುಷ್ಟನೇ! ನನ್ನನ್ನು ಮುಟ್ಟಿ ಭ್ರಷ್ಟಮಾಡಿದೆಯಲ್ಲಾ ನೀನು? ಚಾಂಡಲ! ದುರುಳ ಪಾತಕಿ!........"

ಹೀಗೆಂದು ರೋಷೋದ್ರೇಕದಿಂದ ಅರಚಿ ಸೀತೆ ಕೈಯಲ್ಲಿದ್ದ ಮರಿಗೆಯನ್ನು ಕೊರಗನ ಎದೆಗೆ ರುಯ್ಯನೇ ಬಿಸುಟು ಒಳಗೆ ಓಡಿದಳು.

"ಕಾಡು ಕೊರಗನು ನನ್ನನ್ನು ಮುಟ್ಟಿದ! ನನ್ನನ್ನು ಮುಟ್ಟಿದ! ನನ್ನನ್ನು ಚಾಂಡಾಲ ಮುಟ್ಟಿ ಅಶುದ್ಧಮಾಡಿದ........"

ಈ ರೀತಿ ಬೊಬ್ಬಿರಿಯುತ್ತ ತಂಗಿಯು ತನ್ನ ಬಳಿಗೆ ಧಾವಿಸಿ ಬರುತ್ತಿರುವ ದೃಶ್ಯವನ್ನು ಅಣ್ಣನಾದ ಬೆಳ್ಳಿದೇವ ನೋಡಿದನು. ಚಂಗನೇ ಅವನು ಎದ್ದು ಹೋಗಿ ಸೀತೆಯನ್ನು ಎದುರ್ಗೊಂಡನು. ಆರ್ತನಾದವನ್ನು ಗೈಯುತ್ತ ಕೊರಗನು ಮಾಡಿದ ಅಪಸಂಗತನವನ್ನು ಸೀತೆ ಅಣ್ಣನಿಗೆ ದೂರುಕೊಟ್ಟಳು.

ಬೆಳ್ಳಿದೇವನಿಗೆ ಏಳೇಳು ಲೋಕದ ಕೋಪ ಆವರಿಸಿಕೊಂಡಿತು. ತನ್ನ "ಕೈದ್" (ಕೈದು)ವನ್ನು ಒರೆಯಿಂದ ಸೆಳೆದು ಝಳಪಿಸಿ ಹುಂಕರಿಸುತ್ತ ಅಂಗಳಕ್ಕೆ ಮುನ್ನುಗ್ಗಿದನು. ತನ್ನ ಖಡ್ಗವನ್ನು ಎತ್ತಿ ಅದರಿಂದ ಕೊರಗನನ್ನು ಹೊಡೆದು ಮೂರು ಹೋಳುಮಾಡಿ ಚೆಲ್ಲಿದನು. ಕೊರಗನ ತಲೆಭಾಗವು ಹಾರಿ ತಾವರೆಯ ಕೆರೆಗೆ ಬಿತ್ತು. ಕಾಲು ಹೋಗಿ ಅರಿವೆಸೊಪ್ಪಿನ ಕಲಕ್ಕೆ ಬಿತ್ತು. ನಡುಭಾಗವು ಕೆಸುವಿನ ಕಲಕ್ಕೆ ಬಿದ್ದುಬಿಟ್ಟಿತು.

ತಾವರೆಯ ಕೆರೆಗೆ ಬಿದ್ದ ತಲೆಭಾಗವು ಅಲ್ಲೊಂದು ಅತೀ ಚೆಲುವಿನ ತಾವರೆ ಪುಷ್ಪವಾಗಿ ಪರಿವರ್ತಿಸಿತು ಅರಿವೆಸೊಪ್ಪಿನ ಕಲಕ್ಕೆ ಬಿದ್ದ ಕಾಲು ಅರಿವೆಸೊಪ್ಪಿನ ಗಿಡವಾಗಿ ಎದ್ದುಕೊಂಡಿತು. ಕೆಸುವಿನ ಕಲಕ್ಕೆ ಬಿದ್ದ ನಡುಭಾಗ ಕೆಸುವಿನ ಗಿಡವಾಯಿತು.

ಕೊರಗ ತನ್ನನ್ನು ಸ್ಪರ್ಶಿಸಿದುದರಿಂದ ಮೈಲಿಗೆಯನ್ನು ಕಳೆಯುವದಕ್ಕಾಗಿ ಮೀಯುವೆನೆಂದು ಸೀತೆ ಹೇಳಿದಳು. ಚಾಕರಿಯ ಹೆಣ್ಣುಗಳಿಂದಾವೃತಳಾಗಿ ನಂದನದ ಕೆರೆಗೆ ನಡೆದಳು. ಅಲ್ಲಿ ಕೆರೆಗೆ ಇಳಿದು ಸೀತೆ ಮೀಯುತ್ತಿದ್ದಾಗ ಆ ತಾವರೆಪುಷ್ಪವು ತೇಲುತ್ತ ಅವಳ ಸನಿಹಕ್ಕೆ ಬರತೊಡಗಿತು. ಅದು ಸೀತೆಯ ಕಣ್ಮನಗಳನ್ನು ಆಕರ್ಷಿಸಿತು. ತಾವರೆಯನ್ನು ಕಿತ್ತು ತರುವುದಕ್ಕೆ ಹೆಣ್ಣುಗಳಿಗೆ ಸೂಚಿಸಿದಳು. ಹೆಣ್ಣುಗಳು ಅದನ್ನು ಹಿಡಿಯುವುದಕ್ಕೆ ಹವಣಿಸಿದಾಗ ಅದು ಅವರಿಗೆ ಎಟುಕದೆ ಹಿಂದೆ ಹಿಂದೆ ಸರಿದು ಮತ್ತೆ ಮುಳುಗಿ ಕಣ್ಮರೆಯಾಯಿತು. ಮರಳಿ ಸೀತೆಯ ಮಗ್ಗುಲಲ್ಲೇ ಕಾಣಿಸಿಕೊಂಡಿತು. ಬೇಗನೇ ಸೀತೆ ಅದನ್ನು ಹೆಕ್ಕಿಕೊಂಡಳು.

ಚಳಕವಾಯಿತು. ಕೈಯಲ್ಲಿ ತಾವರೆ ಪುಷ್ಪವನ್ನು ಹಿಡಿದುಕೊಂಡು ಸೀತೆ ಅರಮನೆಯಭಿಮುಖವಾಗಿ ತೆರಳಿದಳು. ದಾರಿಯಲ್ಲಿ ಅರಿವೆಸೊಪ್ಪಿನ ಕಲದಲ್ಲಿ ಅರಿವೆಸೊಪ್ಪಿನ ಗಿಡವೊಂದು ಆಟ್ಟಕವಾಗಿ ಬೆಳೆದುಕೊಂಡಿರುವುದು ಹಾಗೂ ಕೆಸುವಿನ ಕಲದಲ್ಲಿ ಪುಷ್ಟವಾದ ಪತ್ರಾವಳಿಯ ಗಿಡವೊಂದು ಎದ್ದುಕೊಂಡಿರುವುದೂ ಸೀತೆಗೆ ದೃಗ್ಗೋಚರಿಸಿತು.

"ಮಧ್ಯಾಹ್ನದ ನನ್ನ ಭೋಜನಕ್ಕೆ ಅರಿವೆಸೊಪ್ಪು, ಕೆಸುವಿನ ಪಲ್ಯ ಮಾಡಬೇಕು..." ಹೀಗೆಂದು ಸೀತೆ ಬಯಕೆಯನ್ನು ವ್ಯಕ್ತಪಡಿಸಿದಳು.

ಮರುಕ್ಷಣದಲ್ಲಿ ಹೆಣ್ಣುಗಳಿಗೆ ಅರಿವೆಸೊಪ್ಪು ಮತ್ತು ಕೆಸುಗಳನ್ನು ಕಿತ್ತು ತರುವುದಕ್ಕೆ ಹೇಳಿದಳು. ಹೆಣ್ಣುಗಳು ಹೋಗಿ ಕಿತ್ತು ತೆಗೆಯುವುದಕ್ಕೆ ನೋಡಿದಾಗ ಅವು ಅವರ ಕೈಗೆ ಬರಲೊಲ್ಲವು. ಸೀತೆ ತಾನೇ ಹೋಗಿ ಅವುಗಳನ್ನು ಕೀಳಿದಾಗ, ನಿರಾಯಾಸವಾಗಿ ಅವುಗಳು ಅವಳ ಕೈಗೆ ಬಂದುಕೊಂಡವು.

ಸೀತೆ ಅರಮನೆಗೆ ಬಂದು ತಲೆಬಾಚಿಸಿಕೊಂಡಳು. ತಾನು ತಂದ ತಾವರೆ ಪುಷ್ಪವನ್ನು ತನ್ನ ಕೈಯಿಂದಲೇ ಮುಡಿಗೆ ತುರುಬಿಕೊಂಡಳು.

ಮಧ್ಯಾಹ್ನದ ಭೋಜನಕ್ಕೆ ಅರಿವೆಸೊಪ್ಪು ಮತ್ತು ಕೆಸುವಿನ ಪಲ್ಯ ಮಾಡಲಾಯಿತು. ಸೀತೆ ಪಲ್ಯ ಹಾಕಿ ಪುಷ್ಕಳವಾಗಿ ಉಂಡಳು. ಉಂಡು ತನ್ನ ಉಪ್ಪರಿಗೆಯ ಕೊಠಡಿಗೆ ಪ್ರವೇಶಿಸಿ ಬಾಗಿಲಿಕ್ಕಿದಳು. ಬಳಿಕ ಪಲ್ಲಂಗದಲ್ಲಿ ಬಿಡಿಸಿದ ಮೃದುತಲ್ಪದಲ್ಲಿ ಶಯನಿಸಿದಳು. ಆಗ ಅವಳು ತಲೆಯಲ್ಲಿ ಮುಡಿದುಕೊಂಡ ತಾವರೆಪುಷ್ಪವು ಮಾಯವಾಗಿ, ಪ್ರತಿಯಾಗಿ ಅಲ್ಲಿ ಕೃಷ್ಣನು ಮೈದೋರಿಕೊಂಡನು. ಸೀತೆಯನ್ನು ತೋಳತೆಕ್ಕೆಯಲ್ಲಿ ಬರಸೆಳೆದುಕೊಂಡನು. ಏಳು ರಾತ್ರಿ ಎಂಟು ಹಗಲು ಇಬ್ಬರೂ ಉಪ್ಪರಿಗೆಯಲ್ಲಿದ್ದರು. ಕೃಷ್ಣನ ಇರುವಿಕೆಯ ಸುಳಿವು ಅರಮನೆಯ ಇತರ ಮಂದಿಗಳಾರ ದೃಷ್ಟಿಗೂ ಬೀಳಲಿಲ್ಲ. (ಸಶೇಷ)

— —

ತುಳು ಸಂಧಿಯ ಕತೆ: ೧೩.

ಗಾರುಡಿಗ ಕೃಷ್ಣ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಎಂಟನೇ ದಿನ ಕೃಷ್ಣ ತನ್ನ ಸ್ಥಾನಕ್ಕೆ ಹಿಂತಿರುಗಿ ಹೋಗುವುದಕ್ಕೆ ನಿರ್ಧರಿಸಿದನು. ಸೀತೆಗೆ ಒರೆದನು:

"ಸೀತೇ, ನಾನು ಹೋಗುತ್ತೇನೆ."

"ಅಯ್ಯೋ! ನನಗೆ ನನ್ನ ಯಾರು ದಿಕ್ಕು? ನನ್ನನ್ನು ನೀವು "ಹೀಗೆ" ಮಾಡಿ ಬಿಟ್ಟಿರಿ, ನನ್ನ ತಲೆಗೆ ಕಲ್ಲು ಹಾಕುವಿರಾ? ನನ್ನನ್ನು ತೊರೆಯಬೇಡಿರಿ." ಹೀಗೆಂದು ಸೀತೆ ಹಲುಬಿದಳು.

ಕೃಷ್ಣ ಅಭಯವಿತ್ತನು:

"ಹೆದರಬೇಡ. ಹಾಗೇನೂ ನಿನಗೆ ಕಷ್ಟ ಬವಣೆಗಳು ಉಂಟಾದ ಕಾಲದಲ್ಲಿ ನನ್ನನ್ನು ಸ್ಮರಿಸು. ಆಗ ನಾನು ಬಂದು ನಿನ್ನನ್ನು ಕಾಯುವೆನು."

ಕೃಷ್ಣನು ಅದೃಶ್ಯನಾದನು.

ದಿನಗಳು ಕ್ರಮಿಸಿದವು. ಎರಡು ತಿಂಗಳಾಯಿತು, ನಾಲ್ಕು ತಿಂಗಳಾಯಿತು. ಮತ್ತೆ ಏಳನೇ ತಿಂಗಳು!

ಶ್ರೀಕೃಷ್ಣನು ದೇವಲೋಕದಲ್ಲಿ ಕೂಟವೊಂದನ್ನು ಕೂಡಿಸುವ ವ್ಯವಸ್ಥೆ ಮಾಡಿದನು. ಬೆಳ್ಳಿದೇವನಿಗೆ ಕೂಟದ ಕಲಕ್ಕೆ ಹಾಜರಾಗಲು ಓಲೆಹೋಯಿತು. ಆ ಪ್ರಕಾರ ಕೂಟದ ಕಲಕ್ಕೆ ಬೆಳ್ಳಿದೇವ ಆಗಮಿಸಿದನು: ಕೂಟದಲ್ಲಿ ಕೂಡಿದ ದೇವಾಸುರ ಪ್ರಮುಖರನ್ನುದ್ದೇಶಿಸಿ ಹೀಗೆಂದನು:

"ದೇವಾಸುರರೇ! ಒಂದು ವಿಸ್ಮಯಕರ ಸುದ್ದಿಯನ್ನು ಕೇಳಿರಿ. ಬೆಳ್ಳಿದೇವನ ತಂಗಿ ಅನ್ನಂದ್ರಾಯೆದಿ ಸೀತೆ ಗಂಡಸಿನ ಮುಖ ನೋಡುವವಳಲ್ಲ, ಭೂಮಿಗೆ ಬೆನ್ನು ಊರುವವಳಲ್ಲ, ಆಕಾಶಕ್ಕೆ ಹೊಟ್ಟೆ ಒಡ್ಡುವವಳಲ್ಲ. ಅವಳು ಏಕಾಂತವಾಸಿನಿಯಾದ ಲಜ್ಜಾವತಿ ಕನ್ಯೆ! ಅಂಥವಳು ಹೇಗೆ ಗರ್ಭವತಿಯಾದಳು? "ಅದೆ ಬಂಜಿ ಬತ್ತಿತಾ, ತಗೆ ಬಂಜಿ ಮಲ್ತಿನಾ?" (ದುರಾಚಾರದ ಫಲವಾಗಿ ಬಸುರಿಯಾದದ್ದೇ?) ಇದೀಗ ರುಜುವಾತಾಗಬೇಕು."

ಬೆಳ್ಳಿದೇವ, ಕೃಷ್ಣನು ಮುಂದಿಮಾಡಿದ ಆರೋಪವನ್ನು ಕೇಳಿ ಇದ್ದಕ್ಕಿದ್ದ ಹಾಗೆ ದಿಗ್‌ಭ್ರಮೆಗೊಂಡನು. ಅಪಮಾನ, ಸಿಟ್ಟುಗಳು ಏಕಕಾಲದಲ್ಲಿ ಅವನನ್ನು ಪ್ರವೇಶಿಸಿಕೊಂಡವು; ಕೃಷ್ಣನು ಅವನನ್ನೇ ನೇರಾಗಿ ತರಾಟೆಗೆ ತೆಕ್ಕೊಂಡನು.

"ಬೆಳ್ಳಿದೇವಾ, ನೀನು ಏನು ಹೇಳುವೆ? ಅವಿವಾಹಿತಳಾದ ನಿನ್ನ ಸತ್ಯದಾ ತಂಗಿ, ಮುದ್ದಿನಾ ತುಂಬಿಗೆ ಯಾರು ಬಸಿರು ಮಾಡಿದರು? ಹೇಳು! ಮರೆಮಾಜಬೇಡ."

"ಸುಳ್ಳು! ಶುದ್ಧ ಸುಳ್ಳು! ನನ್ನ ತಂಗಿ ಗರ್ಭವತಿ ಎನ್ನುವ ನಿನ್ನ ಆರೋಪವನ್ನು ನಾನು ಅಲ್ಲಗಳೆಯುವೆ."

"ನೀನು ಹೋಗಿ ನಿನ್ನ ತಂಗಿಯನ್ನು ಕಣ್ಣಾರೆ ಪ್ರತ್ಯಕ್ಷವಾಗಿ ಪರೀಕ್ಷಿಸು. ಆಗ ನಿನಗೆ ಸತ್ಯ ಒಡೆದು ಕಾಣುವುದು."

ಹೀಗೆಂದು ಕೃಷ್ಣನು ಪ್ರತಿನುಡಿದು, ಬೆನ್ನಿಗೇ ನ್ಯಾಯಮೂರ್ತಿಗಳಾದ ದೇವಾಧಿಕ್ಯರನ್ನು ಈ ಪರಿ ತೀವ್ರವೇ ಕೇಳಿದನು:

"ಈ ರೀತಿ ದುರಾಚಾರದಿಂದ ಬಸುರಿಯಾದಂತಹ ಹೆಣ್ಣಿಗೆ ಯಾವ ಶಿಕ್ಷೆಯು ಶಾಸನೀಯವಾಗಿರುತ್ತದೆ?"

ನ್ಯಾಯವಿದರು ನಿರ್ದೇಶಿಸಿದರು:

"ನಮ್ಮ ಜಾತಿ ಕಟ್ಟಳೆಯ ಪ್ರಕಾರ ಮದುವೆಯಾಗುವ ಮುನ್ನ ಹೆಣ್ಣು ಮೈ ನೆರೆದುಕೊಂಡರೆ, ಅಂಥವಳನ್ನು ಕಣ್ಣಿಗೆ ಬಟ್ಟೆ ಸುತ್ತಿ ಕಾಡಿಗೆ ಬಿಡತಕ್ಕದ್ದು. ಅವಿವಾಹಿತ ಕನ್ಯೆಯೊಬ್ಬಳು ಬಸಿರಾದ ಪಕ್ಷದಲ್ಲಿ ಅಂಥವಳನ್ನು ಅರಣ್ಯಕ್ಕೆ ಒಯ್ದು ಅವಳ ಶಿರಚ್ಛೇದ ಮಾಡತಕ್ಕದ್ದು. ಅವಳ "ನೆತ್ತೆರ್, ತಂಕಪಲ್ಲೆ ಕರಿಯುಲಾ" (ನೆತ್ತರು, ಕಂಠನಾಳ ಯಕೃತ್ ಪ್ಲೀಹಗಳನ್ನೂ) ತರತಕ್ಕದ್ದು."

ಬೆಳ್ಳಿದೇವನನ್ನು ಕೃಷ್ಣನು ಅವಸರಪಡಿಸಿದನು:

"ಈಗಲೇ ಹೋಗು. ಸೀತೆಗೆ ಶೀಘ್ರವೇ ಶಾಸನಮಾಡು. ಅಂತಹ ದುರಾಚಾರಿಣಿಯನ್ನು ನಿನ್ನ ಅರಮನೆಯಲ್ಲಿ ಇರಗೊಡಬೇಡ. ಅವಳನ್ನು ಕೊಲ್ಲಿಸಿಬಿಡು."

ಬೆಳ್ಳಿದೇವ ಕೂಟದ ಕಲದಿಂದ ನೆಟ್ಟಗೇ ತನ್ನ ಅರಮನೆಗೆ ಬಂದನು. ಚಾವಡಿಯ ನಡಮಂತರದಲ್ಲಿ ನಿಂತನು. ಲಜ್ಜಾಪಮಾನಘಾತಗಳಿಂದ ಕೆದರಿದ ತನ್ನ ಮನಸ್ಸನ್ನು ತುಸು ಸಾವರಿಸಿಕೊಂಡನು. ಸೀತೆಯ ಹೆಸರೆತ್ತಿ ಕರೆದನು. ಸೀತೆ ಆಗಮಿಸಿದಳು.

"ಸೀತೇ, ನನಗೆ ಕೂಟದ ಕಲಕ್ಕೆ ಹೋಗಿ ಆಸರು ಬೇಸರಿಂದ ಏನೂ ಕೂಡುವುದಿಲ್ಲ. ನನಗೊಂದು ಆಸರು ತಂದುಕೊಡು."

ಸೀತೆಗೆ ಆಶ್ಚರ್ಯ! ಈ ವರೆಗೆ ಅವಳಿಗೆ ಅಣ್ಣನು ಹೀಗೆ ಆಜ್ಞಾಪಿಸಿದವನಲ್ಲವೆಂದು, ಆದರೂ ಸೀತೆ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಒಳಗೆ ಸರಿದಳು. ಚಿನ್ನದ ಪಿಂಗಾಣಿಯಲ್ಲಿ ಹಾಲು, ಬೆಳ್ಳಿಯ ಗಿಂಡೆಯಲ್ಲಿ ನೀರನ್ನು ತೆಕ್ಕೊಂಡು ಬಂದು ಅಣ್ಣನಿಗೆ ಚಾಚಿದಳು. ಆಗ ಬೆಳ್ಳಿದೇವ ತಾನು ಕೈಯಲ್ಲಿ ಹಿಡಿದುಕೊಂಡ ಬೀಸಣಿಗೆಯಿಂದ ಅವಳ ಸೀರೆಯ ಸೆರಗಿನೆಡೆಗೆ ಸುಯ್ಯನೇ ಬೀಸಿದನು. ಗಾಳಿಯ ರಭಸಕ್ಕೆ ಸೆರಗು ಹಾರಿಕೊಂಡಿತು. ಆಗ ತಂಗಿಯ ಹೊಟ್ಟೆಯನ್ನು ನಿಟ್ಟಿಸಿದನು.

ಕಿಬ್ಬೊಟ್ಟೆಯ ಉಬ್ಬರವೂ, ತ್ರಿವಳಿಯ ಮಾಸುವಿಕೆಯೂ, ಕೇಶದ ಅಸ್ತವ್ಯಸ್ತತೆಯೂ, ಮ್ಲಾನವಾದ ಮುಖದಲ್ಲಿ ಕಾಂತಿಯಿಂದೊಡಗೂಡಿದ ಕಣ್ಣುಗಳೂ ಬಯಕೆಯ ಭಾವವನ್ನು ಹೊರಸೂಸುತ್ತಿದ್ದವು. ನಡಿಗೆಯಲ್ಲಿರುವ ಮಂದಗತಿಯೂ ಈಕೆಯು ಗರ್ಭಿಣಿ ಎಂಬ ಲಕ್ಷಣವನ್ನು ಸೂಚಿಸುತ್ತಿತ್ತು.

"ಕೃಷ್ಣನು ಹೇಳಿದ್ದೂ ನಿಜ, ಇಲ್ಲಿ ಆದದ್ದೂ ಹಾಗೆಯೇ.... ಥೂ! ಕುಲಟೆ! ಕುಲಕಲಂಕಿನಿ! ನಿನ್ನನ್ನು ನನ್ನ ಮನೆಯಲ್ಲಿ ಇಡಬಾರದು."

ಕೋಪದಿಂದ ಜ್ವಾಲಾಮುಖಿಯಾದ ಬೆಳ್ಳಿದೇವ ಕೂಡಲೇ ಬೋವಿಗಳನ್ನು ಮತ್ತು ಕಟುಕರನ್ನು ಕರೆದು ಅವರಿಗೆ ಈ ರೀತಿ ಅಜ್ಞಾಪಿಸಿದನು:

"ದಂಡಿಗೆಯನ್ನು ಸಿದ್ಧಪಡಿಸಿರಿ. ಈ ಹಾದರದ ಹೆಣ್ಣನ್ನು ಕಾಡಿಗೆ ಒಯ್ದು ಕೊಂದುಹಾಕಿರಿ. ಅವಳ ಹೊಟ್ಟೆ ಸೀಳಿ "ನೆತ್ತೆರ್, ತಂಕಪಲ್ಲೆ ಕರಿಯುಲಾ" ತೆಕ್ಕೊಂಡು ಬಂದು ನನಗೆ ತೋರಿಸಿರಿ."

ಹಾಗೇ ಬೋವಿಗಳು ಮತ್ತು ಕಟುಕರು ಸೀತೆಯನ್ನು ದಂಡಿಗೆಯಲ್ಲಿ ಹೇರಿಸಿಕೊಂಡು ಒಂದಾನೊಂದು ಗೊಂಡಾರಣ್ಯಕ್ಕೆ ಒಯ್ದರು. ಇಲ್ಲಿ ಅವರು ಅವಿರಳಧಾರೆಯಾಗಿ ಕಣ್ಣೀರಿಳಿಸುತ್ತ ರೋಧಿಸುತ್ತಿರುವ ಸೀತೆಯನ್ನು ಕೊಲ್ಲುವುದಕ್ಕೆ ಉದ್ಯುಕ್ತರಾದಾಗ, ಬೆಳ್ಳಿದೇವನ ತಮ್ಮನಾದ ಗಾಳಿದೇವನು ಓಡಿಬಂದನು.

"ಕಟುಕರೇ! ಈ ಗರ್ಭಿಣಿ ಹೆಣ್ಣುಮಗಳನ್ನು ಕೊಲ್ಲಬೇಡಿರಿ. ಇಂತಹ ಹತ್ಯೆವು ನಿಷಿದ್ಧ; ಪಾಪಕರ! "ಬೇಂಗಿ" (ರಕ್ತಹೊನ್ನೆ ಮರ)ದ ರಕ್ತವನ್ನು ತೆಗೆದು ಸಂಗ್ರಹಿಸಿರಿ. ಕಾಗೆಯೊಂದನ್ನು ಹಿಡಿದು ಕೊಂದು ಅದರ ಕಂಠನಾಳ ಯಕೃತ್ ಪ್ಲೀಹಗಳನ್ನು ಕಿತ್ತುಕೊಳ್ಳಿರಿ. ಅವುಗಳನ್ನು ತೆಕ್ಕೊಂಡು ಹೋಗಿ ನಿಮ್ಮ ಅರಸನಿಗೆ ತೋರಿಸಿರಿ."

ಹೀಗೆಂದು ಅಡ್ಡವಿಸಿ, ಕಟುಕರನ್ನು ಹಾಗೆ ಮಾಡಿಕೊಂಡು ಹೋಗಲು ಅಟ್ಟಿದನು. ದುಃಖ ಪರಿವೇದನೆಗಳಿಂದ ಬಸಳೆಯಂತಾದ ಸೋದರಿಯನ್ನು ಒಂದು ಗೋಳಿಮರದಡಿಗೆ ಕರೆದೊಯ್ದನು. ಅಲ್ಲಿ ಅವಳ ತಲೆಯನ್ನು ತನ್ನ ತೊಡೆಯ ಮೇಲಿರಿಸಿ, ಅವಳಿಗೆ ಮಲಗಿ ದಣಿವಾರಿಸಲೆಂದನು. ಹಾಗೇ ಬೇಗುದಿಗೊಂಡ ಸೀತೆ ಮಲಗಿದಳು. ಅವಳ ಕಣ್ಣಿಗೆ ಜೊಂಪು ಹಿಡಿದ ಸಂಧಿಯಲ್ಲಿ ತಮ್ಮನು ಅವಳ ಹೊಟ್ಟೆಗೆ ಕೈಯಾಡಿಸಿದನು. ಹೊಟ್ಟೆಯೊಳಗೆ ಎರಡು ಮಗುಗಳು ಹೊರಳಾಡುವುದನ್ನು ಅಚ್ಚರಿಯಿಂದ ಲಕ್ಷೀಕರಿಸಿದನು.

"ಹಾ! ಕಟುಕರು ಈಕೆಯನ್ನು ಹಿಂದುಮುಂದು ನೋಡದೆ ಒಮ್ಮೆಲೇ ಕಡಿದು ಚೆಲ್ಲಿಬಿಟ್ಟಿದ್ದರೆ, ಒಂದು ಜೀವದೊಟ್ಟಿಗೆ ಮೂರು ಜೀವಗಳು ಅಹುತಿಯಾಗುತ್ತಿದ್ದುವು. ಅಂತು ಈಕೆ ಬದುಕಿದರೆ ಎಲ್ಲಾದರೂ ಇದ್ದುಕೊಳ್ಳಲಿ."

ಹೀಗೆಂದು ಸ್ವಗತವಾಗಿ ಪರಾಮರಿಸಿದನು. ತನ್ನ ಸೋದರಿಯ ತಲೆಯನ್ನು ಮೆಲ್ಲನೇ ನೆಲದ ಮೇಲಿಟ್ಟನು. ಬಳಿಕ ಕ್ಷಣದಲ್ಲಿ ಅಲ್ಲಿಂದ ಹೊರಟುಬಿಟ್ಟು ಕಣ್ಮರೆಯಾದನು.

ಸೀತೆ ಎಚ್ಚೆತ್ತಳು. ಸೋದರನಾದ ಗಾಳಿದೇವ ತನ್ನನ್ನು ಪರಿತ್ಯಜಿಸಿ ಹೋದುದನ್ನು ಗಮನಿಸಿದಳು. ಬೆಚ್ಚಿಬೆಬ್ಬರಪಟ್ಟಳು. ಅತ್ತು ಬೊಬ್ಬಳಿಸಿದಳು; ತಲೆತಲೆ, ಎದೆ ಎದೆ ಬಡಕೊಂಡಳು.

"ಅಯ್ಯೋ ದೇವರೇ! ನನ್ನನ್ನು ಆಗಲೇ ಕೊಂದುಬಿಟ್ಟಿದ್ದರೆ ನನ್ನ ಜೀವ ನಿಶ್ಚಿಂತವಾಗಿ ಪಾರಾಗಿಬಿಡುತ್ತಿತ್ತು. ನನ್ನನ್ನು ಇಲ್ಲಿ ಕಾಡಿನಲ್ಲಿ ಹುಲಿ ಕರಡಿಗಳ ಬಾಯಿಗೆ ತುತ್ತಾಗುವುದನ್ನು ಮಾಡಿದೆಯಲ್ಲಾ?"

ಕೃಷ್ಣನನ್ನು ಸ್ಮರಿಸಿ ಆ ಮೇಲೆ ಈ ರೀತಿ ಗೋಗರೆದಳು:

"ಹಾ! ಅಂದು ನನ್ನ ಸ್ತ್ರೀತ್ವವನ್ನು ಹರಣಮಾಡಿ ಕೆಡಿಸಿದಿರಿ. ಇಂದು ಈ ದುರ್ದಶೆ ನನ್ನ ಪಾಲಿಗೆ ಬಂದೊದಗಿತು. ನನ್ನನ್ನು ಕಾಪಾಡಲಾರಿರಾ? ಬಾ, ನನ್ನ ರಾಜಾ!"

ಸೀತೆಯು ನಿಶ್ಚೇಷ್ಟಿತಳಾಗಿ ನೆಲಕ್ಕೆ ಬಿದ್ದಳು. ಅಷ್ಟರಲ್ಲಿ ಕೃಷ್ಣನು ತನ್ನ ನಿಜರೂಪಿನಿಂದ ಪ್ರತ್ಯಕ್ಷನಾಗಿಕೊಂಡನು. ಸ್ಮೃತಿಹೀನಳಾಗಿ ಬಿದ್ದುಕೊಂಡ ಸೀತೆಗೆ ವಿವಿಧ ಶೈತ್ಯೋಪಚಾರವನ್ನು ಮಾಡಿದನು. ಸೀತೆ ಕಣ್ಣುಬಿಟ್ಟು ತನ್ನ ರಾಜನನ್ನು ದಿಟ್ಟಿಸಿದಳು. ಕೃಷ್ಣನು ಸೀತೆಯ ಮೇಲಿನ ಮುಯ್ಯನ್ನು ಸಂದಾಯಿಸಲು ಈ ರೀತಿ ಆಡಿದನು:

"ಸೀತೇ, ನೀನು ಯಾತಕ್ಕಾಗಿ ಈ ಅವಸ್ಥೆಯಲ್ಲಿ ಇಲ್ಲಿ ಬಂದುಕೊಂಡೆ? ನೀನು ಏಕಾಂತ ವಾಸಿನಿ, ಮಹಾದೊಡ್ಡ ಕನ್ಯಾಮಣಿ! ಭೂಮಿಗೆ ಬೆನ್ನೂರಲಾರದವಳು! ಆಕಾಶಕ್ಕೆ ಹೊಟ್ಟೆಯನ್ನು ನೀಡದವಳು! ನೀನು ಮತ್ತೆ ಹೇಗೆ ಬಸುರಿಯಾದೆ? "ಅದೆ ಬಂಜಿ ಬತ್ತಿನಾ, ತಗೆ ಬಂಜಿ ಮಲ್ತಿನಾ?" ಆ ಕಳ್ಳ ಪಟಿಂಗ ಕೃಷ್ಣ, ದನಕಾಯುವ ಕೃಷ್ಣ, ಕಾಮುಕ ಕೃಷ್ಣ ಯಾರವ? ನಿನ್ನ ಪರಿಹಾಸಕ್ಕೆ ದಂಡನೆ ಸಾಕೇ? ತಪ್ಪು ಕಾಣಿಕೆ ಕೊಡು, ಏನು?"

"ತಪ್ಪು ನನ್ನದಾದರೆ, ನಿಮ್ಮ ಕಾಣಿಕೆ ನನ್ನ ಹೊಟ್ಟೆಯಲ್ಲಿದೆ" ಎಂದು ಸೀತೆ ಮೆಲ್ನುಡಿದಳು.

ಕೃಷ್ಣನು ನಕ್ಕನು. ಕೃಷ್ಣನು ಬಳಿಕ ಅವಳನ್ನು ಕಾಯೇರಿ ಕಾಡ್ ಮಲೆಗೆ ಕರೆದೊಯ್ದನು. ಅಲ್ಲಿ ತನ್ನ ಮಾಯೆಯಿಂದ ಸೀತೆಗೆ ಒಂದು ಅರಮನೆಯನ್ನೂ, ಅದಕ್ಕೆ ಬೇಕಾದ ಒಡವೆ ಸಂಪತ್ತು ಪರಿಜನ ಸೇವಕರನ್ನೂ ಸಂಯೋಜಿಸಿದನು. ಸೀತೆ ಅರಮನೆಯಲ್ಲಿ ನಿಶ್ಚಿಂತೆಯಿಂದ ಸಂತೋಷಚಿತ್ತಳಾಗಿ ಇದ್ದಳು. ಕೃಷ್ಣನು ಅರಮನೆಗೆ ಆಗಾಗ್ಗೆ ಬಂದು ಹೋಗುತ್ತ ಇದ್ದನು.

ಸೀತೆ ನವಮಾಸಭರಿತೆಯಾಗಿ, "ಪಾಡಿ ನೇಲೆಗ್, ತೋಜಿ ಬೇನೆಗ್" (ಹೆಂಗೆ ಕೊರಡಿಯಲ್ಲಿ ಕಟ್ಟಿದ ಹಗ್ಗಕ್ಕೆ ಕೈಕೊಟ್ಟು, ತೋರಿದ ಬೇನೆಗೆ) ಇಬ್ಬರು ಹೃಷ್ಟ-ಪುಷ್ಟರಾದ ಸೌಂದರ್ಯಶಾಲಿ ಅವಳಿ-ಜವಳಿ ಗಂಡುಮಕ್ಕಳನ್ನು ಹಡೆದಳು. ಕೃಷ್ಣನು ಪುತ್ರರಿಬ್ಬರಿಗೆ "ಕೈನೆ ಮಕ್ಕಳು-ಕಾರವ, ಕತ್ತವ"ರೆಂದು ನಾಮಕರಣ ಮಾಡಿದನು.

೦ ೦ ೦ ೦

ಮಕ್ಕಳು ಬೆಳೆದರು. ಕೃಷ್ಣನು ಮಕ್ಕಳಿಬ್ಬರಿಗೂ ವೈದ್ಯಕೀಯ ಮದ್ದು ಮಾಯೆಗಳ ವಿದ್ಯೆಯನ್ನು ಕೊಡಿಸಿದನು. ಇಬ್ಬರು ಹುಡುಗರು ಅಸಾಧಾರಣ ಮೇಧಾವಿಗಳಾದರು.

ಅಷ್ಟರಲ್ಲಿ ಕೃಷ್ಣನು ಬೆಳ್ಳಿದೇವನಿಗೆ ಅಗ್ನಿ ಉರಿತದಿಂದ ಕೂಡಿದ ವಿಸರ್ಪ ರೋಗವನ್ನು ಹಾಕಿದನು. ಎಷ್ಟೆಷ್ಟು ನಿಸ್ಸೀಮರಾದ ಮಹಾಮಹಾ ವೈದ್ಯ ಪಂಡಿತರು ಬೆಳ್ಳಿದೇವನಿಗೆ ಮದ್ದು ಮಾಯೆಗಳನ್ನು ನಡೆಸಿದರೂ ಅವನ ರೋಗ ಗುಣಮುಖವಾಗಲಿಲ್ಲ, ಮದ್ದು ಮಾಯೆ ನಾಟಲಿಲ್ಲ. ಅವನಿಗೆ "ಒರಿಯ ಕರಿಯ, ಸೈಪೆ ಬದುಕುವೆ" (ಜೀವದ ಸುತ್ತುಬಂದ ಸಂದಿಗ್ಧಾವಸ್ಥೆ) ಅಂತಾಯಿತು.

ಆಗ ಕೃಷ್ಣನು ಬೆಳ್ಳಿದೇವನೆಡೆಗೆ ಹೋದನು. ಶಯ್ಯೆಯಲ್ಲಿ ಪ್ರಾಣಾಂತಿಕ ಅವಸ್ಥೆಯಿಂದ ನರಳುತ್ತಿದ್ದ ಬೆಳ್ಳಿದೇವನಿಗೆ ಈ ರೀತಿ ಒರೆದನು:

"ಯಾವ ಮದ್ದು ಮಾಯೆಯೂ ಫಲಕಾರಿಯಾಗುವುದಿಲ್ಲವಲ್ಲಾ? ಕಾಯೇರಿ ಕಾಡ್ ಮಲೆಯಲ್ಲಿ ಕಾರವ ಕತ್ತವರೆಂಬ ಇಬ್ಬರು ವೈದ್ಯರಿದ್ದಾರೆ. ವಿಖ್ಯಾತರಾದ ವೈದ್ಯರು! ಅಸಾಧ್ಯ ರೋಗಗಳನ್ನೆಲ್ಲ ಗುಣ ಮಾಡಿದ್ದಾರೆ. ಅವರನ್ನು ನೀನು ಕರೆದು, ಚಿಕಿತ್ಸೆಯನ್ನು ಮಾಡಿಸಿದರೆ ನಿನ್ನ ರೋಗವು ಪರಿಹಾರವಾಗುವುದು ನಿಸ್ಸಂಶಯವೆಂದು ನಾನು ಭರವಸೆಯನ್ನೀಯುವೆ."

ಕೃಷ್ಣನ ಸಲಹೆ ಮೇರೆಗೆ, ಆ ವೈದ್ಯರಿಗೆ ಕಾಯೇರಿ ಕಾಡ್ ಮಲೆಗೆ ಕೂಡಲೇ ಕರೆಹೋಗಿ, ಅವರನ್ನು ಅರಮನೆಗೆ ಬರಮಾಡಿಕೊಳ್ಳಲಾಯಿತು.

ಬಂದು ಕೊಂಡಂತಹ ವೈದ್ಯದ್ವಯರು ಬೆಳ್ಳಿದೇವನ ರೋಗನಿದಾನವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರು. ಬಳಿಕ ಈ ರೀತಿಯಾಗಿ ನುಡಿದರು:

"ಈ ರೋಗಕ್ಕೆ ನಾವು ಚಿಕಿತ್ಸೆಯನ್ನು ಮಾಡಿ ಉಪಶಮನ ಮಾಡಬಲ್ಲೆವು. ಮೊದಲಾಗಿ ರೋಗಿಗೆ ಬಳಿನಿವಾಳಿಸಿ ತೆಗೆಯಬೇಕು. ಅದಕ್ಕಾಗಿ "ಐವಲ" (ಐದು ಸೇರು) ಚಿನ್ನದ ಪುಡಿ, "ಮೂವಲ" (ಮೂರು ಸೇರು) ಬೆಳ್ಳಿಯ ಪುಡಿ ಮತ್ತು ಕಬ್ಬಿಣದ ಪುಡಿಗಳನ್ನು ನಮಗೆ ಒದಗಿಸಿರಿ. ಐದು ಜನರ ತಲೆ ಕಡಿದು, ಮತ್ತೆ ಮೂರು ಜನರ ಕುಂಡೆ ಕೆತ್ತಿ ತರತಕ್ಕದು. "ಮದ್ಮಲ್" (ಮದುಮಗಳು) ಹೆಣ್ಣಿನ ಕೊರಳನ್ನು ಕೊಯ್ಯಬೇಕು. "ಗೂರುಗುರುಮೆದ ತೆತ್ತಿ" (ಗುರುಗುಮ್ಮನೆಯ ತತ್ತಿ)ಯನ್ನು ತನ್ನಿರಿ. ಕತ್ತಿಲ್ಲದೆ ಕಾಡು ಕಡಿದು ತಂದುಕೊಡಿರಿ. ಗರ್ಭಿಣಿ ಸ್ತ್ರೀಯ ಹೊಟ್ಟೆ ಸೀಳಿ ಶಿಶುವನ್ನು ತೆಗೆದು ತನ್ನಿರಿ. ನಮಗೆ ಇವನ್ನೆಲ್ಲ ಒದಗಿಸಿ ಕೊಟ್ಟರೆ ಕೂಡಲೇ ನಾವು ನಮ್ಮ ಚಿಕಿತ್ಸಾಕ್ರಿಯೆಗೆ ತೊಡಗುವೆವು. ಮತ್ತೆ ರೋಗಿ ಗುಣಹೊಂದುವುದು ಖಂಡಿತ."

ವೈದ್ಯರು ಸೂಚಿಸಿದ ಆ ಪರಿಯ ವಿಚಿತ್ರ ಹಾಗೂ ಅಸಾಧ್ಯವಾದ ಚಿಕಿತ್ಸಾಕ್ರಮವು ಬೆಳ್ಳಿದೇವ ಮತ್ತು ಸುತ್ತುಮುತ್ತಲು ಕೂಡಿದ ಪರಿವಾರದವರಿಗೆ ಬಗೆಹರಿಯಲಾರದ ಸಮಸ್ಯೆಯಾಗಿಕೊಂಡಿತು. ಪೂರಣೆಯನ್ನು ಮಾಡುವ ದಾರಿತೋಚದಾಯಿತು. ಕಕ್ಕಾವಿಕ್ಕಿಗಳಾಗಿ ಒಬ್ಬರ ಮುಖವನ್ನೊಬ್ಬರು ನೋಡುತ್ತ ಬಿಸುಸುಯ್ದರು. ಬಹಳ ಹೊತ್ತಿನ ತನಕ ಅವರು ಮುಖ ಮೂರ್ಛನೆಗೊಂಡು ಪೇಚಾಡುತ್ತಿರುವುದನ್ನು ಅವಲೋಕಿಸಿದ ವೈದ್ಯದ್ವಯರು ಕೊನೆಗೆ ಹೀಗೆಂದು ಒಂದು ಕರಾರನ್ನು ಮುಂದೊಡ್ಡಿದರು:

"ನೀವೆಲ್ಲ ತೀವ್ರ ಕಂಗಾಲಾಗಿ ಬಿಟ್ಟವರಂತೆ ತೋರುತ್ತಿದ್ದೀರಲ್ಲಾ? ನಾವು ಸೂಚಿಸಿದ ವಸ್ತುಗಳನ್ನು ನಿಮಗೆ ಪೂರೈಸುವುದಕ್ಕೆ" ಎಟಕುವಂತೆ ಮಾಡುವೆವು ಮತ್ತು ಬೆಳ್ಳಿದೇವರ ರೋಗವನ್ನು ನಮ್ಮ ಮಂತ್ರೌಷಧಿಯಿಂದ ಓಡಿಸಿ ಹೇಳಹೆಸರಿಲ್ಲದಂತೆ ಮಾಡುವೆವು. ಪ್ರತಿಯಾಗಿ ಬೆಳ್ಳಿದೇವರು ತನ್ನ ಇಬ್ಬರು ಕುಮಾರಿಯರನ್ನು ನಮಗೆ ವಿವಾಹಮಾಡಿ ಕೊಡತಕ್ಕದು. ಏನು—ಈ ಕರಾರಿಗೆ ಒಪ್ಪಿಗೆಯೇ?"

ಯೋಚಿಸಲಿಕ್ಕೆಡೆಯೇ ಇಲ್ಲದ, ಮರಣಪ್ರಾಯನಾದ ಆ ಬೆಳ್ಳಿದೇವ ಒಪ್ಪಿಗೆಯನ್ನು ಕೊಟ್ಟೇಬಿಟ್ಟನು.

ವೈದ್ಯದ್ವಯರು ತಮ್ಮ ನಮೂದನೆಯ ಒಗಟನ್ನು ಬಿಚ್ಚಿ ವಿವರಿಸಿದರು:

"ನಾವು ಸೂಚಿಸಿದ 'ಐವಲ' ಚಿನ್ನದ ಪುಡಿ", "ಮೂವಲ" ಬೆಳ್ಳಿಪುಡಿ ಮತ್ತು ಕಬ್ಬಿಣದ ಪುಡಿಗಳೆಂದರೆ ಕ್ರಮವಾಗಿ ಅರಸಿನ, ಅರಳಕ್ಕಿ ಮತ್ತು ಮಸಿಪುಡಿಗಳು. ಐದು ಜನರ ತಲೆ ಕಡಿದು, ಮತ್ತೆ ಮೂರು ಜನರ ಕುಂಡೆಕೆತ್ತಿ ತರಬೇಕೆಂದರೆ—ಐದು ಸೀಯಾಳಗಳ ತಲೆಗಳನ್ನು ಕಡಿದು, ಮೂರು ತೆಂಗಿನಕಾಯಿಗಳ ಸಿಪ್ಪೆ ಸುಲಿದು ತರಬೇಕೆಂದು ಭಾವವು. "ಮದ್ಮಲ್" ಹೆಣ್ಣಿನ ಕೊರಳನ್ನು ಕೊಯ್ಯಬೇಕೆಂದರೆ, ಮೊಟ್ಟೆ ಇಡಲಿಕ್ಕಾದ ಹೇಟೆಯ ಕೊರಳನ್ನು ಕೊಯ್ಯಬೇಕೆಂದು ತಾತ್ಪರ್ಯ. "ಗೂರುಗುರುಮೆದ ತೆತ್ತಿ" ಅಂದರೆ ಅಡಿಕೆ. ಕತ್ತಿಲ್ಲದೆ ಕಾಡು ಕಡಿದು ತನ್ನಿರೆಂದರೆ, ಕೈಯಿಂದ ವೀಳ್ಯದೆಲೆ ಕಿತ್ತು ತನ್ನಿರಿ ಎಂಬುದಾಗಿ ಸೂಚನೆ. ಕೊನೆದಾಗಿ ಗರ್ಭಿಣಿ ಸ್ತ್ರೀ! ಬೆಳ್ಳಿದೇವರಿಗೆ, ಅಂದು ಗರ್ಭವತಿಯಾದ ಅವರ ತಂಗಿ ಹಾಗೂ ನಮ್ಮ ಮಾತೆಯಾದ ಅನ್ನಂದ್ರಾಯಿದಿ ಸೀತೆಯ ಹೊಟ್ಟೆ ಸೀಳಿ, ನೆತ್ತರು ಕಂತೆ ನಾಳ ಯಕೃತ್ ಪ್ಲೀಹೆಗಳನ್ನು ತರಿಸಿಕೊಳ್ಳಲು ಸಾಧ್ಯವಾಯಿತು! ಆದರೆ ನಮ್ಮ ಮಾವ ಬೆಳ್ಳಿದೇವರು ಮೋಸಹೋಗಿ, ಉಪಾಯಾಂತರದಿಂದ ನಮ್ಮ ತಾಯಿ ಉಳಿಯುವಂತಾದಳು. ಇರಲಿ! ಆದರೆ, ಇಲ್ಲಿ ಗರ್ಭಿಣಿ ಸ್ತ್ರೀಯ ಹೊಟ್ಟೆ ಸೀಳಿ ಶಿಶುವನ್ನು ತನ್ನಿರೆಂದರೆ, ಕಂಗಿನ ಹಾಳೆಯನ್ನು ಸೀಳಿ ಅದರೊಳಗಿರುವ ಹಿಂಗಾರವನ್ನು ತೆಗೆದು ತನ್ನಿರೆಂದು ನಿರ್ದೇಶನ."

ಬೆಳ್ಳಿದೇವನ ಹಾಗೂ ಕೂಡಿದ ಪರಿವಾರದವರ ಮುಖಗಳಲ್ಲಿ ವಿನೂತನ ಆನಂದೋಲ್ಲಾಸದ ತೆರೆಗಳೋಲಾಡಿಕೊಂಡವು. ಆಯಾಯ ಸಾಹಿತ್ಯಗಳನ್ನು ಜೋಡಿಸಲಾಯಿತು. ವೈದ್ಯರು ಬೆಳ್ಳಿದೇವನ ಅರ್ಥಾತ್ ತಮ್ಮ ಮಾವನ ಬಳಿನಿವಾಳಿಸಿ ತೆಗೆಯುವ ಕ್ರಿಯೆಗಳನ್ನು ನಿರ್ವಹಿಸಿ ಔಷಧವನ್ನಿತ್ತರು.

ಬೆಳ್ಳಿದೇವ ಪೂರ್ಣ ಆರೋಗ್ಯವಂತನಾಗಿ ಆಲೆದಾಡಿದನು. ಶ್ರೀಕೃಷ್ಣನು ಚಿತ್ತೈಸಿದನು. ಭಾವಭಾವನವಮೈತ್ರಿಯಿಂದ ಸಲ್ಲಾಪಿಸಿದರು. ಬೆಳ್ಳಿದೇವ ಖುದ್ದು ಹೋಗಿ ತನ್ನ ತಂಗಿ ಅನ್ನಂದ್ರಾಯಿದಿ ಸೀತೆಯನ್ನು ದಂಡಿಗೆಯಲ್ಲಿ ತನ್ನ ಅರಮನೆಗೆ ಕರಕೊಂಡು ಬಂದು ಒಂದು ಶುಭಲಗ್ನದಲ್ಲಿ ಸುಮೂರ್ತದಲ್ಲಿ ವೈದ್ಯರತ್ನರಾದ ತನ್ನ ಖಾಸಾ ಅಳಿಯಂದಿರಿಗೆ ತನ್ನ ಸ್ವಂತ ಇಬ್ಬರು ಕುವರಿಯರನ್ನು ಕೊಟ್ಟು ಬಹು ವಿಜೃಂಭಣೆಯಿಂದ ವಿವಾಹವನ್ನು ಜರಗಿಸಿದನು.

—ಎಂ. ನಾರಾಯಣ,
ಮಂಗಳೂರು.

ಸೂರ್ಯನೇ ಜೀವನಾಧಾರ

ಸೂರ್ಯನೇ ಸಕಲ ಜೀವರಾಶಿಗೂ ಜೀವನಾಧಾರ. ಸೂರ್ಯ ಶಾಖವಿಲ್ಲದಿದ್ದರೆ ಜಗತ್ತು ಹೆಚ್ಚು ಹೊತ್ತು ಬದುಕಲಾರದು. ಈ ಸೌರಶಕ್ತಿಯನ್ನು ಅಗ್ಗದಲ್ಲಿ ಹಿಡಿದು ಬಳಸುವ ವಿಧಾನಗಳಿಗಾಗಿ ಸುಮಾರು 30 ರಾಷ್ಟ್ರಗಳಲ್ಲಿ ಸಂಶೋಧನೆ ನಡೆಯುತ್ತಿದೆ.

ಈ ಗ್ರಹದ ಎಲ್ಲಾ ಜೀವರಾಶಿಗಳಿಗೂ ಎಂದಿನಿಂದಲೂ ಸೂರ್ಯನೇ ಆಧಾರ. ಇದ್ದಕ್ಕಿದ್ದಂತೆ ಸೂರ್ಯನು ಮರೆಯಾದರೆ ಕೆಲವೇ ದಿನಗಳಲ್ಲಿ ಭೂಮಿಯ ಮೇಲಿನ ಸರ್ವ ಜೀವರಾಶಿಯೂ ನಾಶವಾದೀತು.

ಪ್ರತಿ ದಿನವೂ ಸೂರ್ಯನಿಂದ ಭೂಮಿಗೆ ಬರುತ್ತಿರುವ ಸೌರಶಕ್ತಿಯ ಪ್ರಮಾಣ, ಪ್ರಪಂಚದ ಜನ 24 ಗಂಟೆಗಳ ಅವಧಿಯಲ್ಲಿ ಬಳಸುವ ಶಕ್ತಿಯ 32,000ದಷ್ಟು.

ನೆಲದೊಳಗಿನ ಎಣ್ಣೆ, ಅನಿಲ ಹಾಗೂ ಕಲ್ಲಿದ್ದಲು ಮುಗಿದು ಹೋಗಲು ಬಹು ಕಾಲ ಬೇಕಾಗಿಲ್ಲವೆಂದೇ ವಿಜ್ಞಾನಿಗಳು ಸೌರಶಕ್ತಿಯನ್ನು ಹೂಡಲು ಪ್ರಯತ್ನಿಸುತ್ತಿದ್ದಾರೆ. ದೀರ್ಘಾವಧಿಯಲ್ಲಿ ಪರಮಾಣು ಶಕ್ತಿ ಕೂಡ ಮಾನವನ ಶಕ್ತಿಯ ಅವಶ್ಯಕತೆಗಳನ್ನು ಪೂರೈಸಲಾರದು. ಏಕೆಂದರೆ ಅದಕ್ಕೆ ಅವಶ್ಯಕ ಧಾತುವಾದ ಯುರೇನಿಯಂ ಕೂಡ ಮುಗಿದು ಹೋಗುವ ಸಂಭವವುಂಟು—ಎಂಬುದನ್ನೂ ಅವರು ಬಲ್ಲರು.

ಕೋಟ್ಯಾಂತರ ವರ್ಷಗಳ ಅವಧಿಯಲ್ಲಿ ಪ್ರಕೃತಿ ಸಿದ್ಧಪಡಿಸಿರುವ ಶಕ್ತಿ ಮೂಲಗಳನ್ನು ಮಾನವ ಬಳಸಬಲ್ಲನೇ ಹೊರತು ಪುನಃ ಸೃಷ್ಟಿಸಲಾರ. ಆದುದರಿಂದ ಕಾಲಾನುಕ್ರಮದಲ್ಲಿ ಆತ ಇತರ ಮೂಲಗಳನ್ನು ಅವಲಂಬಿಸಬೇಕಾದೀತು. ಭೂಮಿಯಲ್ಲಿ ಜೀವ ಉಳಿದಿರುವವರೆಗೂ ಸೌರಶಕ್ತಿಯನ್ನು ಬಳಸಲು ಅವಕಾಶವಿರುವುದರಿಂದ ಅಗ್ಗದಲ್ಲಿ ಸೂರ್ಯ ಕಿರಣಗಳನ್ನು ಹಿಡಿದು ಬಳಸುವ ವಿಧಾನಗಳಿಗಾಗಿ ಸುಮಾರು 30 ರಾಷ್ಟ್ರಗಳಲ್ಲಿ ಸಂಶೋಧನೆ ನಡೆಯುತ್ತಿದೆ.

ಸೌರಪಾಕ ಪಾತ್ರೆ

ವಕ್ರ ಪ್ರತಿಫಲಕದಲ್ಲಿ ಸೂರ್ಯ ರಶ್ಮಿಗಳನ್ನು ಸಂಗ್ರಹಿಸುವ ಮೂಲಕ ಲಭಿಸುವ ಕಾವಿನಿಂದ ಮನೆಗಳಲ್ಲಿ ಅಡಿಗೆ ಮಾಡಬಹುದೆಂಬುದನ್ನು ಭಾರತದಲ್ಲಿ ಈಗಾಗಲೇ ಪ್ರದರ್ಶಿಸಲಾಗಿದೆ. ಸೌರ ಪಾಕ ಪಾತ್ರೆಗಳನ್ನು ಅಗ್ಗದ ದರದಲ್ಲಿ ಭಾರತದ ಹಳ್ಳಿಗಳಿಗೆ ಒದಗಿಸಬಹುದಾದರೆ, ಈಗ ಇಂಧನವಾಗಿ ಬಳಸುತ್ತಿರುವ ಸಗಣಿಯನ್ನು ಹೆಚ್ಚು ಪ್ರಯೋಜಕವಾದ ಗೊಬ್ಬರವನ್ನಾಗಿ ಬಳಸಬಹುದು.

ಸೌರಶಕ್ತಿಯ ಬಳಕೆಗಾಗಿ ಅಮೇರಿಕದಲ್ಲಿ ವಿಧಾನಗಳನ್ನೂ ಉಪಕರಣಗಳನ್ನೂ ಸಿದ್ಧಪಡಿಸಲಾಗಿದೆ. ಇವುಗಳಲ್ಲಿ ಒಂದು ಭಾರತದ ಸೌರಪಾಕ ಪಾತ್ರೆಯಂತೆ ಅಡಿಗೆಯ ಪಾತ್ರೆಯ ಮೇಲೆ ಸೂರ್ಯರಶ್ಮಿಗಳನ್ನು ಕೇಂದ್ರೀಕರಿಸುವ ಸರಳವಾದ ಪ್ರತಿಫಲಕ; ಇನ್ನೊಂದು ಸೌರ ಒಲೆ—ಇದು ಇನ್ಸುಲೇಟ್ ಮಾಡಿದ ಲೋಹದ ಪೆಟ್ಟಿಗೆ; ಇದರಲ್ಲಿ ಒಂದು ಗಾಜಿನ ಕಿಟಕಿಯಿದ್ದು, ಸುತ್ತಲೂ ಪ್ರತಿಫಲಕಗಳಿವೆ. 2000 ಡಿಗ್ರಿ ಸೆಂಟಿಗ್ರೇಡಿನಷ್ಟು ಕಾವನ್ನು ಒದಗಿಸುವ ಈ ಒಲೆಯಲ್ಲಿ ಬ್ರೆಡ್ಡನ್ನು ಬೇಯಿಸಲು ಸಾದಾ ಒಲೆಯಲ್ಲಿಯಷ್ಟೇ ಕಾವು ಇರುತ್ತದೆ.

ಅಮೇರಿಕದಲ್ಲಿ ಇದು ವರೆಗೂ ವ್ಯಕ್ತಿಗಳೂ ಖಾಸಗಿ ಸಂಸ್ಥೆಗಳೂ ನಡೆಸುತ್ತಾ ಬಂದಿರುವ ಸೌರಶಕ್ತಿಯ ಸಂಶೋಧನೆಯೆಲ್ಲಾ ಪ್ರಥಮತಃ ಅಗ್ಗದ ದರದಲ್ಲಿ ಸೂರ್ಯಕಾವಿನಿಂದ ವಿದ್ಯುತ್ತನ್ನು ಉತ್ಪಾದಿಸುವ ವಿಧಾನದ ಶೋಧನೆಗೂ; ಎರಡನೆಯದಾಗಿ ಕಾಲಾನಂತರದಲ್ಲಿ ಉಪಯೋಗಿಸಲಾಗುವಂತೆ ಸೌರಕಾವನ್ನು ಸಂಗ್ರಹಿಸಿಡಬಹುದಾದ ವಿಧಾನವನ್ನು ಕಂಡುಹಿಡಿಯುವುದಕ್ಕೂ, ಮೂರನೆಯದಾಗಿ ಸೂರ್ಯರಶ್ಮಿಯಿಂದ ಸಸ್ಯಗಳಲ್ಲಾಗುವ ರಸಾಯನಿಕ ಕ್ರಿಯೆಯನ್ನು ಅಂದರೆ ದ್ಯುತಿ ಸಂಯೋಜನೆಯ ರಹಸ್ಯವನ್ನು ಪತ್ತೆಮಾಡುವುದಕ್ಕೂ ವಿನಿಯೋಗವಾಗಿದೆ.

ಸೌರ ವಿದ್ಯುದುತ್ಪಾದಕ

ಸೂರ್ಯ ರಶ್ಮಿಯ ಪ್ರಭಾವವಾದ ಸಸ್ಯಗಳು ಇಂಗಾಲದ ಡಯಾಕ್ಸೈಡನ್ನೂ ನೀರನ್ನೂ ಒಂದುಗೂಡಿಸಿ ನಾನಾ ಬಗೆಯ ಕಾರ್ಬೋಹೈಡ್ರೇಟುಗಳನ್ನು ತಯಾರಿಸುತ್ತವೆ. ಈ ಕಾರ್ಯದಲ್ಲಿ ಕ್ಲೋರೋಫಿಲ್ ವೇಗವರ್ಧಕವಾಗಿ ಕೆಲಸ ಮಾಡುತ್ತದೆ. ಈ ರೀತಿ ಉತ್ಪನ್ನವಾಗುವ ವಸ್ತುಗಳನ್ನು ಆಹಾರವಾಗಿ ಬಳಸಬಹುದು ಅಥವಾ ಇತರ ಬಗೆಯ ಪರಿವರ್ತಕಗಳಲ್ಲಿ ಶಕ್ತ್ಯುತ್ಪಾದನೆಗೆ ಬಳಸಬಹುದು.

ಸೂರ್ಯನ ಕಾವನ್ನು ಸಾಕಷ್ಟು ಪ್ರಮಾಣದಲ್ಲಿ ಸಂಗ್ರಹಿಸಬಲ್ಲ ಪರಿವರ್ತಕ ಯಂತ್ರಗಳೂ ಸಾಮಾನ್ಯವಾಗಿ ವಿಪರೀತ ದುಬಾರಿ ಬೆಲೆಯವು; ಆದರೆ ವಿಪರೀತ ಪ್ರಮಾಣದಲ್ಲಿ ವಿದ್ಯುತ್ತನ್ನು ಬಳಸುವ ನಗರಗಳಿಗೂ, ಕಾರ್ಖಾನೆಗಳಿಗೂ ಈ ತತ್‌ಕ್ಷಣದಲ್ಲಿ ಸೌರಶಕ್ತಿಯನ್ನು ಒದಗಿಸುವುದು ಕಷ್ಟವಾದರೂ, ಚಿಕ್ಕ ಪ್ರದೇಶಗಳಿಗೆ ಒದಗಿಸುವುದು ಸಾಧ್ಯ ಎಂಬುದು ವಿಜ್ಞಾನಿಗಳ ವಾದ.

ಮೊದಲು ಉತ್ಪಾದಿಸಲ್ಪಡುವ ಶಕ್ತಿಯನ್ನು ವ್ಯವಸಾಯ ಕ್ಷೇತ್ರಗಳಲ್ಲೂ ಮನೆಗಳಲ್ಲೂ ಬಳಸಬಹುದು. ಕಡಿಮೆ ಕಾವಿನಲ್ಲಿ, ಕಡಿಮೆ ವೋಲ್ಟೇಜಿನಲ್ಲಿ ಏಕಮುಖ ವಿದ್ಯುತ್ ಪ್ರವಾಹವನ್ನು ಕಳೆಯುವ ಮಾದರಿಯ ಯಂತ್ರಗಳಿಂದ ಪ್ರಪಂಚದ ಅಲ್ಪಾಭಿವೃದ್ಧ ದೇಶಗಳಲ್ಲಿ ಒದಗಿಸಬಹುದು. ಇಂಥ ವಿದ್ಯುದುತ್ಪಾದಕಗಳ ಬೆಲೆಯೂ ಕಮ್ಮಿ; ನಡೆಸುವುದೂ ಸುಲಭ; ಭರ್ಜರಿ ಬಿಸಿಲು, ನೀರಿನ ಅಭಾವಗಳಿರುವ ಪ್ರದೇಶಗಳಿಗೆ ಈ ಬಗೆಯ ಯಂತ್ರ ಬಹು ಉಪಯುಕ್ತವೆನಿಸುವುದು.

ಅಮೇರಿಕದ ಸಂಸ್ಥೆಯೊಂದು ಇತ್ತೀಚೆಗೆ ಸಿದ್ಧಪಡಿಸಿರುವ ಯಂತ್ರದಲ್ಲಿ ಪರವಲಯದ ಪ್ರತಿಫಲಕವೊಂದು, ಭಿನ್ನ ರೀತಿಯ ಲೋಹಗಳನ್ನು ಜೋಡಿಸಿದ ಉಷ್ಣಶ್ರೇಣಿಯ ಮೇಲೆ ಸೂರ್ಯರಶ್ಮಿಯ ಕಾವನ್ನು ಕೇಂದ್ರೀಕರಿಸುತ್ತದೆ. ಕಾವು ಏರಿದಾಗ ವಿದ್ಯುದುತ್ಪತ್ತಿಯಾಗುತ್ತದೆ. ಈ ವಿದ್ಯುದುತ್ಪನ್ನದಿಂದ 20 ಅಡಿಗಳಷ್ಟು ಆಳದಿಂದ ನೀರನ್ನು ಎತ್ತಿ 40 ಎಕರೆಗಳಿಗೆ ಹಾಯಿಸಬಹುದು.

ಸೌರಕೋಶ ಮಾಲೆ

ಸೌರಶಕ್ತಿಯ ಸಂಶೋಧನಾ ಕ್ಷೇತ್ರದಲ್ಲಿ ಅಮೆರಿಕ ನಡೆಸಿರುವ ಸಾಧನೆಗಳಲ್ಲಿ ಅತ್ಯಂತ ಗಣನಾರ್ಹವಾದುದೆಂದರೆ 1954ರಲ್ಲಿ ಕಂಡುಹಿಡಿಯಲಾದ ಸೌರ ಕೋಶ ಮಾಲೆ (ಬ್ಯಾಟರಿ). ದೊಡ್ಡದೊಂದು ತಟ್ಟೆಯಂತಿರುವ ಈ ಸಾಧನದಲ್ಲಿ ಆರ್ಸೆನಿಕ್ ಮತ್ತು ಬೋರಾನುಗಳ ಚಿಕಿತ್ಸೆಗೆ ಒಳಪಡಿಸಿದ ಶುದ್ಧ ಸಿಲಿಕಾನಿನ ತೆಳುವಾದ ಚೂರುಗಳನ್ನು ತುಂಬಲಾಗುವುದು. ತಟ್ಟೆಯಂತೆ ಕಾಣುವ ಪ್ರತಿಯೊಂದು ಕೋಶವೂ ಒಂದು ವಿದ್ಯುದುತ್ಪಾದಕದಂತೆ ಕೆಲಸಮಾಡುತ್ತದೆ. ಬೆಳಕು ತೆಳುವಾದ ಚೂರುಗಳ ಮೇಲೆ ಬಿದ್ದಾಗ ಸ್ಥಿರ ವಿದ್ಯುತ್‌ಪೂರಣವಾಗಿ ಏಕಮುಖ ವಿದ್ಯುತ್ ಪ್ರವಾಹ ಹರಿಯತೊಡಗುತ್ತದೆ. ರಾತ್ರಿ ಅಥವಾ ಮೋಡಕವಿದ ದಿನಗಳಲ್ಲೂ ಕೋಶಮಾಲೆಗಳು ಕೆಲಸಮಾಡುವಂತೆ ಈ ವಿದ್ಯುತ್ ಪ್ರವಾಹ ಶಕ್ತಿಯನ್ನು ಒದಗಿಸುತ್ತದೆ. ಕಂಬವೊಂದರ ಮೇಲೆ ಇರಿಸಲಾದ ಇಂತಹ ಕೋಶಮಾಲೆಯೊಂದನ್ನು ಎಂಟು ಕುಟುಂಬಗಳಿರುವ ಹಳ್ಳಿಯೊಂದರ ಟೆಲಿಫೋನ್ ವ್ಯವಸ್ಥೆಗೆ ಅಗತ್ಯವಾದ ಶಕ್ತಿಯನ್ನು ಒದಗಿಸಲು ಆರು ತಿಂಗಳಿಂದ ಬಳಸಲಾಗುತ್ತಿದೆ.

ಇದೇ ಬಗೆಯ ಕೋಶಮಾಲೆಗಳನ್ನು ಸೌರ ಶಕ್ತಿಯಿಂದ ನಡೆಯುವ ರೇಡಿಯೊಗಳಲ್ಲೂ ಶ್ರವಣ ಸಹಾಯಕ ಸಾಧನಗಳಲ್ಲೂ ಬಳಸಲಾಗಿದೆ.

ಇಷ್ಟಾದರೂ ಶುದ್ಧ ಸಿಲಿಕಾನಿಗೆ ಪ್ರಕೃತ ಚಿನ್ನದಷ್ಟೇ ಬೆಲೆಯಿದೆ. ಆದುದರಿಂದ ಬಹು ದುಬಾರಿಯ ಸೌರಕೋಶ ಮಾಲೆಗಳನ್ನು ಪೇಟೆಯಲ್ಲಿ ಮಾರಲಾಗುತ್ತಿಲ್ಲ. ಆದರೆ ಶಕ್ತಿಯನ್ನು ಒದಗಿಸುವ ಸಾಧನ ಸಾಧ್ಯವಿದ್ದಷ್ಟೂ ಹಗುರವಾಗಿರಬೇಕಾದ ಗಗನ ವಾಹನಗಳಲ್ಲಿ ಈ ಕೋಶಮಾಲೆಗಳು ಬಹು ಉಪಯುಕ್ತವೆನಿಸಿವೆ.

ವೈಜ್ಞಾನಿಕ ಅಂಶಗಳ ಸಂಗ್ರಹಣವನ್ನೂ ಭೂಮಿಗೆ ಪ್ರಸಾರ ಮಾಡುವುದನ್ನೂ ಎಕ್ಸ್‌ಪ್ಲೋರರ್-6 ಸೌರಶಕ್ತಿಯಿಂದ ಕೆಲಸಮಾಡುವ ರಿಕಾರ್ಡಿಂಗ್ ಹಾಗು ವಿಸರಣ ಯಂತ್ರಗಳ ಸಹಾಯದಿಂದಲೇ ನಡೆಸಿತು.

ಸೌರ ಕುಲಿಮೆ

ವಿಜ್ಞಾನ ಸಂಶೋಧನೆಗೆ ಸಹಾಯಕವಾಗಿ ಅಮೆರಿಕದಲ್ಲಿ ಪ್ರಯೋಗರೂಪದ ಸೌರ ಕುಲಿಮೆಗಳನ್ನು ನಿರ್ಮಿಸಲಾಗಿದೆ. ಸೂರ್ಯ ರಶ್ಮಿಯನ್ನು ಕ್ರೋಢೀಕರಿಸಿ ಸೂರ್ಯನ ಕಾವನ್ನು ಸಂಗಮ ಬಿಂದುವೊಂದರ ಮೇಲೆ ಕೇಂದ್ರೀಕರಿಸುವ ಸಲುವಾಗಿ, ಕೆಲಿಫೋರ್ನಿಯದಲ್ಲಿ ನಿರ್ಮಿಸಲಾಗಿರುವ ಅತ್ಯಂತ ದೊಡ್ಡ ಸೌರ ಕುಲಿಮೆಗಳಲ್ಲೊಂದು, ಅಲ್ಯೂಮಿನಿಯಮ್ಮಿನ ಬೃಹದಾಕಾರದ ವಕ್ರಪ್ರತಿಫಲಕವೊಂದನ್ನು ಬಳಸುತ್ತದೆ.

ಮಧ್ಯಾಹ್ನದಲ್ಲಿ ಈ ಕುಲಿಮೆಯಲ್ಲಿನ ಶಾಖ 4000 ಡಿಗ್ರಿ ಸೆಂಟಿಗ್ರೇಡಿಗೆ ಏರುತ್ತದೆ. ಈ ಪ್ರಮಾಣದ ಕಾವಿನಲ್ಲಿ ಉಕ್ಕಿನ ಬೋಲ್ಟನ್ನು ಸೆಕೆಂಡುಗಳಲ್ಲಿ ಕರಗಿಸಬಹುದು. ಸೌರ ಕುಲಿಮೆಗಳಲ್ಲಿ ಮಾಮೂಲಿ ಕೈಗಾರಿಕಾ ವಿಧಾನಗಳ ಸಂಬಂಧದಲ್ಲಿ ಆಗುವಂತೆ ಇಂಧನಗಳ ಸಂಸರ್ಗಕ್ಕೆ ಅವಕಾಶ ನೀಡದೆ ತೀವ್ರ ಕಾವನ್ನು ಉಂಟುಮಾಡಬಹುದು. ಆದುದರಿಂದ ಸೌರ ಕುಲಿಮೆಗಳು ಪ್ರಯೋಗಗಳಿಗೆ ಬಹು ಅಮೂಲ್ಯವಾಗಿವೆ.

ಸೌರ ಪಾತ್ರೆ, ಸೌರ ವಿದ್ಯುದುತ್ಪಾದಕ, ಸೌರಕೋಶ ಮಾಲೆ ಹಾಗೂ ಸೌರ ಕುಲುಮೆ ಇವೆಲ್ಲವೂ ಮಹತ್ತರ ಪ್ರಯೋಜನದ ಭರವಸೆಯನ್ನು ನೀಡುತ್ತವೆಯಾದರೂ, ಸಮುದ್ರ ನೀರನ್ನು ಶುದ್ಧ ನೀರನ್ನಾಗಿ ಪರಿವರ್ತಿಸುವ ಸೌರ ಭಟ್ಟಿ ಇವೆಲ್ಲಕ್ಕಿಂತ ಹೆಚ್ಚು ಪ್ರಯೋಜನದ ಭರವಸೆಯನ್ನು ನೀಡಬಲ್ಲದಾಗಿದೆ.

ಭೂಮಿಗೆ ಸೂರ್ಯನ ವರಪ್ರಸಾದ ಬೃಹತ್ತರವಾದುದು. ಆದರ ಸೇಕಡ 60ರಷ್ಟನ್ನು ಈಗ ಉಪಯೋಗ ಮಾಡಿಕೊಳ್ಳುತ್ತಿಲ್ಲ. ಈ ಶಕ್ತಿಯ ಬಹು ಭಾಗವನ್ನು ಭೂಮಿಯನ್ನು ಕವಿದಿರುವ ಮೋಡದ ತೆರೆ ಹೀರಿಕೊಳ್ಳುತ್ತದೆ; ತಮ್ಮನ್ನು ತಲುಪುವ ಕಾವನ್ನು ಭೂಮಿ ಹಾಗೂ ಸಾಗರಗಳು ಹೊರ ಚೆಲ್ಲುತ್ತವೆ. ಕಾಲಾನುಕ್ರಮದಲ್ಲಿ ಈ ನಷ್ಟವನ್ನು ತಪ್ಪಿಸಿ, ಸಂಗ್ರಹಿಸಿಡುವ ವಿಧಾನವನ್ನು ಕಂಡುಹಿಡಿದಾಗ ಸೌರ ಶಕ್ತಿ ಪರಮಾಣು ಶಕ್ತಿಯನ್ನು ಮೀರಿಸುವಂತಹ ಶಕ್ತಿ ಮೂಲವಾಗುವುದು ಎಂಬುದಾಗಿ ಅಮೆರಿಕದ ಅನೇಕ ಮಂದಿ ವಿಜ್ಞಾನಿಗಳು ನಂಬಿದ್ದಾರೆ.

ಲೋಕದ ರೀತಿನೀತಿಗಳು

ಡಾ| ವಿ. ಎ. ಶೆಣೈ, ಬಿ.ಎಸ್‌ಸಿ. (ಆನರ್ಸ್), ಬಿ.ಎಸ್‌ಸಿ. (ಟೆಕ್), ಪಿ.ಎಚ್‌ಡಿ. (ಟೆಕ್)

ಎಲ್ಲರೂ ಮಾಡುವುದು ಹೊಟ್ಟೆಗಾಗಿ

12 ಲೌಕಿಕ ದೃಷ್ಟಿಯಲ್ಲಿ ಹೊಟ್ಟೆಯ ಸ್ಥಾನವು ಬಲು ದೊಡ್ಡದಿದೆ. ಈ ಹೊಟ್ಟೆಯನ್ನು ಹೊರಲು ಏನೇನೆಲ್ಲ ಮಾಡಬೇಕಾಗುತ್ತದೆ! ಇದಕ್ಕೆ ಇತರರು ಕುಳಿತ ಪಲ್ಲಕ್ಕಿಯನ್ನು ಹೊರಬೇಕಾಗುತ್ತದೆ. ದೊಡ್ಡ ದೊಡ್ಡ ಮಲ್ಲರೊಡನೆ ಆಡಬೇಕಾಗುತ್ತದೆ. ಸುಳ್ಳು ಸುಳ್ಳಾಗಿ ಹೊಗಳಬೇಕಾಗುತ್ತದೆ. ರಾಜನಾಗಿ ದೇಶವನ್ನಾಳುವುದೂ, ಆನೆ ಕುದುರೆಗಳನ್ನೇರಿ ಯುದ್ಧ ಮಾಡುವುದೂ, ಪಾಪವನ್ನೂ ಮಾಡುವುದೂ ಹೊಟ್ಟೆ ಹೊರೆಯುವುದಕ್ಕಾಗಿಯೇ. ಅಲ್ಲದೆ, ಇದಕ್ಕಾಗಿ ಬೆಟ್ಟದಂಥ ಹೊರೆಯನ್ನೂ ಹೊರಬೇಕಾಗುತ್ತದೆ ಮತ್ತು ಗಟ್ಟಿಯಾಗಿ ಕೂಗಲೂ ಬೇಕಾಗುತ್ತದೆ. ಉದರಪೋಷಣೆಗೆ ಇವುಗಳನ್ನೆಲ್ಲ ಮಾಡಬೇಕಾದರೂ, ಮುಕ್ತಿಗಾಗಿ ದೇವರನ್ನು ಭಜಿಸಬೇಕು ಮತ್ತು ಧ್ಯಾನಿಸಬೇಕು.

"ಹಣವೇ! ನಿನ್ನಯ ಗುಣ!"

13 ಹೊಟ್ಟೆ ಹೊರೆಯಬೇಕಾದರೆ ಹಣವು ಬೇಕಾಗುತ್ತದೆ. ಆದರೆ, ಈ ಹಣವೆಂಬುದು ದುರ್ಜನರ ಸಂಗದಂತಿರುತ್ತದೆ. ಏಕೆಂದರೆ, ಅದು ಬಲು ಕೆಟ್ಟದಿದೆ. ಅದು ಆಚಾರವನ್ನೇನೋ ಹೇಳುತ್ತದೆ. ಆದರೆ, ಅದರೊಂದಿಗೆ ಬಹು ನೀಚನನ್ನಾಗಿಯೂ ಮಾಡಿಸುತ್ತದೆ. ನಾಚಿಕೆಯಿಲ್ಲದೆ ಮನೆ ಮನೆ ತಿರುಗಿಸಿ, ಜನರಿಂದ ಹೀಯಾಳಿಸಿಕೊಳ್ಳುವಂತೆಯೂ ಮಾಡುತ್ತದೆ; ನೆಂಟತನ ಹೇಳಿ ಅನೇಕ ನೆಂಟರನ್ನು ಒಲಿಸುತ್ತದೆ. ಒಮ್ಮೆ ಅದು ತಲೆಯೆತ್ತಿ ಜಂಭದಿಂದ ಅಲೆದಾಡಿಸಿದರೆ, ಇನ್ನೊಮ್ಮೆ (ಬೇರೆಯವರಿಗೆ ಮುಖ ತೋರಿಸದಂತೆ) ಕುಂಟನಾಗಿ ನಡೆಯುವಂತೆ ಮಾಡುತ್ತದೆ. ಒಮ್ಮೆ ಅದು ಒಬ್ಬನನ್ನು ಮಾನವನನ್ನಾಗಿಸಿ, ಇನ್ನೊಮ್ಮೆ ಅವನ ಮಾನವನ್ನೇ ಕೆಡಿಸುತ್ತದೆ. ಇಷ್ಟೆಯಲ್ಲದೆ, ಈ ಹಣವು ದೇವರನ್ನು ನಮ್ಮ ಮುಂದಿನಿಂದ ಮರೆಯಿಸುತ್ತದೆ. ಹಣದ ಮಹಿಮೆಯು ಅಪಾರವಾದುದು. ಇದು ಯಾವಾಗಲೂ ದುಃಖಮೂಲವಾಗಿರುತ್ತದೆ. ಇದು ಮಕ್ಕಳುಮರಿಗಳನ್ನು ಉಂಟುಮಾಡಿಸುತ್ತದೆ. ಸಕ್ಕರೆ ತುಪ್ಪಗಳನ್ನು ಸವಿಯಲು ಒದಗಿಸುತ್ತದೆ, ಚಿಂತೆಯನ್ನು ದೂರಮಾಡುತ್ತದೆ. ಆದರೆ, ಇಂಥ ಹಣವು ಥಕ್ಕನೆ ಹೋಯಿತೆಂದರೆ ಘಾತವಾಗುತ್ತದೆ. ಇದು ಸುಮ್ಮನಿರದೆ, ನಾವು ನೆಂಟರಿಷ್ಟರನ್ನು ಮರೆಯುವಂತೆಯೂ, ಗಂಟು ಕಟ್ಟಿಡಲಿಕ್ಕೂ, ತುಂಟತನಗಳನ್ನು ಬಲಗೊಳಿಸಲೂ, ಸಂಕಟಗಳನ್ನು ಪರಿಹರಿಸಲೂ ಕಲಿಸುತ್ತದೆ. ಇದರ ಇರುವಿಕೆಯಿಂದ ಒಬ್ಬನಲ್ಲಿ ಇಲ್ಲದ ಗುಣಗಳು ಉಂಟಾಗುತ್ತವೆ, ನಡೆಯದ ನಾಣ್ಯಗಳು ಇದರ ಪ್ರಭಾವದಿಂದ ನಡೆಯುತ್ತವೆ ಮತ್ತು ಇದು ಬೆಲ್ಲಕ್ಕಿಂತಲೂ ಬಹು ಸವಿಯಾಗಿರುತ್ತದೆ. ಹೀಗಿರುವ ಹಣವು ಹೋದರೆ ತುಂಬ ದುಃಖವಾಗುತ್ತದೆ. ಇದು ಸಹಜವಾದ ಗುಣಗಳನ್ನು ಮರೆಸಿ, ಸೇವಕರನ್ನು ಬರಿಸಿ, ಆಭರಣಗಳನ್ನು ಗಳಿಸಿ, ಒಂಟೆ, ಕುದುರೆ, ಆನೆ ಮೊದಲಾದುವುಗಳನ್ನು ತರಿಸುತ್ತದೆ. ಕಟ್ಟಲೆಯನ್ನು ಕಲಿಸಿ ತನ್ನ ಮೇಲೆ ಹೊಂದಿಕೊಂಡಿದ್ದ ಜನರನ್ನು ದೂರಮಾಡಿ, ದೇವರ ಸ್ಮರಣೆಯನ್ನು ಮರೆಸುವಂಥ ವಸ್ತು. ಕೊನೆಗೆ ಬಿದ್ದುಹೋಗುವಂಥ ಕನಸು ಎನ್ನಲಿಕ್ಕೆ ಯೋಗ್ಯವಾದುದಾಗಿದೆ.

ನೆಂಟರು—ಹಿತವರೇ?

14. ಆ ನೆಂಟರಿಷ್ಟರೆಂಬವರು ಹೇಗಿರುತ್ತಾರೆ? ನಾವು ಶಕ್ತರಾದರೆ (ಸ್ಥಿತಿವಂತರಾದರೆ) ಮಾತ್ರ ಈ ನೆಂಟರು ನಮಗೆ ಹಿತರಾಗಿರುತ್ತಾರೆ. ದುರ್ದೈವದಿಂದ ನಾವು ಅಶಕ್ತರಾದೆವೆಂದರೆ, ಅವರೇ ನಮ್ಮ ವೈರಿಗಳಾಗುತ್ತಾರೆ. ಇದಕ್ಕೆ ಕೆಲವು ದೃಷ್ಟಾಂತಗಳನ್ನು ಕೊಡಬಹುದು. ಕಮಲದ ಹೂವು ಸೂರ್ಯನ ಮೇಲಿನ ಕಡುನೆಂಟತನದಿಂದ ನಿರ್ಮಲವಾದ ನೀರಿನಲ್ಲಿ ಅಡಿಕೊಂಡಿರುತ್ತದೆ. ಕಮಲ-ಸೂರ್ಯರೊಳಗಿನ ನಂಟುತನವು ಇಷ್ಟರಲ್ಲೇ ಕೊನೆಗೊಳ್ಳುತ್ತದೆ. ಒಮ್ಮೆ ಅದೇ ಕಮಲವು ನೀರಿನಿಂದ ಮೇಲಕ್ಕೆ ದಡದಲ್ಲಿ ಬಿದ್ದಿತೆಂದ ಮೇಲೆ ಸೂರ್ಯನ ಪ್ರಖರವಾದ ಕಿರಣಗಳಿಂದ ಅದು ಕಂದಿಹೋಗುತ್ತದೆ. ಬೆಂಕಿ ಗಾಳಿಗಳ ಸಂಬಂಧವೂ ಇದೇ ತರದ್ದಾಗಿದೆ. ಕಾಡ್ಗಿಚ್ಚು ಮರಗಳನ್ನು ನುಂಗುವಾಗ ಗಾಳಿಯು ಬೀಸುವಿಕೆಯಿಂದ ಇನ್ನೂ ಅಧಿಕ ತರವಾಗಿ ಪ್ರಜ್ವಲಿಸುತ್ತದೆ. ಆದರೆ, ಮನೆಯೊಳಗಿನ ದೀಪದ ಜ್ಯೋತಿಯು ಗಾಳಿಯು ತಾಗಿದೊಡನೆ ನಂದಿಹೋಗುತ್ತದೆ. ಆಗ ಗಾಳಿಯ ನಂಟುತನವೆಲ್ಲಿ ಹೋಗುತ್ತದೆ?

ಶಕ್ತಿಗುಂದಿದಾಗ ಯಾರಿಗೂ ಯಾರೂ ಇಲ್ಲ!

15. ಅಣ್ಣ ತಮ್ಮಂದಿರೂ ಮಕ್ಕಳುಮರಿಗಳೂ, ಹೇರಳ ಹಣವೂ, ಚಿನ್ನದ ಆಭರಣಗಳೂ, ಉಪ್ಪರಿಗೆಯ ಮನೆಯೂ ಮೊನ್ನೆ ಮೊನ್ನೆ ಹುಟ್ಟಿದ ಗಂಡು ಮಗುವೂ ಇದ್ದರೂ ಸಹ, ಪಂಚೇಂದ್ರಿಯಗಳು ಶಕ್ತಿಗುಂದಿದಾಗ ಮಾತ್ರ, ಅವನ ಲಾಲನೆ ಪಾಲನೆಗಾಗಿ ಒಬ್ಬರೂ ಮುಂದೆ ಬರುವುದಿಲ್ಲ. ನೆಂಟರಿಷ್ಟರೂ, ನೆರೆಕೆರೆಯವರೂ, ಸೇವಕರ ಬಳಗವೂ, ಸೌಭಾಗ್ಯವೂ, ಕೊರಳಿಗೆ ಉರುಳಿನಂತಿದ್ದ ಹೆಂಡತಿಯೂ ಇದ್ದರೂ ಸಹ ಸಾಯುವ ಕಾಲಕ್ಕೆ ಸಂಗಡ ಹೋಗಲು ಒಬ್ಬರೂ ಬರುವುದಿಲ್ಲ. ವಾತ ಪಿತ್ತ ಕಫಾದಿ ವ್ಯಾಧಿಗಳಿಂದ ನರಳುವಾಗ ಈ ನೆಂಟರಿಷ್ಟರಾರೂ ಬರುವುದಿಲ್ಲ. ಆಗ ದೇವರನಾಮವೊಂದೇ ಕಾಯುತ್ತದೆ. ಯಮನ ಭಟರು ಸೆಳೆದೊಯ್ಯುವಾಗ ಹೆತ್ತವರೂ, ಹೆಂಡತಿ ಮಕ್ಕಳೂ ಸಂಗಡ ಬರುವುದಿಲ್ಲ. ಹಿತಚಿಂತಕರೆನಿಸಿದ ಬಂಧುಮಿತ್ರರೂ ಬರುವುದಿಲ್ಲ, ಲೋಕಮಾನ್ಯವಾದ ಆಸ್ತಿಪಾಸ್ತಿ, ಗಜ ತುರಗಾದಿ ಪಶುಬಲ, ಧನಧಾನ್ಯ ಮೊದಲು ಬಳಸಿದ ಸಾಧನಗಳೂ ಹಿಂದೆ ಬರುವುದಿಲ್ಲ. ಆ ಕಾಲಕ್ಕೆ ಲಕ್ಷ್ಮೀಪತಿಯೊಬ್ಬನಲ್ಲದೆ ಬೇರಾರೂ ಗತಿಯಿಲ್ಲದಾಗುತ್ತದೆ. ಒಬ್ಬನ ದೇಹವೂ ಅವನೊಡನೆ ಬರದು. ಅಷ್ಟೆಯಲ್ಲ, ಪ್ರಾಣಹೋದ ಮೇಲೆ ದೇಹವನ್ನು ನೆಂಟರಿಷ್ಟ ಬಂಧು ಬಾಂಧವರು ಬೆಂಕಿಯಲ್ಲಿ ಹಾಕಿ ಸುಟ್ಟುಬಿಡುತ್ತಾರೆ; ಆ ಮೇಲೆ ಉಳಿದ ಬೂದಿಯನ್ನೂ ನೀರಿನೊಳಗೆ ಚೆಲ್ಲುತ್ತಾರೆ. ಕೆಲಕಾಲ ಅಳುತ್ತಾರೆ. ಇಷ್ಟನ್ನು ತಿಳಿದ ಮೇಲಾದರೂ ಮಾನವನು ದೇವರೇ ಒಡೆಯನೆಂದೂ, ಬೇರಾರೂ ಗತಿಯಿಲ್ಲವೆಂದೂ ಪರಿಗಣಿಸುವುದುತ್ತಮ. ಇದರೊಡನೆ ಹಣಬಂದ ಕಾಲಕ್ಕೆ ಗರ್ವಪಡಬಾರದೆಂಬ ಎಚ್ಚರಿಕೆಯನ್ನೂ ಕೊಡಬೇಕಾಗುತ್ತದೆ.

—— [ಸಶೇಷ]

ಬೇಸಾಯ ಸಂಬಂಧ ಸಾಲಕೊಡುವ ಸಹಕಾರಿ ಸಂಘಗಳ ಸಂಖ್ಯೆ 210,000ರಷ್ಟಿದೆ

ಭಾರತದಲ್ಲಿ ಸಹಕಾರಿ ಸಂಸ್ಥೆಗಳು

ರಾಷ್ಟ್ರದಲ್ಲಿ ಸಹಕಾರದ ಅಭಿವೃದ್ಧಿಗಾಗಿ, ದ್ವಿತೀಯ ಯೋಜನೆಯ ಅಂದಾಜಿನಲ್ಲಿ 34 ಕೋಟಿ ರೂ. ಕಲ್ಪಿಸಿದ್ದಿತು. ಈ ವೆಚ್ಚ ಪ್ರಥಮ ಯೋಜನೆಯಲ್ಲಿ 7·11 ಕೋಟಿ ರೂ. ಕಲ್ಪಿಸಿತ್ತು.

ಪ್ರಥಮ ಮತ್ತು ದ್ವಿತೀಯ ಯೋಜನಾವಧಿಯಲ್ಲಿ ಬೇಸಾಯ ಸಂಬಂಧವಾಗಿ ಸಾಲ ಒದಗಿಸುವ ಪ್ರಾಥಮಿಕ ಘಟ್ಟದ ಸಹಕಾರ ಸಂಸ್ಥೆಗಳ ಸಂಖ್ಯೆ 105,000 ದಿಂದ 210,000ಕ್ಕೆ ಏರಿತು. ಅದೇ ಅವಧಿಯಲ್ಲಿ ಈ ಸಂಸ್ಥೆಗಳ ಸದಸ್ಯರ ಸಂಖ್ಯೆ 44 ಲಕ್ಷದಿಂದ ಸುಮಾರು 170 ಲಕ್ಷಕ್ಕೆ ಏರಿತು. ಈ ಸಂಸ್ಥೆಗಳು ಸಾಲಗಳನ್ನಿತ್ತ ಒಟ್ಟು ಮೊತ್ತ 23 ಕೋಟಿ ರೂ.ಗಳಿಂದ 200 ಕೋಟಿ ರೂ.ಗಳಿಗೆ ಏರಿತು.

ಇತರ ರೀತಿಯ ಸಹಕಾರಿ ಸಂಸ್ಥೆಗಳ ಸಂಖ್ಯೆ 1959ರ ಜೂನ್ ವರೆಗೆ 2·84 ಲಕ್ಷಕ್ಕೂ, ಇವುಗಳ ಸದಸ್ಯರ ಸಂಖ್ಯೆ 248 ಲಕ್ಷಕ್ಕೂ ಏರಿದೆ. ನೇಕಾರರ ಹಾಗೂ ಇತರ ಗೃಹ ಕೈಗಾರಿಕಾ ಸಹಕಾರ ಸಂಘಗಳ ಒಟ್ಟು ಸಂಖ್ಯೆ ಸುಮಾರು 25,000ದಷ್ಟಿದೆ. ಕಬ್ಬಿನ ಸಂಸ್ಕರಣ ಸಂಸ್ಥೆಗಳು, ಬಳಕೆದಾರರ ಸಂಸ್ಥೆಗಳು ಹಾಗೂ ವಸತಿ ನಿರ್ಮಾಣ ಸಹಕಾರ ಸಂಸ್ಥೆಗಳಂತಹ ಸಾಲಗಳನ್ನೀಯದ ಸಹಕಾರ ಸಂಸ್ಥೆಗಳ ಪ್ರಗತಿ ಸಹ ತೃಪ್ತಿಕರವಿದೆ.

ರಾಷ್ಟ್ರದಲ್ಲಿ ಒಟ್ಟು ಸಕ್ಕರೆಯ ಉತ್ಪಾದನೆಯಲ್ಲಿ ಸಹಕಾರಿ ಸಂಸ್ಥೆಗಳ ಪಾಲು 1960ರಲ್ಲಿ ನೂರಕ್ಕೆ 11·4ರಷ್ಟು ಹೆಚ್ಚು.

ತೃತೀಯ ಯೋಜನೆಯಲ್ಲಿ ಸಹಕಾರದ ಅಭಿವೃದ್ಧಿಗಾಗಿ 80 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

——

1966ರೊಳಗೆ ಇನ್ನೂ 20,000 ಗ್ರಾಮಗಳಿಗೆ ವಿದ್ಯುಚ್ಛಕ್ತಿ

ತೃತೀಯ ಯೋಜನೆಯ ಕೊನೆಯ ವೇಳೆಗೆ, 5,000ಕ್ಕೂ ಹೆಚ್ಚು ಜನಸಂಖ್ಯೆ ಇರುವ ನಗರ ಮತ್ತು ಗ್ರಾಮಗಳಿಗೆಲ್ಲಾ ವಿದ್ಯುತ್-ದೀಪಗಳನ್ನು ಒದಗಿಸಲಾಗುವುದು. ಇದೂ ಅಲ್ಲದೆ, 2,000ದಿಂದ ಹಿಡಿದು, 5,000 ವರೆಗೆ ಜನಸಂಖ್ಯೆಯನ್ನು ಹೊಂದಿರುವ ಗ್ರಾಮಗಳಲ್ಲಿ ಅರ್ಧ ಭಾಗದಷ್ಟು ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗುವುದು. 1951ರಲ್ಲಿ 3,687 ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿತ್ತು. ಪ್ರಥಮ ಹಾಗೂ ದ್ವಿತೀಯ ಯೋಜನೆಗಳಲ್ಲಿ ಈ ಸಂಖ್ಯೆಯು 23,000 ವರೆಗೂ ಹೆಚ್ಚಿದೆ. 1965-66ರ ವೇಳೆಗೆ ಅದು 43,000 ವರೆಗೂ ಹೆಚ್ಚುವುದು

ಯೋಜನೆಯು ಆರಂಭವಾದಂದಿನಿಂದ ಈಚೆಗೆ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ಕಾರ್ಯಕ್ರಮ ತ್ವರಿತಗೊಂಡಿದೆ. 5,000ಕ್ಕೂ ಹೆಚ್ಚು ಜನಸಾಂದ್ರತೆಯುಳ್ಳ ಗ್ರಾಮಗಳಲ್ಲಿ ಶೇ. 40ರಷ್ಟು ಗ್ರಾಮಗಳಿಗೆ ಬೇಸಾಯ, ಗೃಹೋಪಯುಕ್ತ ಕೆಲಸಗಳು ಮತ್ತು ಕೈಗಾರಿಕೆಗಳಿಗಾಗಿ ವಿದ್ಯುಚ್ಛಕ್ತಿಯನ್ನು ಒದಗಿಸಿರುವುದು ಇಲ್ಲಿ ಗಮನಾರ್ಹವಾದ ಪ್ರಧಾನ ವಿಷಯ. ನಾಲ್ಕನೆಯ ಹಾಗೂ ಐದನೆಯ ಯೋಜನೆಗಳ ಅವಧಿಯಲ್ಲಿಯೂ ವಿದ್ಯುಚ್ಛಕ್ತಿಯನ್ನೂ ಒದಗಿಸುವ ಕಾರ್ಯಕ್ರಮಗಳನ್ನು ತ್ವರಿತಗೊಳಿಸಲಾಗುವುದು.

——

ಏರೋಮೊಬೈಲ್ ಅಥವಾ ಹಾರುವ ಕಾರು

ರೆಕ್ಕೆ ಅಥವಾ ಗಾಲಿಗಳಿಲ್ಲದಿದ್ದರೂ, 'ಗಾಳಿಯ ಮೆತ್ತೆ'ಯ ಮೇಲೆ ಗಂಟೆಗೆ 60 ಮೈಲು ವೇಗದಲ್ಲಿ ಸಂಚರಿಸುವ ಒಂದು ಅಸಾಮಾನ್ಯ ವಾಹನವು, ಇದೇ ನವಂಬರ 14ರಂದು ನವದೆಹಲಿಯಲ್ಲಿ ಪ್ರಾರಂಭವಾದ ಭಾರತೀಯ ಕೈಗಾರಿಕಾ ಮೇಳದ ಅಮೆರಿಕನ್ ಪೆವಿಲಿಯನ್‌ನ ಪ್ರದರ್ಶನ ವಸ್ತುಗಳಲ್ಲೊಂದು.

ಈ ವಾಹನದ ಹೆಸರು "ಏರೋಮೊಬೈಲ್." ಇದರ ಭಾರ 2000 ರಾತಲ್ಲು. ಇದು ನೆಲದಿಂದ ಒಂದು ಅಡಿ ಎತ್ತರದಲ್ಲಿ ಘಂಟೆಗೆ 60 ಮೈಲು ವೇಗದಲ್ಲಿ ಚಲಿಸುತ್ತದೆ.

——

ಪ್ರಭಾತ
ಕನ್ನಡ ವಾರಪತ್ರಿಕೆ.
ವಾರ್ಷಿಕ ಚಂದಾ:
ಸ್ಥಳೀಯರಿಗೆ
ಒಂದು ವರ್ಷಕ್ಕೆ ರೂ. 6–0–0.
ಆರು ತಿಂಗಳಿಗೆ ರೂ. 3–0–0.
ಪರಸ್ಥಳೀಯರಿಗೆ
ಒಂದು ವರ್ಷಕ್ಕೆ ರೂ. 7–0–0.
ಆರು ತಿಂಗಳಿಗೆ ರೂ. 3–8–0.

ಸಂಯುಕ್ತ ಅಮೆರಿಕದಲ್ಲಿ ನಾಗರಿಕರ ನೃತ್ಯನಾಟಕಗಳ ಪ್ರಭಾವ

(ಬರೆದವರು: ನಾರ್ಮನ್ ಸ್ಮಿತ್)

ನ್ಯೂಯಾರ್ಕ್: ಇತ್ತೀಚೆಗೆ ಅಮೆರಿಕೆಯಲ್ಲಿ 'ಸ್ವಯಂ ಸ್ಫುರಿತ' ನಾಟ್ಯಸಂಘಗಳ ಯುವಜನರು ಅತ್ಯಂತ ಮೋಹಕವಾದ ಚಂದಚೆಲುವಿನ ಸ್ವಚ್ಛಂದವಾದ ನೃತ್ಯವನ್ನು ಪ್ರದರ್ಶಿಸುತ್ತಿದ್ದಾರೆ.

'ಸ್ವಯಂಚಾಲಿತ ನಾಟ್ಯಸಂಘಗಳು' ಈ ಹೆಸರು ತಮಾಷೆಯಾಗಿ ಕಂಡರೂ ಇದರ ಹಿಂದೆ ಅತ್ಯದ್ಭುತವಾದಂಥ ಸಾಂಸ್ಕೃತಿಕ ಸಾಧನೆಯ ಒಂದು ದೊಡ್ಡ ಇತಿಹಾಸವಿದೆ. ಇದೊಂದು ಪ್ರಾದೇಶಿಕ ನೃತ್ಯವಿಲಾಸದ ವಿಕಾಸ ಮಾರ್ಗವಾಗಿದೆ. ಇದು, "ಅಟ್ಲಾಂಟ ಸಿವಿಕ್ ಬ್ಯಾಲೆ" ಎನ್ನುವ ನೃತ್ಯಸಂಘದಿಂದ ಸುಮಾರು ೧೯೨೯ರಲ್ಲಿ ಆರಂಭವಾಯಿತು. ಈಗ ಈ ಚಳವಳದಲ್ಲಿ ದೇಶದಾದ್ಯಂತ ಸುಮಾರು ೧೨೫ ನಾಟ್ಯವಿಲಾಸಿ ಸಂಘಗಳೂ ಇದ್ದು, ಇವುಗಳ ಸಂಖ್ಯೆ ಇನ್ನೂ ಹೆಚ್ಚಾಗುತ್ತಿದೆ.

ಮೊದಮೊದಲಿಗೆ ಅಮೆರಿಕವು, ಪರದೇಶದ ನೃತ್ಯಶಿಕ್ಷಕರ ಮೇಲೇ ಅವಲಂಬಿಸಿದ್ದುದರಿಂದ ನಾಟ್ಯವಿಲಾಸಿಗಳ ಬೆಳವಣಿಗೆಯು ಮಂದಗತಿಯಲ್ಲಿ ನಡೆಯಿತು. ಆದರೆ, ಕೆಲವರ್ಷಗಳನಂತರ ಅಮೆರಿಕದ ನೃತ್ಯಶಾಲೆಗಳಿಂದಲೇ ಶಿಕ್ಷಕರು ಬರುವುದಕ್ಕಾರಂಭಿಸಿದರು. ಇವರು ಚಿಕ್ಕಚಿಕ್ಕ ಪಟ್ಟಣಗಳಲ್ಲಿ ನೆಲೆಸಿ ನಾಟ್ಯಶಿಕ್ಷಣ ಕೊಡಲಾರಂಭಿಸಿದ ಮೇಲೆ ನೃತ್ಯಕಲಾಭಿರುಚಿ ತೀವ್ರಗತಿಯಲ್ಲಿ ಸಾಗಿತು.

ಶಿಕ್ಷಣ ಹೊಂದಿದ ಶಿಷ್ಯರು ತಮ್ಮ ಕಲಾವಂತಿಕೆಯನ್ನು ಬರೀ ತಮ್ಮತಮ್ಮ ಶಾಲೆಯ ವಿದ್ಯಾರ್ಥಿ ವೃಂದಕ್ಕೆ ತೋರಿಸುವುದರ ಜೊತೆಗೆ ಸಾರ್ವಜನಿಕರ ಎದುರೂ ಪ್ರದರ್ಶಿಸಲು ಆರಂಭಿಸಿದರು. ನಾಗರಿಕ ನೃತ್ಯಸಂಘಗಳು ಇವರಿಗೆ ಅವಕಾಶ ಕಲ್ಪಿಸಿಕೊಟ್ಟು, ಇವರ ಕಲೋಪಾಸನೆಗೆ ಪ್ರೋತ್ಸಾಹ ಕೊಟ್ಟುದಲ್ಲದೆ, ಜನತೆಯಲ್ಲೂ ನಾಟ್ಯಕಲೆಯ ಬಗೆಗೆ ಅಭಿರುಚಿಯನ್ನು ಬೆಳೆಸಲು ನೆರವಾದವು.

ನಾಗರಿಕರ ಈ ನಾಟ್ಯಸಂಘಟನೆಯಲ್ಲಿ ನೃತ್ಯಶಾಲೆಯೊಂದರ ಡೈರೆಕ್ಟರರೊಬ್ಬರ ಮೇಲ್ವಿಚಾರಣೆಗೊಳಪಟ್ಟ ಸಂಘಗಳೂ ಉಂಟು; ಮತ್ತು ಕೆಲವು ಶಿಕ್ಷಕರು ಒಟ್ಟಿಗೆ ಸೇರಿಕೊಂಡು ಅವರ ಮೇಲ್ವಿಚಾರಣೆಗೊಳಪಟ್ಟಿರುವ ಸಂಘಗಳೂ ಉಂಟು. ಉದಾಹರಣೆಗೆ: "ದಿ ಡೆಟ್ರಾಯಿಟ್ ಸಿಟಿ ಬ್ಯಾಲೆ"-ಈ ಸಂಘವು, ಹತ್ತು ಮಂದಿ ಶಿಕ್ಷಕರ ಒಂದು ಸಾಮೂಹಿಕ ಪ್ರಯತ್ನವಾಗಿದೆ. ಸಮಾಜದ ಕೊಡುಗೈ ನಾಗರಿಕರಿಂದ ಈ ಸಂಸ್ಥೆಗಳಿಗೆ ಹಣದ ನೆರವು ದೊರೆಯುತ್ತದೆ.

ಈ ಸಂಸ್ಥೆಗಳಿಗೆ ಅವಶ್ಯವಾದ ಕಲಾಕಾರರ ಬಗ್ಗೆ ಯಾವದೇ ಕೊರತೆ ಇಲ್ಲ. ಈ ಸಂಸ್ಥೆಗಳಿಗೆ ಸೇರಿಕೊಳ್ಳಲು ಹಾತೊರೆಯುವ ಯುವಕರ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಆದರೆ, ಹಾಗೆ ಸೇರಿಕೊಳ್ಳುವ ಮೊದಲು ಅವರು ಪರೀಕ್ಷೆಯಲ್ಲಿ ತೇರ್ಗಡೆಹೊಂದಬೇಕಾಗುತ್ತದೆ. ಅನೇಕ ಯುವಕರು ಈ ಪರೀಕ್ಷೆಯಲ್ಲಿ ತೇರ್ಗಡೆಹೊಂದದೆ ಹಿಂತಿರುಗಿ ಹೋಗಬೇಕಾಗುತ್ತದೆ. ಹಾಗೆ ಸೇರಿಸಿಕೊಂಡ ನರ್ತಕರನ್ನು ಅನೇಕ ವಿಧಗಳಲ್ಲಿ ಪರೀಕ್ಷೆ ಮಾಡುವರು. ತಂತ್ರ, ಪ್ರದರ್ಶನೀಯತೆ, ಸಂಗೀತ ಜ್ಞಾನ, ಮುಖಭಾವ, ಮತ್ತು ಶರೀರ ಸುಭಗತೆ, ಹಾಗೆ ಆಯ್ಕೆಯಿಂದ ನರ್ತಕಿಯರು ಒಪ್ಪಂದಕ್ಕೆ ಸಹಿಹಾಕಬೇಕಾಗುತ್ತದೆ.

ಒಂದೊಂದು ನಾಗರಿಕ ನಾಟ್ಯಸಂಘಗಳ ಉದ್ದೇಶವು ಒಂದೊಂದು ವಿಧವಾಗಿರುತ್ತದೆ. ತಮ್ಮ ನರ್ತಕಿಯರಿಗೆ ಕಲಾಜೀವನಾರಂಭಕ್ಕೆ ಮುಂಚಿತವಾಗಿಯೇ ಅವಶ್ಯವಾದ ಸಾಧನ ಸಂಪತ್ತನ್ನೊದಗಿಸುವುದನ್ನೇ ಕೆಲವು ಸಂಸ್ಥೆಗಳು ತಮ್ಮ ಉದ್ದೇಶವನ್ನಾಗಿರಿಸಿಕೊಂಡಿವೆ. ಮತ್ತೆ ಕೆಲ ಸಂಸ್ಥೆಗಳು ತಮ್ಮ ಕಾರ್ಯ ಕಲಾಜೀವನದ ನಾಂದಿ ಎಂದು ಕರೆದುಕೊಂಡರೆ, ಇನ್ನೂ ಹಲವು ಸಂಸ್ಥೆಗಳು ತಮ್ಮ ಸಾರ್ವಜನಿಕ ಪ್ರದರ್ಶನಗಳನ್ನು ಶೈಕ್ಷಣಿಕ ದೃಷ್ಟಿಯಿಂದ ನೋಡುತ್ತವೆ.

ನೃತ್ಯಕಲೆಯ ಬಗೆಗೆ ಸಾರ್ವಜನಿಕರ ಅಭಿರುಚಿಯನ್ನು ಹೆಚ್ಚಿಸುವುದೇ ಎಲ್ಲ ಸಂಘ-ಸಂಸ್ಥೆಗಳ ಐಕ್ಯಕ ಉದ್ದೇಶವಾಗಿದೆ. ಸಾಂಸ್ಕೃತಿಕ ಜೀವನಕ್ಕೆ ಈ ನಾಗರಿಕ ನೃತ್ಯಕೂಟಗಳ ಕಾಣಿಕೆ ಅಮೂಲ್ಯವಾದುದೆಂಬುದನ್ನು ಈಗಾಗಲೇ ಅನೇಕ ನಗರಗಳು ಮನವರಿಕೆ ಮಾಡಿಕೊಂಡಿವೆ. ಸಮಾರಂಭಗಳಿಗೂ ಇವು ಒಂದು ಹೊಸ ಸೊಬಗನ್ನು ನೀಡುವುವು.

ಕಳೆದ ಐದು ವರ್ಷಗಳಿಂದ ಈ ಚಟುವಟಿಕೆ ಹೆಚ್ಚಾಗಿದೆ. 1956ರಲ್ಲಿ ನಡೆದ ಪ್ರಾದೇಶಿಕ ನಾಟ್ಯೋತ್ಸವದನಂತರ ಇದರ ಮಹತ್ವ ವಿಶೇಷವಾಗಿದೆ. ನೃತ್ಯಕಲಾಪತ್ರಿಕೆಯ ಸಂಪಾದಕರಾದ ಆನ ಬೋಲ್ ಷೂ ಜಾಯ್ ಅವರ ಸಲಹೆ ಮೇರೆಗೆ ಅಟ್ಲಾಂಟಾ ಸಿವಿಕ್ ಬ್ಯಾಲೆಯ ಸಂಸ್ಥಾಪಕ-ಡೈರೆಕ್ಟರಾದ ಡರೋತಿ ಅಲೆಕ್ಸಾಂಡರ್ ಅವರು ಸಂಘಟಿಸಿದ್ದ "ಸೌತ್ ಈಸ್ಟರ್ನ್ ರೀಜನಲ್ ಬ್ಯಾಲೆ ಫೆಸ್ಟಿವಲ್" ಪ್ರಾದೇಶಿಕ ನೃತ್ಯವಿಕಾಸ ಕ್ರಮದಲ್ಲಿ ಒಂದು ಹೊಸ ಅಧ್ಯಾಯವನ್ನಾರಂಭಿಸಿತೆಂದು ಹೇಳಬಹುದು. ತರುಣ ಕಲಾಕಾರರಿಗೆ ಇತರ ಸಂಸ್ಥೆಗಳ ಪರಿಚಯ ಅವಶ್ಯವಾಗಿತ್ತು. ಈ ಸಮಾಗಮದಿಂದ ಇವರಿಗೆ ಯಾವುದು ಉತ್ತಮ, ಯಾವುದು ಸಾಧಾರಣ ನೃತ್ಯವೆಂಬುದನ್ನು ಕಂಡುಕೊಳ್ಳುವುದಕ್ಕೆ ಸಾಧ್ಯವಾಯಿತು. ಇದರಿಂದ ತಮ್ಮ ಕಲೆಯ ಮಟ್ಟವನ್ನು ಉತ್ತಮಗೊಳಿಸಿಕೊಳ್ಳುವುದಕ್ಕೂ ಪ್ರೋತ್ಸಾಹ ದೊರಕಿತು. (ಸಶೇಪ)

—o—

ಸಿಟಿ ಯುವಕ ಕಾಂಗ್ರೆಸ್: ಮಂಗಳೂರು ನಗರ ಯುವಕ ಕಾಂಗ್ರೆಸ್ಸಿನ ಸಾಪ್ತಾಹಿಕ ಸಭೆಯು ತಾ. 19ರಂದು ಶ್ರೀ| ಜೆ. ಎ. ಬ್ರಿಟೋರವರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀ| ಬಿ. ಧನಪಾಲ ತಿಂಗಳಾಯರು ಮುಂಬಾಯಿಯಲ್ಲಿ ಜರಗಿದ ಸೇವಾದಳದ ಸಮ್ಮೇಳನದ ಕುರಿತು ಭಾಷಣವಿತ್ತರು,

ರೇಡಿಯೊ ಪೆವಿಲಿಯನ್ ಉದ್ಘಾಟನೆ: ಉಪ್ಪಿನಂಗಡಿಯಲ್ಲಿ ರೇಡಿಯೊ ಪೆವಿಲಿಯನಿನ ಉದ್ಘಾಟನಾ ಸಮಾರಂಭವು ಇತ್ತೀಚೆಗೆ ದ. ಕ. ಜಿಲ್ಲಾಧಿಕಾರಿ ಶ್ರೀ| ಸಿ. ಜೆ. ಪದ್ಮನಾಭನವರ ಅಧ್ಯಕ್ಷತೆಯಲ್ಲಿ ಜರಗಿತು. ಇದೇ ಸಂದರ್ಭದಲ್ಲಿ ವನಿತಾ ಸಮಾಜದ ರಂಗಮಂಟಪದ ಉದ್ಘಾಟನೆಯು ಶ್ರೀಮತಿ ಕನಕ ಪದ್ಮನಾಭನವರಿಂದ ನಡೆಯಿತು.

——

ಶುಕ್ರನ ಕಾರಕತ್ವ ಭೇದ

(ಎಂ. ಸುಬ್ರಾಯನ್)

"ಕಲತ್ರ, ಕಾಮುಕ, ಸುಖ, ಗೀತ, ಶಾಸ್ತ್ರ, ಕಾವ್ಯ, ಪುಷ್ಪ, ಸುಕುಮಾರ, ಯೌವನಾ, ಭೂಷಣ, ರಜತ, ಯಾನ, ಗರ್ವ, ಲೋಕ, ವಕ್ರೋಕ್ತಿಕ, ವಿಭವ, ರಸಾದಿಕಾರಕ, ಶುಕ್ರಃ"

ಭೃಗೋರ್ವಿವಾಹಕರ್ಮಾಣಿ ಭೋಗ
ಸ್ಥಾನಂ ಚ ವಾಹನಮ್
ವೇಶ್ಯಾಸ್ತ್ರೀ ಜನಗಾತ್ರಾಣಿ ಶುಕ್ರೇಣೈವ
ನಿರೀಕ್ಷಯೇತ್
(ಪರಾಶರ)

ಹೆಂಡತಿ, ಕಾಮುಕತನ, ಸುಖ, ಗೀತ, ಶಾಸ್ತ್ರ, ಕಾವ್ಯ, ಪುಷ್ಪ, ಒಳ್ಳೆಯ ಹುಡುಗ, ಯೌವನ, ಆಭರಣ, ಬೆಳ್ಳಿ, ವಾಹನ, ಗರ್ವ, ಲೋಕದ ಜನರು, ಮುತ್ತು, ವೈಭವ, ಕವಿತೆ, ರಸಾದಿಕಾರಕನು ಶುಕ್ರನು. ಶುಕ್ರನಿಗೆ ವಿವಾಹಕರ್ಮ, ಭೋಗಸ್ಥಾನ, ವಾಹನ, ವೇಶ್ಯೆ, ಸ್ತ್ರೀ ಜನರ ದೇಹ, ಚಿಂತಿಸತಕ್ಕ ವಿಚಾರಗಳಾಗಿವೆ.

"ಸಿತಶ್ಚ ಮದನಃ" (ವರಾಹ)

ಶುಕ್ರನು ಕಾಮಕಾರಕನು.

ವಸ್ತ್ರ, ಮಣಿ, ರತ್ನ, ಭೂಷಣ, ವಿವಾಹ, ಗಂಧೇಷ್ಟ, ಮಾಲ್ಯ, ಯುವತೀ ನಾಮ್.

ಗೋಮಯ, ನಿಧಾನ, ವಿದ್ಯಾ, ಧನ, ಶುಕ್ರಿ, ರಜತ ಪ್ರಭುಃ ಶುಕ್ರಃ.

ಬಟ್ಟೆ, ಮಣಿ, ರತ್ನ, ಮದುವೆ, ಸುವಾಸನೆ, ಇಷ್ಟ ಜನರು, ಮಾಲಿಕೆ, ಯುವತಿಯರು, ಧನಸಮೂಹ, (ತುಂಬಾ ರತ್ನವಿರುವಿಕೆ) ನಿಧಿ, ವಿದ್ಯೆ, ಧನ, ಮುತ್ತು, ಬೆಳ್ಳಿಗಳ ಒಡೆಯ ಶುಕ್ರನು.

ಪತ್ನೀ ವಾಹನ ಭೂಷಣಾನಿ
ಮದನ ವ್ಯಾಪಾರ ಸೌಖ್ಯಂ ಭೃಗೋಃ।
(ವೈದ್ಯನಾಥ)

ಹೆಂಡತಿ, ವಾಹನ, ಆಭರಣ, ಕಾಮ, ಕರ್ಮ, ಸೌಖ್ಯಗಳನ್ನು ಶುಕ್ರನಿಂದ ಚಿಂತಿಸಬೇಕು.

ಕಾಂತಾವಿಕಾರ ಜನಿ ಮೇಹರುಜಾ
ಸುರಾದ್ಯೈಃ
ಸ್ವೇಷ್ಟಾಂಗನಾ ಜನ ಕೃತೈರ್ಭಯ
ಮಾಸುರೇಜ್ಯಃ
(ವೈದ್ಯನಾಥ)

ಸ್ತ್ರೀವಿಕಾರದಿಂದ ಉಂಟಾದ ಮೇಹರೋಗ, ಆಸುರೀ ಕರ್ಮಾದಿಗಳಿಂದ, ಇಲ್ಲವೇ ತನ್ನ ಇಷ್ಟಜನರು ಮತ್ತು ಜನರುಗಳಿಂದ ಮಾಡಿದ ದೋಷ ಭಯವನ್ನು ಶುಕ್ರನು ಕೊಡುವನೆಂದು ವೈದ್ಯನಾಥನು ಬೇರೆಯಾಗಿ ಹೇಳಿರುವನು.

ಶುಕ್ರೇಽನಿಷ್ಟ ಸ್ಥಿತೇ ಸ್ತ್ರೀಜನಗದ ವಸನಾ
ಪಾಯ ಲಕ್ಷ್ಮೀವಿಯೋಗಾಃ
ಶೋಕಃ ಸ್ನೇಹಾನ್ನಿ ಷಾದಕ್ಷಿತಿಪತಿ
ಸಚಿವದ್ವೇಷ ಗೋರೂಪ್ಯ ನಾಶಾಃ।
ಇಷ್ಟಸ್ಥೇ ರೂಪ್ಯ ವಸ್ತ್ರಾಭರಣ ಮಣಿ
ನಿಧಿ ಸ್ತ್ರೀವಿವಾಹಾರ್ಥಲಾಭಾಃ
ಶ್ರದ್ಧಾ ಗೀತೇ ಕ್ರಿಯಾದಿಷ್ವಪಿ ಚ ಮಹಿಷ
ಗೋಮಿತ್ರ ಮೃಷ್ಟಾನ್ನ ಲಾಭಾಃ॥

ಶುಕ್ರನು ಅನಿಷ್ಟ ಸ್ಥಾನದಲ್ಲಿದ್ದರೆ ಹೆಂಡತಿಯರಿಗೂ, ಸಂಬಂಧಗೊಂಡ ಹೆಂಗುಸರಿಗೂ, ರೋಗ, ವಸ್ತ್ರನಾಶ, ಲಕ್ಷ್ಮೀ ವಿನಾಶ, ಸ್ನೇಹದಿಂದುಂಟಾದ ಶೋಕ, ಹೀನ ಜಾತಿ ಮತ್ತು ರಾಜ ಸಚಿವರ ದ್ವೇಷ, ದನ, ಸಂಪತ್ತುಗಳ ನಾಶಫಲ, ಬೆಳ್ಳಿಯ ಪಾತ್ರೆ, ವಸ್ತುಗಳು ನಾಶಗೊಳ್ಳುವವು. ಶುಕ್ರನು ಇಷ್ಟಸ್ಥಾನಗತನಾದರೆ, ಬೆಳ್ಳಿ, ವಸ್ತ್ರ, ಆಭರಣ, ರತ್ನ, ನಿಧಿ ಪ್ರಾಪ್ತಿಗಳೂ, ಹೆಣ್ಣುಮಕ್ಕಳ ಇಲ್ಲವೆ ಅನ್ಯರ ವಿವಾಹ ಅಥವಾ ಆತನ ವಿವಾಹ, ಧನಲಾಭಗಳೂ, ಗಾಯನದಲ್ಲಿ ಶ್ರದ್ಧೆ, ಕೆಲಸದಲ್ಲಿಯೂ ಶ್ರದ್ಧೆ. ದನ ಕರು ಎಮ್ಮೆ ಮೊದಲಾದುವುಗಳ ಸುಖ, ಮಿತ್ರಸುಖ, ಮೃಷ್ಟಾನ್ನಲಾಭಗಳು ಸಿದ್ಧಿಸುವವು.

"ಸಂಗೀತ ಸಾಹಿತ್ಯ ದಾಸ್ಯ ರಸಾದ್ಭುತ
ಮದನ ಯುವತಿ ರತಿಕೇಲಿ ವಿಲಾಸ
ವಿಚಿತ್ರ ಕಾಂತಿಸೌಂದರ್ಯ ರಾಜವಶೀ
ಕರಣ ರಾಜಮುಖ ವಶೀಕರಣ ಗಾರು
ಡೇಂದ್ರ ಜಾಲಮಾಲಾವೈಶದ್ಯ ಮಹದಣಿ
ಮಾದ್ಯಷ್ಟೈಶ್ವರ್ಯ ಕಾವ್ಯಕಲಾ, ಸುಮ
ಭೋಗ ಕಲತ್ರಕಾರಕಃ ಶುಕ್ರಃ"
(ಸರ್ವಾರ್ಥಚಿಂತಾಮಣಿ)

ಸಂಗೀತ, ಸಾಹಿತ್ಯ, ರಸಧಾತು, ವಿಚಿತ್ರತೆ, ಕಾಮ, ಯುವತಿ, ರತಿ, ವಿನೋದ ವಿಲಾಸಕ್ರೀಡೆ, ವಿಚಿತ್ರ ಕಾಂತಿ, ಸೌಂದರ್ಯ, ರಾಜವಶೀಕರಣ-ರಾಜಮುಖ ವಶೀಕರಣ, ಗಾರುಡೀವಿದ್ಯೆ, ಇಂದ್ರಜಾಲ, ಮಾಲೆ, ದೊಡ್ಡ ಅಣಿಮಾದಿ ಅಷ್ಟೈಶ್ವರ್ಯ, ಕಾವ್ಯ, ಕಲೆ, ಹೂ, ಭೋಗ, ಹೆಂಡತಿಗಳ ಕಾರಕ ಶುಕ್ರನು.

ಸಂಪದ್ವಾಹನ ವಸ್ತ್ರಭೂಷಣ
ನಿಧಿದ್ರವ್ಯಾಣಿ ತೌರ್ಯತ್ರಿಕಂ
ಭಾರ್ಯಾ ಸೌಖ್ಯ ಸುಗಂಧ ಪುಷ್ಪ
ಮದನ ವ್ಯಾಪಾರ ಶಯ್ಯಾಲಯಾನ್।
ಶ್ರೀಮತ್ತ್ವಂ ಕವಿತಾ ಸುಖಂ ಬಹುವಧೂ-
ಸಂಗಂ ವಿಲಾಸಂ ಮದಂ
ಸಾಚಿವ್ಯಂ ಸರಸೋಕ್ತಿ ಮಾಹ ಭೃಗು-
ಜಾದುದ್ವಾಹ ಕರ್ಮೋತ್ಸವಾನ್॥
(ಫಲದೀಪಿಕಾ)

ಸಂಪತ್ತು, ವಾಹನ, ವಸ್ತ್ರ, ಒಡವೆ, ನಿಧಿ, ಗಾಯನ, ವಾದನ, ನರ್ತನ (ತೌರ್ಯತ್ರಿಕ) ಸ್ತ್ರೀಸೌಖ್ಯ, ಸುಗಂಧ ಕುಸುಮ, ಕಾಮುಕರ್ಮ, ಶಯನಗೃಹ, ಶ್ರೀಮಂತತನ, ಕವಿತೆ, ಸುಖ, ಬಹುಸ್ತ್ರೀ ಸುಖಭೋಗ, ವಿಲಾಸ, ಮದ, ಸಾಚಿವ್ಯ ಕರ್ಮ, ಸರಸೋಕ್ತಿ, ವಿವಾಹಕರ್ಮ, ಉತ್ಸವಗಳನ್ನು ಶುಕ್ರನಿಂದ ಚಿಂತಿಸಬೇಕು.

ಪಾಂಡುಶ್ಲೇಷ್ಮ ಮರುತ್ಪ್ರಕೋಪ ನಯನ
ವ್ಯಾಪತ್ಪ್ರಮೇಹಾಮಯಾನ್
ಗುಹ್ಯಾಸ್ಯಾಮಯ ಮೂತ್ರಕೃಚ್ಛ್ರ
ಮದನವ್ಯಾಪತ್ತಿ ಶುಕ್ಲಸ್ರುತೀನ್
ವಾರಸ್ತ್ರೀಕೃತದೇಹಕಾಂತಿ ವಿಹತಿಂ
ಶೋಷಾಮಯಂ ಯೋಗಿನೀ
ಪಕ್ಷಿಮಾತೃಗಣಾದ್ಭಯಂ ಪ್ರಿಯ-
ಸುಹೃದ್ಭಂಗಂ ಸಿತಃ ಸೂಚಯೇತ್॥
(ಫಲದೀಪಿಕಾ)

ಶುಕ್ರನು ಪಾಂಡುರೋಗ, ಕಫ, ವಾಯು, ಕೋಪ, ಕಣ್ಣಿನ ರೋಗ, ಪ್ರಮೇಹರೋಗ, ಗುಹ್ಯರೋಗ, ಮುಖ ರೋಗ, ಮೂತ್ರಕಾಠಿನ್ಯ, ಕಾಮಾಪತ್ತು, ವೀರ್ಯಸ್ರಾವ, ವೈಶ್ಯಾಸ್ತ್ರೀಯಿಂದುಂಟಾದ ದೇಹಕಾಂತಿ ವಿಹತಿ, ಕ್ಷಯರೋಗ, ಯೋಗಿನೀಪೀಡೆ, ಪಕ್ಷಿ, ಮಾತೃಗಣಗಳಿಂದ ಭಯ, ಪ್ರಿಯಮಿತ್ರನ ಭಂಗಗಳನ್ನು ಸೂಚಿಸುವನು.

ಸಂಗೀತ ಸಾಹಿತ್ಯ ಕಲಾಕಲಾಪ
ಪಹ್ಲಾದ ಕಾಂತಾರತಿ ಗೀತವಾದ್ಯವತ್
ಕಲತ್ರ ಸೌಂದರ್ಯ ವಿನೋದ ವಿದ್ಯಾ-
ಬಲಾನಿ ವೀರ್ಯಾಣಿ ಕವೇಃ
ಸಕಾಶಾತ್॥ (ಜೀವನಾಥ]

ಸಂಗೀತ, ಸಾಹಿತ್ಯ, ಕಲಾಕಲಾಪ, ಆನಂದ, ಸ್ತ್ರೀರತಿ, ಗೀತ, ವಾದ್ಯ, ಸ್ತ್ರೀ ಸೌಂದರ್ಯ, ವಿನೋದ, ವಿದ್ಯೆಗಳ ಬಲ, ವೀರ್ಯ ಇವನ್ನು ಶುಕ್ರನಿಂದ ಚಿಂತಿಸಬೇಕು.

Venus signifies the following Anaemia diseases caused by the irritation of phlegmatic and windy humours, trouble to the eyes, urinary disease, diseases in general organ strangury, trouble in cohabitation exudation semen loss (fading away) of bodily splendour as a result of intercourse with courtezens, rickets, fear from witches, female ghosts and female deites and break of friendship with a dear friend ಎಂದು ಪಾಶ್ಚಾತ್ಯರು ಹೇಳಿರುವರು.

—— (ಸಶೇಷ)

ನಮ್ಮ ಜಿಲ್ಲೆ

ಕಾಳಿದಾಸ ಜಯಂತಿ: ಮಂಗಳೂರು ಮಿಲಾಗ್ರಿಸ್ ಹೈಸ್ಕೂಲಿನಲ್ಲಿ ಮಹಾಕವಿ ಕಾಳಿದಾಸ ಜಯಂತಿಯನ್ನು ಕಳೆದ ತಾ. 17ರಂದು ಶ್ರೀ ಯು. ಎಲ್. ರಾಯರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಶ್ರೀ ಎಸ್. ಸುಬ್ಬಣ್ಣ ರೈಯವರು ಕಾಳಿದಾಸನ ಕಾವ್ಯ ಸೌಂದರ್ಯದ ಕುರಿತು ಭಾಷಣವಿತ್ತರು.

ನಾಟಕ ಪ್ರದರ್ಶನ: 'ಯುವಕ ಮಂಡಲ' ಮೂಡಬಿದ್ರಿ ಇದರ ಉದ್ಘಾಟನಾ ಸಮಾರಂಭದ ಅಂಗವಾಗಿ ಮೂಡಬಿದ್ರೆಯ ನೂತನ ಕಲಾವೃಂದದವರು ಇತ್ತೀಚೆಗೆ 'ವಿವಾಹ ವಿಚ್ಛೇದನ' ಎಂಬ ಸಾಮಾಜಿಕ ನಾಟಕ ಪ್ರದರ್ಶಿಸಿದರು.

ಬಟ್ಟೆಬರೆ ವಿತರಣ: ಶಾಲಾ ಅಭಿವೃದ್ಧಿ ಸಮಿತಿಯ ಕಡೆಯಿಂದ ಬೆಚ್ಚಾಡಿ ಕಿರಿಯ ಬುನಾದಿ ಶಾಲೆಯ ಮಕ್ಕಳಿಗೆ ವಸ್ತ್ರ ಹಾಗು ಸ್ಲೇಟು ಪುಸ್ತಕಗಳ ವಿತರಣ ಸಮಾರಂಭವು ತಾ. 19ರಂದು ಶ್ರೀ ಕೊಚ್ಚಿಕಾರ್ ವರದರಾಯ ಪೈ, ಎಡ್ವೋಕೇಟ್ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಇದೇ ಸಂದರ್ಭದಲ್ಲಿ ಮಹಾತ್ಮಾ ಗಾಂಧಿ, ಪಂಡಿತ ಜವಾಹರಲಾಲ ನೆಹರು ಮತ್ತು ಡಾ। ರಾಜೇಂದ್ರ ಪ್ರಸಾದರ ಭಾವಚಿತ್ರಗಳ ಅನಾವರಣವು ಅನುಕ್ರಮವಾಗಿ ಶಾಲಾ ಮೆನೇಜರ್ ಫಾದರ್ ಜೆ. ನೊರೋನ್ಹಾ, ಶ್ರೀ ಪಿ. ಶಿವಾಜಿ ಶೆಟ್ಟಿ, ಎಡ್ವೋಕೇಟ್ ಮತ್ತು ಶ್ರೀ ಎ. ತ್ರಿವಿಕ್ರಮ ನಾಯ್ಕರಿಂದ ನಡೆಯಿತು.

ಎನ್. ಸಿ. ಸಿ. ಪೆರೇಡಿಗೆ ಆಯ್ಕೆ: 1962ನೇ ಜನವರಿ ತಾ. 26ರಂದು ಭಾರತದ ರಾಜಧಾನಿ ನವದೆಹಲಿಯಲ್ಲಿ ಪ್ರಜಾಪ್ರಭುತ್ವ ದಿನಾಚರಣೆಯ ಅಂಗವಾಗಿ ನೆರವೇರಲಿರುವ ಎನ್. ಸಿ. ಸಿ. ಪೆರೇಡಿನಲ್ಲಿ ಪ್ರತಿ ಜಿಲ್ಲೆಯ ಹಿರಿಯ ಹಾಗು ಕಿರಿಯ ವಿಭಾಗಗಳಿಂದ ಒಬ್ಬೊಬ್ಬ ದಳವೀರರು ಭಾಗವಹಿಸಲಿದ್ದು ಕಿರಿಯ ವಿಭಾಗಕ್ಕೆ ಈ ಬಾರಿ ಉಡುಪಿ ಬೋರ್ಡ್ ಹೈಸ್ಕೂಲಿನ ಶ್ರೀ ಕೆ. ಅರವಿಂದ ಹೆಗ್ಡೆ ಆರಿಸಲ್ಪಟ್ಟಿರುವರೆಂದು ತಿಳಿಯಲಾಗಿದೆ.

ಉದ್ಘಾಟನೆ: ಕುದ್ರೋಳಿ ಯುವಕ ಸಂಘದ ಉದ್ಘಾಟನೆಯು ತಾ. 19ರಂದು ಶ್ರೀ ಪಿ. ರಾಮಚಂದ್ರರಾಯರಿಂದ ನಡೆಯಿತು.

——

ಈ ವಾರದ ಭವಿಷ್ಯ

ಶ್ರೀ ಎಮ್. ನಾರಾಯಣ್,
ಸಾಹಿತ್ಯ ಮತ್ತು ಜೋತಿಷ್ಯ ಶಿರೋಮಣಿ.

ತಾರೀಖು ೨೬—೧೧—೧೯೬೧ರಿಂದ
ತಾ. ೨—೧೨—೧೯೬೧ರ ವರೆಗೆ.

ಮೇಷ: ಸಾಮುದ್ರಾಯಿಕ ವಿಷಯಗಳಲ್ಲಿ ಆಸಕ್ತಿಯು ಅಧಿಕವಾಗಿ ಕಂಡುಬರುವುದು. ಸಂಪತ್ತಿನಿಂದ ಪ್ರಗತಿಯುಳ್ಳವರಾಗುವಿರಿ. ಧಾರ್ಮಿಕ ವಿಷಯಗಳಲ್ಲಿ ಆಸಕ್ತಿಯುಳ್ಳವರಾಗಿ ಕಂಡುಬರುವಿರಿ. ದೂರಗತ ಬಂಧುಜನರ ಭೇಟಿಯನ್ನು ಹೊಂದಲಿರುವ ಯೋಗ ವಿದೆ. ವಿದ್ಯಾಜೀವನದವರಿಗೆ ಪ್ರಗತಿಕರ.

ವೃಷಭ: ಆಕಸ್ಮಿಕ ಘಟನೆಯಿಂದ ಕೂಡಿದವರಾಗಿರುವಿರಿ. ಮಾನಸಿಕ ಶಾಂತಿಯು ಕಡಮೆಯಾಗಿರುತ್ತದೆ. ದೊಡ್ಡ ಮನುಷ್ಯರ ಭೇಟಿ ಸಹಾಯಗಳಿಂದ ಕೂಡಿದವರಾಗುವಿರಿ. ವ್ಯಾಪಾರಿಗಳು ಉನ್ನತಿಯಿಂದ ಕೂಡಿದವರಾಗಿರುವರು; ಪ್ರಯಾಣವನ್ನು ಮಾಡಲಿರುವ ಯೋಗ ವಿದೆ.

ಮಿಥುನ: ಹೊಸ ಘಟನೆಯಿಂದ ಕೂಡಿದವರಾಗಿರುವಿರಿ. ಮಾನಸಿಕ ಶಾಂತಿಯು ಕುಟುಂಬ ವಾತಾವರಣದ ಮೂಲಕ ಕಡಮೆಯಾಗಿರುವುದು. ಹಿರಿಯರ ಆರೋಗ್ಯದ ನೆಲೆ ಚೆನ್ನಾಗಿರುವುದಿಲ್ಲ. ನಷ್ಟ ವಸ್ತು ಧನಲಾಭ ಯೋಗ ವಿರುವುದು. ಪ್ರಯಾಣವನ್ನು ಮಾಡಲಿರುವಿರಿ.

ಕರ್ಕಟಕ: ಎಲ್ಲಾ ಕೆಲಸಗಳೂ ನಾವಕಾಶವಾಗಿ ಕೊನೆಗೊಳ್ಳುತ್ತವೆ. ಆತ್ಮೀಯರ ಅಗಲುವಿಕೆಗಿರುವ ಸಂಪರ್ಕವು ತೋರಿಬರುವುದು. ವಾಗ್ವಾದಗಳು ಸಂಭವಿಸದಂತೆ ಜಾಗರೂಕರಾಗಿರಬೇಕು. ಕೋರ್ಟು ಕಾರ್ಯಗಳು ಮುಂದುವರಿಯಲಿರುವುವು.

ಸಿಂಹ: ಹಲವಾರು ಕೆಲಸಗಳಿಂದ ಕೂಡಿದವರಾಗಿದ್ದು ವಿರಾಮ ಕಡಮೆಯಾಗಿರುತ್ತದೆ. ಬಂಧುಜನರ ವಿಯೋಗವನ್ನು ಹೊಂದಲಿರುವಿರಿ. ಪತ್ರವ್ಯವಹಾರವನ್ನು ಮಾಡುವಾಗ ಜಾಗರೂಕತೆಯುಳ್ಳವರಾಗಿರಬೇಕು. ಕೋರ್ಟು ವ್ಯವಹಾರಗಳು ಮುಂದುವರಿಯಲಿರುವವು.



ವಾರದ ಪ್ರಭಾತ ಪಂಚಾಂಗ

(ವೃಶ್ಚಿಕ, ಕಾರ್ತಿಕ–ಬಹುಳ)

ತಾರೀಖು	ವಾರ	ತಿಥಿ		ನಿತ್ಯ ನಕ್ಷತ್ರ	ಯೋಗ	ಕರಣ	ವಿಷ	ಅಮೃತ	ಮಹಾನಕ್ಷತ್ರ
		ಸೌರ	ಚಾಂದ್ರ						ಅನುರಾಧಾ
26	ರವಿ	೧೧	ಚೌ ೨೨|||	ವೃ ೪೬	ಶು ೧೧|	ಬಾ ೨೨|||	೧೩||	೩೯||	೩೦||
27	ಚಂದ್ರ	೧೨	ಪಂ ೨೭|	ಪು ೫೨	ಶು ೧೧|||	ತೈ ೨೭|	೧೮	೩೪||	೩೫
28	ಕುಜ	೧೩	ಷ ೩೩	ಆ ೫೯||	ಬ್ರ ೧೩|	ಗ|	೨೮	೫೫	೩೯||
29	ಬುಧ	೧೪	ಸ ೩೯|||	ಮ ೬೦	ಐ ೧೫||	ಭ ೭|	೩೩|	೦	೪೪|
30	ಗುರು	೧೫	ಅ ೪೬|	ಮ ೭|	ವೈ ೧೮	ಬಾ ೧೩	೯|||	||	೪೪|||
1	ಶುಕ್ರ	೧೬	ನ ೫೨||	ಹ ೧೪|||	ವ್ಯ ೨೦	ತೈ ೧೯||	೩೪|||	ಅಶೆ ೧	೫೩|
2	ಶನಿ	೧೭	ದ ೫೭|	ಉ ೨೧||	ಪ್ರೀ ೨೫|||	ವ ೨೫	೪೪||	೧||	೫೭|||

ಕನ್ಯಾ: ನಿರಂತರ ಕೆಲಸಗಳಿಂದ ಕೂಡಿ ವಿರಾಮ ಈ ವಾರದಲ್ಲಿ ಅಲ್ಪವಾಗಿಯೇ ಕಾಣುವುದು. ಕುಟುಂಬ ಮತ್ತು ಬಂಧುಜನರ ಕರ್ಮಭಾರಯುಕ್ತರಾಗಿರುವಿರಿ. ಆರೋಗ್ಯ ವಿಚಾರದಲ್ಲಿ ಧನವ್ಯಯವಾಗಲಿರುವ ಸಂಪರ್ಕವು ಕಂಡುಬರಲಿದೆ.

ತುಲಾ: ಜೀವನದಲ್ಲಿ ನವೀನತೆಗಿರುವ ಸಂಪರ್ಕಯುಕ್ತರಾಗಿ ಕಂಡುಬರುವಿರಿ. ಪುಣ್ಯಕೆಲಸಗಳಿಗಾಗಿ ಧನವ್ಯಯವಾಗಲಿರುತ್ತದೆ. ಹಿಡಿದ ಕೆಲಸಗಳಲ್ಲಿ ಜಯವು ಕಂಡುಬರುವುದು. ವ್ಯಾಪಾರಿಗಳಿಗೆ ವಾರಾಂತ್ಯ ಪ್ರಗತಿದಾಯಕವಾಗಿಯೇ ಕಂಡುಬರುವುದಾಗಿದೆ.

ವೃಶ್ಚಿಕ: ಹಲವಾರು ವಿಚಾರಗಳಿಂದ ಕೂಡಿದವರಾಗಿದ್ದು ಅವನ್ನು ಸಾಧಿಸಲಿರುವ ಯತ್ನಯುಕ್ತರಾಗುವಿರಿ. ಧಾರ್ಮಿಕ ವಿಷಯಗಳಲ್ಲಿ ಆಸಕ್ತಿಯುಳ್ಳವರಾಗಿ ಕಂಡುಬರುವಿರಿ. ಕುಟುಂಬದಲ್ಲಿ ಶುಭಕೆಲಸಗಳು ನಡೆಯಲಿರುತ್ತವೆ. ನೌಕರರಿಗೆ ಪ್ರಗತಿಯಾಗಲಿರುತ್ತದೆ.

ಧನು: ಸಾಮೂಹಿಕ ವಿಷಯದಲ್ಲಿ ಆಸಕ್ತಿಯುಳ್ಳವರಾಗಿದ್ದು ಅವನ್ನು ಸಾಧಿಸಲಿರುವಿರಿ. ದೊಡ್ಡ ಮನುಷ್ಯರ ಭೇಟಿಯನ್ನು ಹೊಂದಲಿರುವಿರಿ. ಹಿರಿಯರ ಆರೋಗ್ಯದ ನೆಲೆಯು ಉತ್ತಮವಾಗಿರುವುದಿಲ್ಲ. ವ್ಯಾಪಾರಿಗಳು ಪ್ರಗತಿಯುಳ್ಳವರಾಗುವರು,

ಮಕರ: ನಿರಂತರ ಕೆಲಸಗಳಿಂದ ಕೂಡಿದವರಾಗಿದ್ದು ವಿರಾಮ ಕಡಮೆಯಾಗಿರುವುದು. ಕುಟುಂಬದಲ್ಲಿ ಶುಭಕೆಲಸಗಳು ನಡೆಯಲಿರುತ್ತವೆ. ದೂರಗತ ಬಂಧುಜನರ ಭೇಟಿಯನ್ನು ಹೊಂದಲಿರುವಿರಿ. ದೇಹಾರೋಗ್ಯದ ನೆಲೆಯು ಉತ್ತಮವಾಗಿ ಕಂಡುಬರುವುದಿಲ್ಲ. ಪ್ರಯಾಣವಾಗಲಿದೆ.

ಕುಂಭ: ನಿಮ್ಮವರೇ ನಿಮಗೆ ವಿರೋಧಿಗಳಾಗಿ ಕಂಡುಬರುವರು. ಸಂಪತ್ತಿನಿಂದ ಉನ್ನತಿಗಿರುವ ಸಂಪರ್ಕಯುಕ್ತರಾಗುವಿರಿ ಪುಣ್ಯಕೆಲಸಗಳಲ್ಲಿ ಭಾಗವನ್ನು ವಹಿಸಲಿರುವ ಸಂಪರ್ಕಯುಕ್ತರಾಗುವಿರಿ. ದೇಹಾರೋಗ್ಯ ವಿಷಯದಲ್ಲಿ ಜಾಗರೂಕರಾಗಿರಿ.

ಮೀನ: ಮಾನಸಿಕ ಶಾಂತಿಯು ಕಡಮೆಯಾಗಿರುತ್ತದೆ. ಹೊಸ ಕೆಲಸಗಳಿಂದ ಕೂಡಿದವರಾಗಿರುವಿರಿ. ದೂರಗತ ಬಂಧುಜನರ ಸಹಾಯವನ್ನು ಕಾರ್ಯದಲ್ಲಿ ಹೊಂದಲಿರುವಿರಿ. ವ್ಯಾಪಾರಿಗಳು ಅಭಿವೃದ್ಧಿಯಿಂದ ಕೂಡಿದವರಾಗುತ್ತಾರೆ. ——



ಅಶುದ್ಧ ಮಿಶ್ರಣ (Adulteration) ಬಗ್ಗೆ ವ್ಯಾಪಾರಗಾರರಿಗೆ ನಗರಸಭಾ ಆರೋಗ್ಯಾಧಿಕಾರಿಗಳ ಎಚ್ಚರಿಕೆ

ಕೇಳ್ಪಿರಕೆ ಆಹಾರ ವಸ್ತುಗಳನ್ನು ಪಡೆದು ಪರೀಕ್ಷಿಸಲು ಸಹಕರಿಸಿರಿ!

ಮಂಗಳೂರು ಮುನಿಸಿಪಲ್ ಆರೋಗ್ಯಾಧಿಕಾರಿ ಡಾ| ಆರ್. ರಾಮರಾವ್‌ರವರು, ಈ ಕೆಳಗಿನಂತೆ ಪ್ರಕಟಣೆ ಹೊರಡಿಸಿರುವರು:

ಮಂಗಳೂರು ನಗರದ ಸಮಸ್ತ ನಾಗರೀಕರಿಗೂ ಇದರಿಂದ ತಿಳಿಯಪಡಿಸುವುದೇನೆಂದರೆ:—

ಮಂಗಳೂರು ನಗರಾದ್ಯಂತ ಮುನಿಸಿಪಲ್ ಸರಹದ್ದಿನೊಳಗಿರುವ ಎಲ್ಲೆಡೆಗಳಲ್ಲಿಯೂ ಮಿಶ್ರಿತ ಆಹಾರದ ನಿರೋಧಕ ಕಾಯಿದೆಯು (1954ನೇ ಇಸ್ವಿಯ ಕೇಂದ್ರ ಸರಕಾರದ ಕಾಯಿದೆ ನಂಬರ್ 34 ಮತ್ತು ಇದಕ್ಕೆ ಸಂಬಂಧಪಟ್ಟ ಕಾನೂನುಗಳು) ಜಾರಿಯಲ್ಲಿದ್ದು, ಅದನ್ನು ನಗರಾದ್ಯಂತ ಜಾರಿಗೊಳಿಸಲ್ಪಡುತ್ತಿರುವುದು ಸರಿಯಷ್ಟೆ. ಮೇಲ್ಕಂಡ ಕಾಯಿದೆಯ 10ನೇ ಸೆಕ್ಷನ್ ಪ್ರಕಾರ, ಮಂಗಳೂರಿನ ನಗರಸಭೆಯ ಆರೋಗ್ಯಾಧಿಕಾರಿಗಳಿಗೆ ಮತ್ತು ಅವರಿಂದ ಆದೇಶಿಸಲ್ಪಟ್ಟ ಅವರ ಕೈಕೆಳಗಿನ ಅಧಿಕಾರಿ ವರ್ಗಕ್ಕೆ ಮನುಷ್ಯ ಸೇವನೆಗೆ ಮಾರಾಟಕ್ಕಾಗಿಡಲ್ಪಟ್ಟ ಮಾರಾಟಮಾಡುತ್ತಿರುವ ಅಥವಾ ಮಾರಾಟಕ್ಕಾಗಿ ಕೊಂಡೊಯ್ಯಲು ಹೋಗುತ್ತಿರುವ ಯಾವ ಸಾಮಾನುಗಳನ್ನಾದರೂ ಪರೀಕ್ಷಿಸಿ ಅಂಥಾ ಸಾಮಾನುಗಳನ್ನು ಬೆಂಗಳೂರಿಗೆ ಪರೀಕ್ಷಾರ್ಥವಾಗಿ ಕಳುಹಿಸಲು ಸಂಬಂಧಪಟ್ಟ ಸದ್ರಿ ಸಾಮಾನುಗಳ ಮಾಲೀಕರಿಂದ ಅಥವಾ ಮಾರಲ್ಪಡುವವರಿಂದ ಪಡಕೊಳ್ಳಲು ಪೂರ್ಣ ಹಕ್ಕುಂಟು.

ಈ ಮೇಲ್ಕಂಡ ನಗರಸಭೆಯ ಆರೋಗ್ಯ ಖಾತೆಯ ಕಾರ್ಯಕ್ರಮದಲ್ಲಿ ಕೆಲವು ವರ್ತಕ ಮಹನೀಯರು ಮಾರಾಟ ಮಾಡಲ್ಪಡುತ್ತಿರುವ ಕಲುಷಿತ ಮತ್ತು ಮಿಶ್ರಣ ಆಹಾರವನ್ನು ಪರೀಕ್ಷಾರ್ಥವಾಗಿ ಕಳುಹಿಸಲು ನಗರಸಭೆಯ ಆರೋಗ್ಯ ಶಾಖೆಯ ಅಧಿಕಾರಿ ವರ್ಗಕ್ಕೆ ಕೊಡಲು ನಿರಾಕರಿಸಿ, ಅವರಿಗೆ ತೊಂದರೆ ಕೊಡುತ್ತಿರುವುದು ಮತ್ತು ಅವರ ಕಾರ್ಯದಲ್ಲಿ ಅಡ್ಡಬರುತ್ತಿರುವುದು ಕಂಡುಬರುತ್ತಿದೆ. ಹಾಗೆ ಶಂಕಿಸಿರುವ ಆಹಾರ ಸಾಮಗ್ರಿಗಳನ್ನು ಸಂಬಂಧಪಟ್ಟ ಅಧಿಕಾರಿವರ್ಗಕ್ಕೆ ಪರೀಕ್ಷಾರ್ಥವಾಗಿ ಕಳುಹಿಸಿಕೊಡಲು ಮಾರಾಟ ಮಾಡದಿದ್ದಲ್ಲಿ ಅದ್ದಂದಲ್ಲಿ ಸಂಬಂಧಪಟ್ಟವರಿಗೆ ಕಾಯಿದೆ ರೀತ್ಯಾ ಒಂದು ವರ್ಷದ ವರೆಗೆ ಜೈಲುವಾಸ ಅಥವಾ/ಮತ್ತು ಎರಡು ಸಾವಿರ ರೂಪಾಯಿಗಳ ವರೆಗೆ ಜುಲ್ಮಾನೆ ವಿಧಿಸಲು ಮೇಲ್ಕಂಡ ಕಾಯಿದೆಯಲ್ಲಿ ಸೆಕ್ಷನ್ 16ರ ರೀತ್ಯಾ ಅವಕಾಶವಿದೆ.

ಆದ್ದರಿಂದ ಜನಾರೋಗ್ಯವನ್ನು ಕಾಪಾಡುವ ಹಿತದೃಷ್ಟಿಯಿಂದಲೂ ಮತ್ತು ಅಪಾಯಕಾರೀ ಕಲುಷಿತ ಮತ್ತು ಮಿಶ್ರಣ ಆಹಾರದ ಮಾರಾಟವೆಂಬ ಸಮಾಜದ ಶತ್ರುವನ್ನು ಹತೋಟಿಯಲ್ಲಿಡುವ ದೃಷ್ಟಿಯಿಂದಲೂ, ವರ್ತಕ ಮಹಾಶಯರು ಮತ್ತು ಇತರ ನಾಗರೀಕ ಸಾರ್ವಜನಿಕ ಮಹಾಶಯರೆಲ್ಲರೂ ಸಂಬಂಧಪಟ್ಟ ಅಧಿಕಾರಿ ವರ್ಗಕ್ಕೆ ನೆರವು ನೀಡಿ ಸಹಕರಿಸಬೇಕಾಗಿ ಈ ಮೂಲಕ ಬಿನ್ನವಿಸಿಕೊಳ್ಳಲಾಗಿದೆ. ——

ಭಾರತೀಯ ಹಸ್ತಕೌಶಲ ವಸ್ತುಗಳು

ಭಾರತದಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಮಂದಿ ಕುಶಲ ಕರ್ಮಿಗಳಿರುವರು. ಇವರು ಲೋಹ, ಮರ, ಬಟ್ಟೆ ಇತ್ಯಾದಿಗಳನ್ನು ಬಳಸಿಕೊಂಡು ಸುಂದರವಾದ ಹಾಗೂ ಕಣ್ಮನಗಳನ್ನು ತಣಿಸುವಂತಹ ಹಸ್ತಕೌಶಲ ವಸ್ತುಗಳನ್ನು ತಯಾರಿಸುತ್ತಾರೆ. ಇವರ ಹಸ್ತಕೌಶಲ್ಯದ ಪರಿಣಾಮವಾಗಿ ಜಾನಪದ, ಪೌರಾಣಿಕ ಹಾಗೂ ಐತಿಹಾಸಿಕ ಕಥಾಚಿತ್ರಗಳು ಹಸ್ತಕೌಶಲ ವಸ್ತುಗಳಲ್ಲಿ ಹೊರಮೂಡುವುವು.

1952ರಲ್ಲಿ ಭಾರತ ಸರಕಾರದವರು ಅಖಿಲ ಭಾರತ ಕುಶಲ ವಸ್ತುಗಳ ಮಂಡಲಿಯನ್ನು ರಚಿಸಿದರು. ಈ ಮಂಡಲಿಯು ಕುಶಲ ವಸ್ತುಗಳ ಅಭಿವೃದ್ಧಿ ಹಾಗೂ ಪ್ರೋತ್ಸಾಹಕ್ಕಾಗಿ ರಾಜ್ಯ ಸರಕಾರಗಳು ಇತರ ಸಂಘ ಸಂಸ್ಥೆಗಳ ಸಹಕಾರದೊಂದಿಗೆ ಅನೇಕ ಕ್ರಮಗಳನ್ನು ಕೈಗೊಂಡಿದೆ. ಮಂಡಲಿಯು ಅಭಿವೃದ್ಧಿಗೊಳಿಸಲು ಪ್ರಯತ್ನಿಸುತ್ತಿರುವ 40 ಕೈಕಸಬುಗಳ ಪೈಕಿ 12 ಕೈಕಸಬುಗಳ ಬಗೆಗೆ ನಿರ್ದಿಷ್ಟ ಕಾರ್ಯಯೋಜನೆಗಳನ್ನು ಕೈಕೊಳ್ಳಲಾಗಿದೆ. ಅವಾವುವೆಂದರೆ: ಜಮಖಾನಗಳು, ಲೋಹದ ಕಲಾವಸ್ತುಗಳು, ಹಸ್ತ ಮುದ್ರಣ, ದಂತದ ಕೆಲಸ, ಜರಿ ಕೆಲಸ, ಮರಗೆಲಸ, ಕಾಗದ ವಸ್ತುಗಳ ಕೆಲಸ, ಅರಗಿನ ಕೆಲಸ, ಚಿತ್ರ, ಬಿದಿರು ತತ್ಸಂಬಂಧ ಕೈಗೆಲಸ, ಬೊಂಬೆಗಳು ಮತ್ತು ಆಟದ ಸಾಮಾನುಗಳು, ಕುಂಭ ಕೆಲಸ ಮತ್ತು ಅಕ್ಕಸಾಲೆ ಕೆಲಸ.

ಅಭಿವೃದ್ಧಿ ಕಾರ್ಯಯೋಜನೆಯ ಅಂಗವಾಗಿ, ಮಂಡಲಿಯು 19 ಪ್ರಾಯೋಗಿಕ ಕೇಂದ್ರಗಳನ್ನು ಸ್ಥಾಪಿಸಿದೆ. ದ್ವಿತೀಯ ಯೋಜನಾವಧಿಯಲ್ಲಿ ಸುಮಾರು 900 ಮಂದಿಗೆ ಕೈಕಸಬುಗಳಲ್ಲಿ ತರಬೇತಿ ಕೊಡಲ್ಪಟ್ಟಿದೆ.

ಕುಶಲ ವಸ್ತುಗಳಲ್ಲಿ ಸಂಶೋಧನೆ ನಡೆಸಿ, ಹೊಸ ನಮೂನೆಗಳನ್ನು ಕಂಡುಹಿಡಿದು, ಕುಶಲ ಕರ್ಮಿಗಳಿಗೆ ಸಹಾಯ ಮಾಡಲು ರಾಷ್ಟ್ರಾದ್ಯಂತ "ನಕಲು ಮಾಡುವ" ಅಥವಾ ಪುನರ್‌ರೂಪಿಸುವ ನಾಲ್ಕು ಪ್ರಾದೇಶಿಕ ನಮೂನೆ ಅಭಿವೃದ್ಧಿ ಕೇಂದ್ರಗಳು ದೆಹಲಿ, ಮುಂಬಯಿ, ಬೆಂಗಳೂರು ಮತ್ತು ಕಲ್ಕತ್ತಗಳಲ್ಲಿ ದ್ವಿತೀಯ ಯೋಜನೆ ಕಾಲದಲ್ಲಿ ಸ್ಥಾಪಿಸಲ್ಪಟ್ಟವು.

1957–58ರಲ್ಲಿ ಕುಶಲ ವಸ್ತುಗಳ ಸಹಕಾರ ಸಂಘಗಳ ಸಂಖ್ಯೆ 1000 ಇದ್ದುದು 1960–61ರಲ್ಲಿ ಸುಮಾರು 1,600ಕ್ಕೆ ಹೆಚ್ಚಿದೆ. ಇದರ ಜೊತೆಗೆ ಮಾರಾಟವನ್ನು ವಿಸ್ತರಿಸಲು 115 ಕುಶಲ ವಸ್ತುಗಳ ಅಂಗಡಿಗಳನ್ನು ಸಹ ತೆರೆಯಲಾಗಿದೆ.

ಪ್ರಥಮ ಯೋಜನೆಯಲ್ಲಿ, ವ್ಯವಸ್ಥಿತ ಅಂಗಡಿಗಳ ಮೂಲಕ ಕುಶಲ ವಸ್ತುಗಳ ಮಾರಾಟವು ವರ್ಷಕ್ಕೆ ಒಂದು ಕೋಟಿ ರೂ.ಗಳಿಗೂ ಕಡಿಮೆ ಇದ್ದುದು, ದ್ವಿತೀಯ ಯೋಜನೆಯಲ್ಲಿ ಅದು ವರ್ಷಕ್ಕೆ 2·50 ಕೋಟಿ ರೂ.ಗಳಿಗೆ ಹೆಚ್ಚಿದೆ. ವಿವಿಧ ಪ್ರಯತ್ನಗಳಿಂದ ಹಾಗೂ ಹೆಚ್ಚುತ್ತಿರುವ ಮಾರಾಟದಿಂದ ಕುಶಲ ಕರ್ಮಿಗಳು ವರ್ಷವಿಡೀ ತಮ್ಮ ಕೆಲಸದಲ್ಲಿ ನಿರತರಾಗಿರುವುದಕ್ಕೆ ಸಾಧ್ಯವಾಯಿತು.

——

ಅಮೆರಿಕದಲ್ಲಿ ವರ್ಣದ್ವೇಷ

ಭಾರತೀಯ ನೃತ್ಯಕಲಾವಿದರಿಗೆ ಹೊಟೇಲಿನಲ್ಲಿ ಆಕ್ಷೇಪಿಸಿದರು

ಕೆಲದಿನಗಳ ಹಿಂದೆ, ಸಂಯುಕ್ತ ಅಮೆರಿಕದಲ್ಲಿ, ನ್ಯೂಯೋರ್ಕ್ ನಗರದ ಏಷ್ಯಾ ಸೊಸೈಟಿಯವರ ಆಹ್ವಾನದಂತೆ ನೃತ್ಯ ಪ್ರದರ್ಶನಗಳನ್ನು ಕೊಡಲು ಹೋಗಿದ್ದ ಕೆಲ ಭಾರತೀಯ ನರ್ತಕರಿಗೆ, ಅವರ ಪ್ರವಾಸಿ ಮೆನೇಜರರು ಉತ್ತರ ಕೆರೊಲಿನದ ಚಾರ್ಲೊಟ್ಟೆ ಎಂಬಲ್ಲಿಯ ಒಂದು ಉಪಾಹಾರ ಗೃಹಕ್ಕೆ ಕರೆದೊಯ್ದಿದ್ದರು. ಅಲ್ಲಿ, ಇಬ್ಬರು ಅಮೆರಿಕನ್ ಗಿರಾಕಿಗಳು ಈ ಕರಿಯ ಭಾರತೀಯರ ಪ್ರವೇಶದ ಬಗ್ಗೆ ಆಕ್ಷೇಪಿಸಿದರು. ಪ್ರವಾಸೀ ಮೆನೇಜರರು, ಮೊದಲೇ, ಆ ಉಪಾಹಾರ ಗೃಹದ ಯಜಮಾನರೊಡನೆ ವಿಚಾರಿಸಿ ನಿಶ್ಚಯಿಸಿಯೇ ಈ ಭಾರತೀಯರನ್ನು ಕರೆದೊಯ್ದಿದ್ದರಂತೆ. ಆದಕಾರಣ, ಆ ಉಪಾಹಾರ ಗೃಹದ ಮೆನೇಜರರು ತಮ್ಮ ಮನಸ್ಸು ಬದಲಾಯಿಸಲಿಲ್ಲ. ಆದರೆ, ಅನಾವಶ್ಯಕ ಗೊಂದಲವೇಳಬಹುದೆಂದು ಚಿಂತಿಸಿ, ಪ್ರವಾಸೀ ಮೆನೇಜರರೇ ಆ ಭಾರತೀಯರನ್ನು ಉಪಾಹಾರ ಕೊಡದೆ ಬೇರೆಲ್ಲಿಗೋ ಕರೆದುಕೊಂಡು ಹೋದರು ಎಂದು ಪ್ರಕಟವಾಗಿದೆ. ಕೂಟದಲ್ಲಿದ್ದವರು ಒಟ್ಟು ಎಂಟು ಮಂದಿ.

ಏಷ್ಯಾ ಸೊಸೈಟಿಯವರು, ನ್ಯೂಯೋರ್ಕಿನಲ್ಲಿರುವ ಭಾರತ ಸರಕಾರದ ಸಾಂಸ್ಕೃತಿಕ ಪ್ರತಿನಿಧಿಯ ಗಮನಕ್ಕೆ ಈ ವಿಷಯವನ್ನು ತಂದಿರುವರು. ಆದರೆ, ಈ ವಿಷಯವು ಅಲ್ಲೇ ತಣ್ಣಗಾಗುವುದೆಂದು ಧಾರಾಳವಾಗಿ ಹೇಳಬಹುದು.

——

ಭಾರತದ ನಾಟಕ ಶಾಸ್ತ್ರ ಮತ್ತು ರಂಗಭೂಮಿ

ಸೋವಿಯಟ್ ರಷ್ಯ–ಭಾರತ ವಿದ್ಯಾವಿದರ ಲೇಖನ ಸಂಕಲನ

ರಶ್ಯದ ವಿಜ್ಞಾನ ಎಕೆಡೆಮಿಯ ಏಶ್ಯನ್ ಜನತೆಗಳ ಸಂಸ್ಥೆಯ ಸೋವಿಯತ್–ಭಾರತ ವಿದ್ಯಾವಿದರ ತಂಡವು, "ಭಾರತ ದೇಶದ ನಾಟಕಶಾಸ್ತ್ರ ಮತ್ತು ರಂಗಭೂಮಿ" ಎಂಬ ಲೇಖನಸಂಗ್ರಹವನ್ನು ಮುದ್ರಣಕ್ಕಾಗಿ ಸಿದ್ಧಗೊಳಿಸಿದೆ.

ರಾಷ್ಟ್ರೀಯ ರಂಗಮಂಚದ ಮತ್ತು ನಾಟಕಶಾಸ್ತ್ರದ ಉದಯ—ವಿಕಾಸಗಳು ಭಾರತೀಯ ಸಂಸ್ಕೃತಿ—ಕಲೆಗಳ ಇತಿಹಾಸದ ಕೇಂದ್ರೀಯ ಸಮಸ್ಯೆಗಳಾಗಿವೆಯೆಂದು ಸೋವಿಯತ್ ಭಾರತ ಶಾಸ್ತ್ರವಿದರು ಭಾವಿಸುತ್ತಾರೆ. ಈ ಸಮಸ್ಯೆಯು ತನ್ನ ಮಹತ್ವವನ್ನು ಈಗಲೂ ಕಳಕೊಂಡಿಲ್ಲ.

"ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿ ನಾಟಕ ಸಿದ್ಧಾಂತ" ಎಂಬ ಶೀರ್ಷಿಕೆಯ ಲೇಖನವನ್ನು ವ್ಲದಿಮಿರ್ ಎರ್ಮಾನ್ ಬರೆದಿದ್ದಾರೆ. ಭಾರತೀಯ ನಾಟಕಗಳಲ್ಲಿ ತೀವ್ರ ಸಂಘರ್ಷಗಳ ಅಭಾವವಿದೆಯೆಂಬ ಮಾತನ್ನು ಅವರು ತಿರಸ್ಕರಿಸಿದ್ದಾರೆ. ವಿಕಾಸದ ಮೊದಲ ಘಟ್ಟಗಳಲ್ಲಿ ಭಾರತೀಯ ನಾಟಕವು ಘಟನಾಭರಿತವಾಗಿದ್ದು, ವಿಷಾದಾಂತ ನಾಟಕಗಳೂ ಇರುತಿದ್ದುವು. ಭಾಸ ಮತ್ತು ವಿಶಾಖದತ್ತರ ಕೃತಿಗಳನ್ನು ಅವರು ಪರೀಕ್ಷಿಸಿಯೇ ಈ ತೀರ್ಮಾನಕ್ಕೆ ಬಂದರು.

ಮಿಲಿಜಾ ಬಬ್ಕಿಭಾರವರು ಭಾರತ ಮತ್ತು ಸಿಲೋನ್ ದೇಶಗಳ ಜನತೆಗಳ ಕೆಲವು ಮಾಜೀ ಪ್ರಾಥಮಿಕ ನಾಟಕ ಪ್ರದರ್ಶನಗಳ ಮೂಲದ ಕುರಿತು ಬರೆದಿದ್ದಾರೆ. ಭಾರತೀಯ ಮತ್ತು ರಷ್ಯನ್ ಮಾನವಕುಲ ವಿವರದ ಶಾಸ್ತ್ರೀಯ ಸಂಶೋಧನ ಯಾತ್ರೆಗಳಲ್ಲಿ ದೊರೆತ ಸಾಮಗ್ರಿಯನ್ನು ಅವರು ಬಳಸಿಕೊಂಡಿದ್ದಾರೆ. ——

ಸಾವಿರಾರು ಪತ್ರಿಕೆಗಳಲ್ಲಿ ನೆಹರುಗಳವರು

ಪಂಡಿತ ನೆಹರುಗಳವರು ಅಮೆರಿಕಕ್ಕೆ ತೆರಳಿದ್ದಾಗ, ಐವತ್ತು ಮಿಲಿಯ ಟೆಲಿವಿಝನ್ ಸೆಟ್‌ಗಳಲ್ಲಿ ಅವರನ್ನು ಅಲ್ಲಿಯ ಜನತೆ ಕಂಡಿತು. ಸಿನೆಮಗಳಲ್ಲಿ ಡೊಕ್ಯುಮೆಂಟರಿ ಚಿತ್ರಗಳಲ್ಲೂ, ಸಾವಿರಾರು ಸಾಪ್ತಾಹಿಕಗಳಲ್ಲಿ ಮತ್ತು ಮಾಸಿಕಗಳಲ್ಲೂ ಇವರ ಪಡಿಯಚ್ಚನ್ನು ಅಲ್ಲಿಯ ಜನತೆ ನೋಡಿದೆ. ರೆಡಿಯೋ ಹಾಗೂ ಟೆಲಿವಿಝನಿನಲ್ಲಿ ಅಮೆರಿಕದವರು ಅವರ ಸ್ವರವನ್ನು ಕೇಳಿದರು. ಕೆಲಿಫೋರ್ನಿಯಾ ವಿಶ್ವವಿದ್ಯಾನಿಲಯದಲ್ಲಿ ನೆಹರುಗಳವರನ್ನು ಭೇಟಿಯಾಗಲು ಸುಮಾರು 500 ಮಂದಿ ಭಾರತೀಯ ವಿದ್ಯಾರ್ಥಿಗಳನ್ನು ಆಹ್ವಾನಿಸಲಾಗಿತ್ತು; ಇವರ ಜತೆಯಲ್ಲಿ ಅಲ್ಲಿಯ ಸುಮಾರು 3500 ಅಮೆರಿಕನ್ ವಿದ್ಯಾರ್ಥಿಗಳೂ ಅವರನ್ನು ಸ್ವಾಗತಿಸಿ, ವಿದಾಯವಿತ್ತರು. ——

Printed at The Prabhat Printers, Ltd., Mangalore and Edited & Published at Prabhat Office, Car Street, Mangalore by K. V. Shenoy.